
ಸಂಪುಟ 22 ಸಂಚಿಕೆ 17
ಏಪ್ರಿಲ್ 23, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಪೆಕ್ಷ್ಯಾರಂಗ



ಪಟ್ಟಭದ್ರರು ಬೀಗುತ್ತಿದ್ದಾರೆ

- ಡಾ॥ ಅಂಬೇಡ್ಕರ್

ಕ್ರಿಕೆಟ್ ಬೆಟ್ಟಿಂಗ್ ಮಾಫಿಯಾ



ರೈತರ ಬೆಂಗಾವಲು ಕೋಟೆಕಾರ್ ವ್ಯವಸಾಯ ಬ್ಯಾಂಕ್

ಹಾಸ್ಯದ ಹರಿಗೋಲು
ಹೇರಾಪೇರಿ

ರಾಜ್ಯಪಾಲರಿಗಾದ ಅಪಮಾನ : ಸಚಿವರ ಸಂವಿಧಾನೇತರ ನಿಷ್ಠೆ ಖಂಡನೀಯ

ಹುಬ್ಬಳ್ಳಿಯಲ್ಲಿ ಪಂಚಾಚಾರ್ಯರ ಯುಗಮಾನೋತ್ಸವದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕದ ರಾಜ್ಯಪಾಲರಾಗಿರುವ ವಿ.ಎಸ್. ರಮಾದೇವಿಯವರಿಗೆ ಸೂಕ್ತವಾದ ರೀತಿಯಲ್ಲಿ ಆಸನದ ವ್ಯವಸ್ಥೆ ಮಾಡದೇ ಕೆಳಗೆ ಕೂಡಿಸಿ ಅವಮಾನ ಮಾಡಿರುವುದು ಖಂಡನೀಯ. ಇದು ಕೇವಲ 'ಭ್ರಷ್ಟಾಚಾರ'ವನ್ನು ಪರಿಪಾಲಿಸದೇ ಇರುವ ಪ್ರಕರಣ ಮಾತ್ರವಾಗಿರದೇ ಸಂವಿಧಾನತ್ಮಕವಾಗಿ ರಾಜ್ಯದಲ್ಲಿ ಮೇಲು ಮಟ್ಟದ ಸ್ಥಾನ ಹೊಂದಿದ, ಐದು ಕೋಟಿ ಪ್ರಜೆಗಳಲ್ಲಿ, ಪ್ರಥಮ ಪ್ರಜೆಯೆಂದು ಗುರುತಿಸಲಾಗುವ. ರಾಜ್ಯಪಾಲರ ಸ್ಥಾನಕ್ಕೆ ಮಾಡಿದ ಅವಮಾನವಾಗಿದೆ. ಈ ಮೂಲಕ ಪ್ರಜಾಪ್ರಭುತ್ವದ ಪದ್ಧತಿಗೆ ಕಳಂಕ ತರಲಾಗಿದೆ.

ಪ್ರಜಾಪ್ರಭುತ್ವದಲ್ಲಿ ಸಂವಿಧಾನಾತ್ಮಕ ಸ್ಥಾನವೇ ಆದ್ಯತೆಯದು ಮತ್ತು ಹಿರಿದು. ನಮ್ಮ ನಾಡಿನ ಪ್ರಜೆಗಳ ಪ್ರತಿನಿಧಿಗಳು ಈಗಿರುವ ಸರ್ಕಾರ, ಅದರ ಎಲ್ಲಾ ಆದ್ಯತೆ, ಆಡಳಿತ ನೀತಿ-ನಿರ್ದೇಶನಗಳು ಇರುವುದು ಸಂವಿಧಾನದಲ್ಲೇ. ಅದೇ ಪರಮೋಚ್ಛವಾದುದು ಹೀಗೆ ಇಂದಿನ ವ್ಯವಸ್ಥೆಯಲ್ಲಿ ರಾಜ್ಯಪಾಲರು ಅದರ ಸಾಂಕೇತಿಕ ಪ್ರತಿನಿಧಿಗಳು. ಏನಿದ್ದರೂ ಈ 'ಜಗದ್ಗುರುಗಳು' ಕೇವಲ ಒಬ್ಬ ಪ್ರಜೆಗಳು ಎಂಬುದನ್ನು ಮರೆಯಬಾರದು.

ರಾಜ್ಯಪಾಲರ ಸ್ಥಾನಕ್ಕೆ ಅಗೌರವ ಉಂಟುಮಾಡುವ ಈ ಘಟನೆ ನಡೆದದ್ದೆ ರಾಜ್ಯ ಸರ್ಕಾರದ ಕ್ಯಾಬಿನೆಟ್ ಸಚಿವರಿಂದ ಎಂದು ವರದಿಯಿದೆ. ಸಮಾರಂಭಕ್ಕೆ

ಸಂಪಾದಕೀಯ

ಬಂದಿದ್ದ ಸಚಿವ ಕಾಶಪ್ಪನವರು 'ಶಿಷ್ಟಾಚಾರದನ್ವಯ' ಸ್ವಾಮಿಗಳ ಜೊತೆಗೆ ಹಾಕಲಾಗಿದ್ದ ಆಸನವನ್ನು ತೆಗೆಸಿ, ಸ್ವಾಮಿಗಳು ಕುಳಿತಿದ್ದ ವೇದಿಕೆಯ, ಒಂದೂವರೆ ಅಡಿ ಕೆಳಗೆ ಹಾಕಲು ಆಜ್ಞೆ ಮಾಡಿದರಂತೆ. ಅಂದರೆ ಸಂಪುಟ ದರ್ಜೆಯ ಸಚಿವರು ರಾಜ್ಯದ ರಾಜ್ಯಪಾಲರ ಸ್ಥಾನವನ್ನು ನಗಣ್ಯಗೊಳಿಸಿ ಮಠಾಧಿಪತಿಗಳನ್ನೇ ಮೆರೆಸಿ ಅವಿವೇಕತನ ಹಾಗೂ ಅಹಂಕಾರದ ವರ್ತನೆಯನ್ನೂ ತೋರಿದ್ದಾರೆ. ಸಚಿವರಾದ ಇವರಿಗೆ ಕನಿಷ್ಠ ಶಿಷ್ಟಾಚಾರದ ಅರಿವು ಇರಲಿಲ್ಲವೇ? ತಾನೊಬ್ಬ ಇಡೀ ಜನತೆಯ ಪ್ರತಿನಿಧಿ ಎಂಬ ನೆನಪೂ ಇಲ್ಲದೇ ಒಂದು ಜಾತಿಯ ಪ್ರತಿನಿಧಿಯೆಂಬಂತೆ ನಡೆದುಕೊಂಡ ಇಂತಹವರು ಸಂಪುಟದಲ್ಲಿ ಯಾಕೆ ಮುಂದುವರಿಯಬೇಕೆಂದು ಸದನದಲ್ಲಿ ಪ್ರಶ್ನೆ ಎತ್ತಲಾಗಿದೆ.

ತಾವು ಪ್ರಮಾಣವಚನ ಸ್ವೀಕರಿಸಿದ ಸಂವಿಧಾನ ನಿಷ್ಠೆಗಿಂತ ತಮ್ಮ ಜಾತಿಯ ಮಠಾಧಿಪತಿಗಳೇ ಮೇಲು ಎಂಬ ನೀವು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ತಮ್ಮ ಧಾರ್ಮಿಕ ನಂಬಿಕೆಗಳನ್ನು ವೈಯಕ್ತಿಕವಾಗಿ ಬೇಕಾದರೆ ಆಚರಿಸಿಕೊಳ್ಳಲಿ. ಆದರೆ ಇಂತಹ ಉದ್ಧಟತನ ಸರಿಯಲ್ಲ. ಇತ್ತೀಚಿನ ದಿನಗಳಲ್ಲಂತೂ ಇಂತಹ ಸಂವಿಧಾನೇತರ ಶಕ್ತಿ-ವ್ಯಕ್ತಿಗಳಿಗೆ ತಲೆಬಾಗುವ ಪ್ರವೃತ್ತಿ ಹೆಚ್ಚುತ್ತಿದೆ. ಮುಖ್ಯಮಂತ್ರಿ (ವಿದ್ಯಾಮಂತ್ರಿಯಾಗಿಯೂ) ಒಳಗೊಂಡು ಸರ್ಕಾರದ ಸಚಿವರು ರಾಜಾರೋಷವಾಗಿ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು, ಅವರನ್ನು ಅವರ ಘನ ಕಾರ್ಯಗಳನ್ನು' ಹಾಡಿ ಹೊಗಳುವುದು. ಇಲ್ಲದೇ ಹೋದರೆ ಈ ಜಾತಿಯ ಬೆಂಬಲ ಎಲ್ಲಿ ತಪ್ಪುವದೋ ಅಥವಾ ದೂರವಾಗುವದೋ ಎಂದು ಸ್ವಾರ್ಥದ ಲೆಕ್ಕಾಚಾರ. ಹೀಗೆ ಶಿಕ್ಷಣದ ವ್ಯಾಪಾರದಲ್ಲಿ ತೊಡಗಿರುವ, ಸರ್ಕಾರದ ಕಾನೂನುಗಳನ್ನು ನಿರ್ದೇಶನಗಳನ್ನು ನಿರ್ಲಕ್ಷಿಸಿರುವ ಕೆಲವು ಸಂಸ್ಥೆಗಳನ್ನು ಎಚ್ಚರಿಸಿದ ಶಿಕ್ಷಣ ಸಚಿವರನ್ನು ಮುಖ್ಯಮಂತ್ರಿಗಳ ಎದುರಲ್ಲೇ ಮಠಾಧೀಶರು ತರಾಟೆ ತೆಗೆದುಕೊಂಡದ್ದು, ಅದಕ್ಕೆ ಮುಖ್ಯಮಂತ್ರಿಗಳು ತಲೆಬಾಗಿದ್ದು ನಾಚಿಕೆಗೇಡಿನ ಪ್ರಸಂಗ ಎಲ್ಲರ ನೆನಪಿನಲ್ಲಿದೆ. ಜಾತಿಯ ಬಲದಿಂದಲೇ ಮಂತ್ರಿ ಸ್ಥಾನ ಪಡೆದವರು ಸದಾ ಈ ಪಾಳೇಗಾರಿ ಪಳೆಯುಳಿಕೆಯ ಆಶ್ರಯದಲ್ಲೆ ಬದುಕು ನೂಕಬಯಸುತ್ತಾರೆ.

ಜಗತ್ತಿಗೆ ಗುರುವೆಂದು ಸಾರಿಕೊಳ್ಳುವ ಈ ಮಠಾಧೀಶರೂ ಮತ್ತು ಮಠಗಳ ನೆಲೆ-ಹಿನ್ನೆಲೆಗಳನ್ನು ಸ್ವಲ್ಪ ಕೆದಕಿದರೂ ಸಾಕು ಗಬ್ಬುನಾರುವ ಚರಿತ್ರೆಯೇ ಹೊರಬರುತ್ತದೆ. ಪೀಠಾಧಿಕಾರ, ಆಸ್ತಿ ಮೇಲಿನ ಹಿಡಿತದ ಮೋಹಗಳಿಗಾಗಿ ಎಷ್ಟೊಂದು ಕಿತ್ತಾಟ, ಕದನಗಳು ನಡೆದಿವೆ, ನಡೆಯುತ್ತಿವೆ. ಈ ಪಂಚಪೀಠಗಳಲ್ಲಿ ಕೆಲವು ಗುರುಗಳ ಸಾವು ಶಂಕಾಸ್ಪದವಾಗಿ ಕಾಡಿದೆ. ಹಿಂದೆ ಸಮಾಜ ಮುಖಿಗಳಾಗಿದ್ದ ಕೆಲವು ಮಠಗಳು ಸಹ ಸ್ವಪ್ರತಿಷ್ಠೆ, ವೈಭೋಗಗಳ ತಾಣವಾಗುತ್ತಿವೆ. ಅದರಲ್ಲಿ ಈ ಪಂಚ ಪೀಠಗಳ ಉತ್ಸವ, ಅಡ್ಡಪಲ್ಲಕ್ಕಿ ಮಹೋತ್ಸವ ಬಿಟ್ಟರೆ ಬೇರೆಲ್ಲೂ ತಮ್ಮನ್ನು ತೊಡಗಿಸಿಕೊಂಡಿಲ್ಲ. ಬಹಳ ಮುಖ್ಯವಾಗಿ ತಾನೇ ವೀರಶೈವರ ಪರಂಪರೆಯ ಮೂಲ ಪುರುಷರು ಎಂದು ಸಾರಿಕೊಳ್ಳುವ ಈ ಪೀಠಗಳು ಬಸವಾದಿ ಪ್ರಥಮರ ಪ್ರಗತಿಪರ ವೀರಶೈವ ಚಳುವಳಿಯ ವಿರುದ್ಧವೇ ಅವರ ಅವಸಾನ ಬಯಸಿ, ಚಾತುರ್ವರ್ಣದ ವೈಧಿಕ ಪರಂಪರೆಯನ್ನೇ ಆಧಾರವಾಗಿಟ್ಟುಕೊಂಡು ಪ್ರತಿಗಾಮಿಗಳಾಗಿ ಹೊರಟಿವೆ.

ಹುಬ್ಬಳ್ಳಿಯಲ್ಲಿ ನಡೆದ ಈ ಘಟನೆಯ ಬಗ್ಗೆ ಮುಖ್ಯಮಂತ್ರಿ ಕೃಷ್ಣರವರು ಗಂಭೀರವಾಗಿ ತೆಗೆದುಕೊಂಡು ಆಗಿರುವ ತಪ್ಪಿನ ಬಗ್ಗೆ ಜನತೆಯಲ್ಲಿ ವಿವರಿಸಬೇಕು. ಇಲ್ಲವಾದಲ್ಲಿ ಪ್ರಜಾಪ್ರಭುತ್ವ, ಸಂವಿಧಾನದ ಪರಮೋಚ್ಚತೆಯನ್ನು ನಿರಾಕರಿಸಿ, ಸಂವಿಧಾನಿಕ ಕ್ರಮಗಳನ್ನು ಗಾಳಿಗೆ ತೂರಿ, ಮನಬಂದಂತೆ ಚರ್ಚಿಸುವ ಪರಿಪಾಠ ಬೆಳೆಯುವ ಅಪಾಯಕ್ಕೆ ಸಮ್ಮತಿ ದೊರೆತಂತೆ ಆದೀತು. ಇದನ್ನು ಎಲ್ಲ ಪ್ರಜಾಪ್ರಭುತ್ವವಾದಿಗಳೂ ಪ್ರತಿಭಟಿಸಬೇಕು.



ಜಾಗತೀಕರಣ ಈ ವಾರ - ನಮ್ಮ ನಿಮ್ಮನ್ನು ಬಾಧಿಸಿದ ಪರಿ

ಬೊಲಿವಿಯದಲ್ಲಿ ನೀರು ಖಾಸಗೀಕರಣದ ಬಗ್ಗೆ ಯುದ್ಧ ಹಿಂತೆಗೆದ ಅಮೆರಿಕನ್ ಕಂಪನಿ

ಜಾಗತೀಕರಣ ನಮ್ಮ-ನಿಮ್ಮನ್ನು ಎಲ್ಲೆಲ್ಲೂ ಬಾಧಿಸುತ್ತಿದೆ. ಹಾನಗಲ್ಲಿನ ಕೃಷಿಕೂಲಿಗಾರ, ಮಂಡ್ಯದ ರೈತ, ಬೆಂಗಳೂರಿನ ಕಾರ್ಮಿಕ, ಬ್ರಿಟನ್‌ನ ಲ್ಯಾಂಡ್ ರೋವರ್‌ನ ಕಾರ್ಮಿಕ, ಚಿಯಾಪಾಸ್‌ನ ಆದಿವಾಸಿ-ಎಲ್ಲರನ್ನೂ ಕಾಡುತ್ತದೆ. ಜಾಗತೀಕರಣ ಬಾಧಿಸುವ ಪರಿ, ಅದರ ತೀವ್ರತೆ, ಅದರ ವಿರುದ್ಧ ಹೋರಾಟ ಎಲ್ಲೆಲ್ಲೂ ನಡೆಯುತ್ತಿದೆ. ಪ್ರತಿವಾರ 'ಜಾಗತೀಕರಣ ಈ ವಾರ' ನಿಮಗೆ ಆ ವಾರದಲ್ಲಿ ಗಮನ ಸೆಳೆದದ್ದನ್ನು ನಿಮ್ಮ ಮುಂದಿಡಬಯಸುತ್ತದೆ.

ಮೊದಲ ಕಂತಾಗಿ ಈ ವಾರ ಬೊಲಿವಿಯಾ ಎಂಬ ದಕ್ಷಿಣ ಅಮೆರಿಕಾದ ದೇಶವೊಂದರ ಕೊಚಬಾಂಬ ಎಂಬ ಪಟ್ಟಣದಲ್ಲಿ ನೀರಿನ ಖಾಸಗೀಕರಣದ, ವಿದೇಶಿ ಕಂಪನಿಯೊಂದಕ್ಕೆ ನೀರಿನ ಒಡೆತನ ಕೊಟ್ಟದ್ದರ ವಿರುದ್ಧ ನಡೆಸಿದ ಹೋರಾಟ, ತುರ್ತು ಪರಿಸ್ಥಿತಿ ಹೇರಿದರೂ ಕೊನೆಗೆ ಹಿಂಜರಿಯಬೇಕಾದ್ದರ ಬಗ್ಗೆ.

— ಶರತ್‌ಚಂದ್ರ



ಕೊಚಬಾಂಬಾ ದಕ್ಷಿಣ ಅಮೆರಿಕದ ಬೊಲಿವಿಯಾದಲ್ಲೊಂದು ಪಟ್ಟಣ. ಈವಾರ ಈ ಪಟ್ಟಣದ ಕೇಂದ್ರಭಾಗ ರಣಾಂಗಣವಾಗಿತ್ತು. ಸಾವಿರಾರು ರೈತರು, ಕಾರ್ಮಿಕರು, ಪರಿಸರವಾದಿಗಳು, ಸಣ್ಣ ಅಂಗಡಿದಾರರು, ವಿದ್ಯಾರ್ಥಿಗಳು ನಾಗರೀಕರು ಹಲವು ದಿನಗಳ ಕಾಲ ನಗರ ಕೇಂದ್ರ ವಶಪಡಿಸಿಕೊಂಡರು. ಅವರು ಪಟ್ಟಣದ ನೀರು ಪೂರೈಕೆಯನ್ನು ಖಾಸಗೀಕರಿಸಿ ವಹಿಸಿಕೊಂಡ ವಿದೇಶಿ ಕಂಪನಿಯೊಂದು ಬೆಲೆಯನ್ನು ಎರಡು-ಮೂರು ಪಟ್ಟು ಏರಿಸಿದ್ದು ವಿರೋಧಿಸುತ್ತಿದ್ದರು. ಅಲ್ಲದೆ ಸರ್ಕಾರ ಗ್ರಾಮೀಣ ಪ್ರದೇಶಗಳಲ್ಲೂ, ನೀರನ್ನು ರೈತರು, ಆದಿವಾಸಿಗಳು ಮುಕ್ತವಾಗಿ ಬಳಸುವುದರ ಬಗ್ಗೆ ನಿರ್ಬಂಧ ಹೇರಿ ಪರ್ಮಿಟ್ ಜಾರಿ ಮಾಡುವ ಕಾನೂನು ಜಾರಿಗೆ ತಂದದ್ದನ್ನು ವಿರೋಧಿಸುತ್ತಿದ್ದರು. ಹಲವು ದಿನಗಳಕಾಲ ಪಟ್ಟಣವನ್ನು 'ಬಂದ್' ಗೊಳಿಸಿದ ಈ ಪ್ರತಿಭಟನೆಗೆ ಮುಗಿದು ಸರ್ಕಾರ ನೀರಿನ ಬೆಲೆ ಏರಿಕೆಯನ್ನು ಹಿಂತೆಗೆದುಕೊಂಡು, ಖಾಸಗೀಕರಣ ರದ್ದು ಮಾಡಿ ವಿದೇಶಿ ಕಂಪನಿ ನೀರಿನ ಪೂರೈಕೆ ಒಡೆತನ ಸರ್ಕಾರಕ್ಕೆ ಒಪ್ಪಿಸಿ ಹಿಂತೆಗೆದಿದೆ ಎಂದು ಪ್ರಕಟಿಸಿತು. ಜನ ಈ ಬಾರಿ ವಿಜಯವನ್ನು ಆಚರಿಸುತ್ತಿದ್ದಂತೆ, ಅಧ್ಯಕ್ಷ ಹ್ಯೂಗೋ ಬಾನ್ಸರ್ ಪಟ್ಟಣದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿ, ಮಿಲಿಟರಿ ಆಡಳಿತ ತಂದರು. ಮಾತುಕತೆಗೆ ಬಂದ ನಾಯಕರನ್ನು ಬಂಧಿಸಲಾಯಿತು. ಆದರೆ ಪಟ್ಟಣ ಸ್ತಬ್ಧಗೊಳಿಸಿದ ಪ್ರತಿಭಟನೆ ಮುಂದುರಿಯಿತು. ಪುನಃ ಅಧ್ಯಕ್ಷರು ನೀರಿನ ಖಾಸಗೀಕರಣ, ಬೆಲೆ ಏರಿಕೆ, ಗ್ರಾಮೀಣ ನೀರು ಬಳಕೆ ವಿರುದ್ಧ ಪ್ರತಿಬಂಧ ಹೇರುವ ಕಾನೂನು ಹಿಂದೆಗೆಯುವ ಭರವಸೆ ಕೊಡಬೇಕಾಯಿತು.



1999 ರ ಜೂನ್‌ನಲ್ಲೇ IWL ಎಂಬ ವಿದೇಶಿ ಕಂಪನಿಗೆ ಕೊಚಬಾಂಬಾ ಪಟ್ಟಣದ ನೀರು ಪೂರೈಕೆ ಒಪ್ಪಿಸುವ ಬೊಲಿವಿಯಾ ಸರ್ಕಾರದ ನಿರ್ಧಾರ ಈ ಇಡೀ ಘಟನಾವಳಿಗೆ ಕಿಡಿಯಾಗಿತ್ತು. ಕಳೆದ ಹಲವು ವರ್ಷಗಳಿಂದ ವಿಶ್ವಬ್ಯಾಂಕ್ - ಐಎಂಎಫ್ ಗಳ ಶರತ್ತಿಗೆ ತಲೆಬಾಗಿ (ಬೇರೆ ದಕ್ಷಿಣ ಅಮೆರಿಕಾ ದೇಶಗಳಂತೆ) ಬೊಲಿವಿಯಾದಲ್ಲೂ ಒಂದೊಂದಾಗಿ ಸಾರ್ವಜನಿಕ ಆಸ್ತಿ, ಸೇವೆಗಳನ್ನು ಖಾಸಗೀಕರಿಸಿ, ವಿದೇಶಿ ಕಂಪನಿಗಳಿಗೆ ಮೂರು ಕಾಸಿಗೆ ಮಾರಲಾಗಿತ್ತು. ರೈಲು, ವಿಮಾನಯಾನ, ವಿದ್ಯುತ್, ಈಗ್ಗಾಗಲೇ ಖಾಸಗೀಕರಿಸಲಾಯಿತು. ಲಕ್ಷಾಂತರ ಡಾಲರು ಬೆಲೆ ಬಾಳುವ ನೀರು ಪೂರೈಕೆ ವ್ಯವಸ್ಥೆಯನ್ನು ಕೇವಲ 20 ಸಾವಿರ ಡಾಲರಿಗೆ ಬ್ರಿಟಿಷ್ ಕಂಪನಿ IWL ಗೆ ಮಾರಲಾಯಿತು ಎಂದು ಈಗ ತಿಳಿದುಬಂದಿದೆ. ಇದರಲ್ಲಿ ಅಮೆರಿಕದ ಸಾನ್‌ಫ್ರಾನ್ಸಿಸ್ಕೋದಲ್ಲಿ ನೆಲೆ ಇರುವ ಬೆಕ್‌ಡೆಲ್ ಕಾರ್ಪೋರೇಷನ್‌ದ್ದೇ ಪ್ರದಾನ ಹಿಡಿತ ಎಂದು ಗೊತ್ತಾಗಿದೆ.

ಜನವರಿಯಲ್ಲಿ ನೀರಿನ ಬೆಲೆಯನ್ನು IWL ಎರಡರಿಂದ ಮೂರು ಪಟ್ಟು ಏರಿತು. ಬಡ ಕುಟುಂಬವೊಂದರ ನೀರಿನ ಬಿಲ್ 12 ಡಾಲರು ಇದ್ದದ್ದು 30 ಡಾಲರಿಗೆ ಏರಿತು. ತಿಂಗಳ ನೀರಿನ ಬಿಲ್ 5 ಡಾಲರು ಇದ್ದದ್ದು 20 ಡಾಲರಿಗೇರಿತು. ತಿಂಗಳ ಕನಿಷ್ಟ ವೇತನ ಬೊಲಿವಿಯಾದಲ್ಲಿ 100 ಡಾಲರು, ಎಂದು ನೆನಸಿ ಕೊಂಡರೆ ನೀರಿನ ಖಾಸಗೀಕರಣ ದಿಂದ ಆದ ಬೆಲೆ ಏರಿಕೆ ಎಷ್ಟು ಘೋರವಾಗಿತ್ತು ಎಂದು ಗೊತ್ತಾಗುತ್ತದೆ. ಬಡ ಕುಟುಂಬದ ಆಹಾರದ ಖರ್ಚು ಸುಮಾರು 40 ಡಾಲರು ಎದು ಗೊತ್ತಾದಾಗಲೂ ನೀರಿನ ಈ ದುಬಾರಿ ಬೆಲೆಯ ಅಂದಾಜು ಆಗುತ್ತದೆ. ಇದರಿಂದಾಗೇ ಈ ರೀತಿ ಕೋಪ ಭುಗಿಲೆದ್ದದ್ದು.

ನೀರಿನ ಖಾಸಗೀಕರಣದ ವಿರುದ್ಧ ಹೋರಾಟದಲ್ಲಿ 175 ಜನ ತೀವ್ರವಾಗಿ ಗಾಯಗೊಂಡಿದ್ದಾರಂತೆ. ಕನಿಷ್ಠ 35 ಜನ ಸತ್ತಿದ್ದಾರೆ. ಇಬ್ಬರು ಅಶ್ರುವಾಯು ಸಿಡಿತದಿಂದ ಪೂರ್ಣ ಕುರುಡಾಗಿದ್ದಾರಂತೆ. ಹಲವರು ಬಂಧಿತರಾಗಿದ್ದಾರೆ. ಹಲವು ನಾಯಕರು ಈಗಲೂ ಭೂಗತರಾಗಿದ್ದಾರೆ. 1971-78 ರ ಅವಧಿಯಲ್ಲಿ ಬೊಲಿವಿಯಾದ ಕುಖ್ಯಾತ ಸರ್ವಾಧಿಕಾರಿ ಯಾಗಿದ್ದ ಹ್ಯೂಗೊ ಬಾನ್ಸರ್ ಅಧ್ಯಕ್ಷ ನಾಗಿದ್ದು, ಆತ ಅತ್ಯಂತ ದಮನ ಕಾರಿ ತಂತ್ರಗಳನ್ನು ಬಳಸಿದ ಜನರ ತೀವ್ರ ಪ್ರತಿಭಟನೆಯ ವಿರುದ್ಧ ಸೈನ್ಯ ಬಳಸಿದಾಗ ರಕ್ತಪಾತವಾಗುವುದೆಂದು ಪಟ್ಟಣದ ಗವರ್ನರ್ ರಾಜೀನಾಮೆ ನೀಡಿದ್ದು, ಅಧ್ಯಕ್ಷ ಬ್ಯಾನ್ಸರ್ ಮೊದಲು ಪೋಲಿಸ್ ಕಮಿಷನರ್‌ನ್ನು, ಆಮೇಲೆ ಸೇನಾ ಜನರಲ್ ಒಬ್ಬನನ್ನು ಗವರ್ನರ್ ಆಗಿ ನೇಮಿಸಿದ್ದ. ಜನರ ಹೋರಾಟಕ್ಕೆ ಜಯ ದೊರೆತಂತೆ ಕಂಡಿದೆ. ಆದರೆ ಬಿಚಟೆಲ್ ಕಾರ್ಪೋರೇಷನ್ ಬೊಲಿವಿಯಾ ಸರ್ಕಾರದ ವಿರುದ್ಧ ಒಪ್ಪಂದ ಉಲ್ಲಂಘನೆ, ಅದಕ್ಕೆ ಪರಿಹಾರಕ್ಕೆ ವ್ಯಾಜ್ಯ ಹೂಡಬಹುದು ಎಂದು ತೀವ್ರ ಸುದ್ದಿ ಹರಡಿದೆ. ಬಿಚಟೆಲ್ ಕಾರ್ಪೋರೇಷನ್ ಬಗ್ಗೆ ಬೊಲಿವಿಯಾದ ಜನ ಇನ್ನೂ ಜಾಗರೂಕರಾಗಿದ್ದಾರೆ.


ಬಾಗೇಪಲ್ಲಿಯಲ್ಲಿ ಜೆ.ಎಂ.ಎಸ್. ಸಮಾವೇಶ

ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಅತ್ಯಂತ ಗಮನಾರ್ಹವಾದದ್ದು. ಅದಕ್ಕಿಂತಲೂ ಮುಖ್ಯವಾಗಿ ನಮ್ಮ ದೇಶದಲ್ಲಿ ಮಹಿಳೆಯನ್ನು ಹೂವಿಗೆ ಹೋಲಿಸಿ ಪವಿತ್ರ ಸ್ಥಾನವನ್ನು ಕಲ್ಪಿಸಿದ್ದಾರೆ. ಆದರೆ, ಅತ್ಯಂತ ಶೋಷಣೆಗೆ ಒಳಪಟ್ಟಿರುವ ಜನವಿಭಾಗ ಮಹಿಳೆಯರು. ಆಸ್ತಿಯ ಹಕ್ಕನ್ನು, ಶಿಕ್ಷಣವನ್ನು ನಿರಾಕರಿಸಿದ ನಮ್ಮ ಸಮಾಜದಲ್ಲಿ ನಾಲ್ಕು ಗೋಡೆಗಳ ಮಧ್ಯೆ ಪುರುಷನ ಆಸೆಗಳನ್ನು ಈಡೇರಿಸುವ ಒಂದು ಸುಂದರ ವಸ್ತುವನ್ನಾಗಿ ಮಾಡಿಟ್ಟಿದ್ದಾರೆ. ಇಂದು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಸ್ತ್ರೀಯರ ಸುಂದರ ಶರೀರವನ್ನು ಬಂಡವಾಳಸ್ಥರ ವಸ್ತುಗಳ ಮಾರಾಟಕ್ಕಾಗಿ ಉಪಯೋಗಿಸಿಕೊಳ್ಳುವ ಹೀನಸ್ಥಿತಿಗೆ ಈ ವ್ಯವಸ್ಥೆ ಇಳಿದಿದೆ. ಮಹಿಳೆ ಆರ್ಥಿಕವಾಗಿ ಸ್ವತಂತ್ರವಾಗದೆ, ಸಾಮಾಜಿಕವಾಗಿ ಬೆಳೆಯದೇ ಈ ವ್ಯವಸ್ಥೆ ನಿಯಂತ್ರಿಸುತ್ತಾ ಬರುತ್ತಿದೆ. ಇತಿಹಾಸದಲ್ಲಿ ಮಹಿಳಾ ರಾಣಿಯರು ಬಂದುಹೋದರು, ಮಹಿಳಾ ಪ್ರಧಾನಮಂತ್ರಿಗಳು ಬಂದು ಹೋದರು. ಆದರೆ ಮಹಿಳೆಗೆ ಇರುವ ಹಲವಾರು ಸಮಸ್ಯೆಗಳ ಬಗ್ಗೆ ಚಕಾರವೆತ್ತದೆ, ಅವರ ರಕ್ಷಣೆಗೊಂದು ಕಾನೂನು ರಚಿಸಲಾಗಿಲ್ಲ.

ಮಹಿಳೆಯರನ್ನು ಹಲವಾರು ಸಂಕೋಲೆಗಳಿಂದ ವಿಮೋಚನೆ ಮಾಡಿಸಲು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ನಿರಂತರ ಪ್ರಯತ್ನ ಮಾಡುತ್ತಿದೆ. ದೇಶಾದ್ಯಂತ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ದನಿಯೆತ್ತಿ ಮಾತನಾಡುತ್ತಾ ತನ್ನ ಸಂಘಟನೆಯನ್ನು ಹಳ್ಳಿಹಳ್ಳಿಗೂ ತೆಗೆದುಕೊಂಡು ಹೋಗುತ್ತಿದೆ. ಆ ನಿಟ್ಟಿನಲ್ಲಿ ಒಂದು ಸಣ್ಣ ಪ್ರಯತ್ನವಾಗಿ ಏಪ್ರಿಲ್ 13 ರಂದು ಬಾಗೇಪಲ್ಲಿಯ ಗಡಿದಂನಲ್ಲಿ ಕೋಲಾರ ಜಿಲ್ಲಾ ಸಂಘಟನಾ ಸಮಾವೇಶವೊಂದು ಅತ್ಯಂತ ಯಶಸ್ವಿಯಾಗಿ ನಡೆಯಿತು. ಸಮಾವೇಶ ಜಿಲ್ಲಾ ಸಂಘಟನಾ ಸಮಿತಿಯನ್ನು ಕೂಡಾ ರಚಿಸಿತು.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿಯಾದ ಕಾಂ. ಬೃಂದಾಕಾರಟ್‌ರವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸ್ತ್ರೀಯರ ಹಲವಾರು ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು. ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ದಾರಿ ಹೋರಾಟವೊಂದೇ, ಹೋರಾಟ ಮಾಡಬೇಕಾದರೆ ಸಂಘಟನೆ ಬಹಳ ಮುಖ್ಯ. ಪ್ರತೀ ಹಳ್ಳಿಯಲ್ಲಿ ಮಹಿಳೆಯರನ್ನು ಅವರ ಸಮಸ್ಯೆಗಳ ವಿರುದ್ಧ ಸಂಘಟಿಸಬೇಕೆಂದು ಕರೆ ನೀಡಿದರು. ವಾಜಪೇಯಿ ಸರಕಾರದ ಹೊಸ ಆರ್ಥಿಕ ನೀತಿ ಪೂರ್ಣವಾಗಿ ಮಹಿಳಾ ವಿರೋಧಿ ಆಗಿದೆಯೆಂದು ತಿಳಿಸಿದರು. ಸಾಮಾನ್ಯ ಸ್ತ್ರೀಗೆ ಅವಶ್ಯವಿರುವ, ಸೀಮೆಎಣ್ಣೆ, ಗ್ಯಾಸ್ ದರ, ಅಕ್ಕಿ, ಎಣ್ಣೆ ಮತ್ತಿತರ ವಸ್ತುಗಳ ಬೆಲೆ ಗಗನಕ್ಕೇರಿ ಸಾಮಾನ್ಯರಿಗೆ ಕೈಗೆಟುಕದಂತೆ ಮಾಡಿದ್ದಾರೆ.

ಇಂದು ಗ್ರಾಮ ಪಂಚಾಯ್ತಿಗಳಲ್ಲಿ ಆರಿಸಿ ಬಂದಿರುವ ಮಹಿಳಾ ಬಂಧುಗಳು ಅವರ ಅಧಿಕಾರವನ್ನು ಉಪಯೋಗಿಸಿ ಅವರೇ ಸ್ವತಃ ಪಾಲ್ಗೊಳ್ಳುವಂತೆ ಕರೆ ನೀಡಿದರು. ಅವರ ಹೆಸರಿನಲ್ಲಿ ಅವರ ಗಂಡಂದಿರು ಅಧಿಕಾರ ದುರುಪಯೋಗಪಡಿಸಿಕೊಳ್ಳುತ್ತಿರುವುದನ್ನು ಉದಾಹರಣೆಗಳ ಸಹಿತ ತಿಳಿಸಿದರು. ಕೇರಳ ಮತ್ತು ಪಶ್ಚಿಮ ಬಂಗಾಳ ಹಾಗೂ ತ್ರಿಪುರಾ ರಾಜ್ಯಗಳಲ್ಲಿ ಗ್ರಾಮ ಪಂಚಾಯ್ತಿಗಳಲ್ಲಿ ಮಹಿಳೆಯ ಪಾತ್ರದ ಬಗ್ಗೆ, ಗ್ರಾಮ ಸಭೆಗಳ ನಿರ್ವಹಣೆ ಬಗ್ಗೆ ಆದರಲ್ಲಿ ಮಹಿಳೆಯರು ಪಾಲ್ಗೊಂಡು



ತೀರ್ಮಾನಗಳನ್ನು ಕೈಗೊಳ್ಳುವುದನ್ನು ಎಳೆ ಎಳೆಯಾಗಿ ಬಿಡಿಸಿ ತಿಳಿಸಿದರು. ಮಹಿಳೆಗೆ ತುಂಬಾ ಅವಶ್ಯವಿರುವ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಇಂದಿಗೂ ಕುಡಿಯುವ ನೀರಿನ ಸಮಸ್ಯೆ ತೀರಿಲ್ಲ. ಹಳ್ಳಿಗೆ ತುಂಬಾ ದೂರದಲ್ಲಿರುವ ಬಾವಿಗಳಿಂದ ಅನಾರೋಗ್ಯಕರವಾದ ನೀರನ್ನೇ ಹೊತ್ತು ತರಬೇಕಾಗಿದೆ ಎಂದು ವಿಷಾಧಿಸಿದರು. ಪುರುಷನಷ್ಟೇ ಕೆಲಸ ಮಾಡುವ ಮಹಿಳೆಯನ್ನು ತಾರತಮ್ಯದಿಂದ ನೋಡುವ ಈ ವ್ಯವಸ್ಥೆ ಅಳಿಯಬೇಕೆಂದು ಅವರ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತಿಲ್ಲವೆಂದು ಹಗಲು ರಾತ್ರಿ ದುಡಿಯುತ್ತಿದ್ದರೂ ಪ್ರತಿಫಲವಂತೂ ಸಿಗುತ್ತಿಲ್ಲವೆಂದು ವಿಷಾಧಿಸಿದರು.

ಕೇಂದ್ರ ಸರ್ಕಾರದ ದರ ಏರಿಕೆ ವಿರುದ್ಧ ನಡೆಯುವ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಕರೆ ನೀಡಿದರು. ಅತ್ಯಂತ ಉತ್ಸಾಹದಿಂದ ಪಾಲ್ಗೊಂಡ ಮಹಿಳೆಯರನ್ನು ಕಂಡು ಕಾಂ. ಬೃಂದಾಕಾರಟ್‌ರವರು ಹರ್ಷಗೊಂಡರು.

ಕಾರ್ಯಕ್ರಮದಲ್ಲಿ ಮಾಜಿ ಸಿಪಿಐ(ಎಂ) ಶಾಸಕರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ಪಾಲ್ಗೊಂಡು ಮಹಿಳೆಗೆ ಆಸ್ತಿ ಮತ್ತು ಶಿಕ್ಷಣದ ಹಕ್ಕನ್ನು ನಿರಾಕರಿಸಿದ ಮನು ಸಿದ್ಧಾಂತವನ್ನು ಖಂಡಿಸುತ್ತಾ ಬಿಜೆಪಿ ಸರ್ಕಾರವೂ ಕೂಡಾ ಅದೇ ದಾರಿಯಲ್ಲಿ ಹೋಗುತ್ತಿರುವುದನ್ನು ವಿವರಿಸುತ್ತಾ ವಿಮರ್ಶಿಸಿದರು. ಮಹಿಳೆಯ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಬಿಜೆಪಿ ಸರ್ಕಾರ ವಿಧಾನಸಭೆ ಮತ್ತು ಲೋಕಸಭೆಗಳಲ್ಲಿ ಮಹಿಳೆಗೆ 33% ಮೀಸಲು ಕಲ್ಪಿಸುವ ವಿದೇಯಕವನ್ನು ಮಂಡಿಸುವಲ್ಲಿ ವಿಫಲವಾಗಿದೆ ಎಂದು ಕಟುವಾಗಿ ವಿಮರ್ಶಿಸಿದರು. ಮನು ಸಿದ್ಧಾಂತವನ್ನು ಆದರಿಸಿದ ಸಿದ್ಧಾಂತವನ್ನು ಹೊತ್ತಿರುವ ಬಿಜೆಪಿಯಿಂದ ಮಹಿಳೆ ಸಮಸ್ಯೆಗಳ ವಿಮೋಚನೆ ನಿರೀಕ್ಷಿಸುವುದು ಮೂರ್ಖತನವಾಗುತ್ತದೆ ಎಂದು ತಿಳಿಸಿದರು. ಅವುಗಳ ವಿಮೋಚನೆಗೆ ಹೋರಾಟವೊಂದೇ ದಾರಿ ಎಂದು ಆ ದಿಕ್ಕಿನಲ್ಲಿ ಎಲ್ಲರೂ ಪಯಣಿಸಬೇಕೆಂದು ಕರೆ ನೀಡಿದರು.

ರಾಜ್ಯ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷರಾದ ಕಾಂ. ಕೆ.ನೀಲಾ ರವರು ಮಾತನಾಡಿ ರಾಜ್ಯದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಹಲವಾರು ಸಮಸ್ಯೆಗಳ ಬಗ್ಗೆ ತಿಳಿಸಿದರು. ಗ್ರಾಮ ಪಂಚಾಯ್ತಿಗಳಲ್ಲಿ ಆರಿಸಿ ಬಂದಿರುವ ಮಹಿಳೆಯರು ಪಂಚಾಯ್ತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿಯಾಗಬೇಕೆಂದು ಅಭಿವೃದ್ಧಿಯಲ್ಲಿ ನಾವು ಕೂಡಾ ಪಾಲ್ಗೊಂಡು ಶೋಷಣೆಯಿಂದ ವಿಮುಕ್ತರಾಗಬೇಕೆಂದು ತಿಳಿಸಿದರು. ಪ್ರತಿ ಮನೆಗೂ ಶೌಚಾಲಯ ಕೊಡಬೇಕೆಂದು ಒತ್ತಾಯಿಸಿ ಪ್ರತಿಗ್ರಾಮ ಪಂಚಾಯ್ತಿಯಲ್ಲಿ ಹೋರಾಟವನ್ನು ಮಾಡಬೇಕೆಂದು ಕರೆ ನೀಡಿದರು. ಮಹಿಳೆಯರ ಹಲವಾರು ಸಮಸ್ಯೆಗಳ ಬಗ್ಗೆ ತಿಳಿಸಿದರು.

ಸಮಾವೇಶವು 13 ಜನ ಜಿಲ್ಲಾ ಸಂಘಟನಾ ಸಮಿತಿಯನ್ನು ರಚಿಸಿತು.

ಸಂಘಟನಾ ಸಮಿತಿಯ ಸಂಚಾಲಕರಾಗಿ ಜಿ.ಈಶ್ವರಮ್ಮನವರು ಆಯ್ಕೆಯಾಗಿದ್ದಾರೆ. ಸಹ ಸಂಚಾಲಕರಾಗಿ ಫ್ಲೋರಾ, ಪ್ರೇಮಲತಾ, ಜಯಲಕ್ಷ್ಮಿ ಶ್ರೀನಿವಾಸ್, ವಸಂತಮ್ಮನವರು ಆಯ್ಕೆಯಾಗಿದ್ದಾರೆ. ಅತ್ಯಂತ ಉತ್ಸಾಹದಿಂದ ಜಿಲ್ಲೆಯಾದ್ಯಂತ ಸುಮಾರು 800 ಮಹಿಳೆಯರು ಸಮಾವೇಶದಲ್ಲಿ ಭಾಗವಹಿಸಿದರು. ಪ್ರಬಲ ಮಹಿಳಾ ಸಂಘಟನೆಯನ್ನು ಕಟ್ಟುವ ತೀರ್ಮಾನ ತೆಗೆದುಕೊಂಡು ಹೊಸ ಭರವಸೆಯನ್ನು ಮೂಡಿಸಿದ್ದಾರೆ. ಸಂಘಟನಾ ಸಮಿತಿ ಮೊದಲನೇ ಸಭೆ ಸೇರಿ ಅಲ್ಲೇ ಸದಸ್ಯತ್ವವನ್ನು ಮಾಡಿಸಿ ಘಟಕಗಳನ್ನು ಮಾಡುವ ನಿರ್ಧಾರವನ್ನು ತೆಗೆದುಕೊಂಡಿರುವ ಬಗ್ಗೆ ಸಂಚಾಲಕರಾದ ಕಾಂ. ಈಶ್ವರಮ್ಮನವರು ಐಕ್ಯರಂಗಕ್ಕೆ ತಿಳಿಸಿದರು.

- ವರದಿ : ಭಾಸ್ಕರ ರೆಡ್ಡಿ

ದಲಿತರಿಗೆ ಉನ್ನತ ಶಿಕ್ಷಣ ನಿರಾಕರಿಸುವ ಸಂಚು

ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್)ನ ಬಚ್ಚಿಟ್ಟ ಅಜೆಂಡಾಗಳು ಒಂದೊಂದಾಗಿ ಬಯಲಾಗುತ್ತಿವೆ. ಸಂವಿಧಾನ ಪರಾಮರ್ಶೆ ಹೆಸರಿನಲ್ಲಿ ಭಾರತದ ಜಾತ್ಯಾತೀತ ಸಂವಿಧಾನದ ಮೇಲೆಯೇ ಆಕ್ರಮಣ ನಡೆಸುವ ಸಂಚನ್ನು ನೋಡಿದ್ದಾಯಿತು. ಈಗ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ, ಶೈಕ್ಷಣಿಕ ಅವಕಾಶಗಳಲ್ಲಿ ದಲಿತ ವಿಭಾಗಗಳಿಗೆ ಇರುವ ಮೀಸಲಾತಿ ಸೌಲಭ್ಯವನ್ನು ಕಸಿಯಲು ಹೊರಟಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ.

ಸಾವಿರಾರು ವರ್ಷಗಳ ಭವ್ಯ ಪರಂಪರೆ ಸಂಸ್ಕೃತಿ ಇದೆ ಎಂದು ಬೊಬ್ಬೆ ಇಡಲಾಗುತ್ತಿರುವ ಈ ದೇಶದಲ್ಲಿ. ಅಸಮಾನ ಜಾತಿ ವ್ಯವಸ್ಥೆಯ ಅಡಿಯಲ್ಲಿ ಸಿಲುಕಿ ದಲಿತರು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಆರ್ಥಿಕವಾಗಿ ಅಮಾನವೀಯ ಶೋಷಣೆಗೆ ತುತ್ತಾಗಿದ್ದರು ಎಂಬುದು ಐತಿಹಾಸಿಕ ಸತ್ಯ.

ಈ ಆಧುನಿಕ ಯುಗದಲ್ಲಿ ಐತಿಹಾಸಿಕವಾದ ಹಲವು ಕಾರಣಗಳಿಗಾಗಿ ಜಾತಿ ವ್ಯವಸ್ಥೆ ಸಡಿಲಗೊಂಡಿದೆ ಎನ್ನುವುದು ನಿಜವಾದರೂ ಇಂದಿಗೂ ಸಹ ಜಾತಿ ಆಧಾರಿತ ಸಾಮಾಜಿಕ ಅಸಮಾನತೆ ಸಮಾಜದಲ್ಲಿ ಮುಂದುವರಿದಿದೆ ಮಾತ್ರವಲ್ಲ ಹೊಸ ಹೊಸ ರೂಪಗಳನ್ನು ಪಡೆದುಕೊಳ್ಳುತ್ತಿದೆ ಎನ್ನುವುದು ಸಹ ಅಷ್ಟೆ ಸತ್ಯ.

ದಮನಕ್ಕೊಳಗಾದ ಈ ದಲಿತ ಸಮುದಾಯಕ್ಕೆ ಸಾಮಾಜಿಕ ಶೈಕ್ಷಣಿಕ ಅವಕಾಶಗಳನ್ನು ಖಾತರಿ ಪಡಿಸುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಹಾಗೂ ಉದ್ಯೋಗಾವಕಾಶಗಳಲ್ಲಿ ಮೀಸಲಾತಿ ಒದಗಿಸುವುದನ್ನು ಸಂವಿಧಾನ ಬದ್ಧಗೊಳಿಸಲಾಗಿದೆ.

ಶೈಕ್ಷಣಿಕ ಸಮಾಜಿಕ ಮೀಸಲಾತಿಯನ್ನು ಭಾರತದ ಜಾತ್ಯಾತೀತ ಸಂವಿಧಾನವನ್ನು ಧ್ವಂಸಮಾಡಲು ಕುದಿಯುತ್ತಿರುವ ಆರ್.ಎಸ್.ಎಸ್‌ನ ಅಂತರಂಗದ ಅಜೆಂಡಾಗಳೇ ಈ ಸಂವಿಧಾನ ಪರಾಮರ್ಶೆ ಇತ್ಯಾದಿಗಳು, ಈ ನಿಟ್ಟಿಗೆ ಹೊಸದೊಂದು ವಿಚಾರ ಈಗ ಸೇರಿದೆ. ವಿಶ್ವ ವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ)ವು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ನಿರ್ದೇಶನದ ಮೇರೆಗೆ ವಿಶ್ವ ವಿದ್ಯಾಲಯಗಳಲ್ಲಿ ಇದುವರೆಗೆ ಎಂ.ಫಿಲ್. ಮತ್ತು ಪಿ.ಎಚ್.ಡಿ ಸಂಶೋಧನಾ ಕೋರ್ಸ್‌ಗಳಲ್ಲಿ ಇದ್ದ ಮೀಸಲಾತಿಯನ್ನು ರದ್ದು ಪಡಿಸಿ ಆಜ್ಞೆ ಹೊರಡಿಸಿದೆ.

ದೇಶದಲ್ಲಿ ಸುಮಾರು ಅರ್ಧ ಶತಮಾನಗಳ ಕಾಲ ಮೀಸಲಾತಿ ಸೌಲಭ್ಯ ಜಾರಿಯಲ್ಲಿದ್ದಾಗ್ಯೂ ಸಹ ದೇಶದ ವಿವಿಧ ವಿಶ್ವ ವಿದ್ಯಾಲಯಗಳಲ್ಲಿ ಶಿಕ್ಷಣ ಹುದ್ದೆಗಳಲ್ಲಿ ದಲಿತ ವಿಭಾಗದ ಪ್ರಾತಿನಿಧ್ಯ ಹೇಗಿದೆ ಎಂಬುದನ್ನು ಗಮನಿಸಿದರೆ ಇದು 53 ವರ್ಷಗಳ ಸ್ವತಂತ್ರ ಭಾರತದ ಸಾಧನೆ - ಹಾಗೂ ದಲಿತರ ಬದುಕಿನಲ್ಲಿ ಆಗಿರುವ ಬದಲಾವಣೆ ಈ ಎರಡಕ್ಕೂ ಒಂದು ಮಾನದಂಡವಾಗಬಹುದು.

ವಿಶ್ವವಿದ್ಯಾಲಯಗಳ ಶಿಕ್ಷಕ ಸಂಘಟನೆಯ "ಫೋರಂ ಆಫ್ ಅಕಾಡೆಮಿಕ್ಸ್ ಫಾರ್ ಸೋಷಿಯಲ್ ಜಸ್ಟಿಸ್" ಎಂಬ ವೇದಿಕೆ ದೇಶಾದ್ಯಂತ ಇರುವ 239 ವಿಶ್ವ ವಿದ್ಯಾಲಯಗಳ 7,000 ಕಾಲೇಜುಗಳನ್ನು ಒಳಗೊಂಡಂತೆ ವಿಶ್ವ ವಿದ್ಯಾಲಯಗಳಲ್ಲಿ ಭೋಧಕ ಮತ್ತು ಭೋದಕೇತರ ಹುದ್ದೆಗಳಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಪ್ರಾತಿನಿಧ್ಯದ / ಪ್ರಮಾಣದ ಕುರಿತು ಅಧ್ಯಯನ ನಡೆಸಿದೆ. ದೇಶದ 3 ಲಕ್ಷ ಶಿಕ್ಷಕರಲ್ಲಿ ಎಸ್.ಸಿ./ಎಸ್.ಟಿ. ಅಭ್ಯರ್ಥಿಗಳು ಕೇವಲ ಶೇ.2 ರಷ್ಟಿದ್ದಾರೆ. ಇದು ಅರ್ಹ ಅಭ್ಯರ್ಥಿಗಳ ಕೊರತೆಯಿಂದ ಆಗಿರುವಂಥದ್ದಲ್ಲ ಬದಲಾಗಿ, ಬಹುತೇಕ ಸಂದರ್ಭಗಳಲ್ಲಿ ಕಾಲೇಜುಗಳ ಆಡಳಿತ ಮಂಡಳಿಗಳ ಮೀಸಲಾತಿ ನೀತಿಯನ್ನು ನಿಷ್ಪ್ರಯೋಜಕಗೊಳಿಸುವ ತಂತ್ರದ ಫಲ ಎನ್ನುತ್ತದೆ ಅಧ್ಯಯನ ವರದಿ.

ದೇಶದ ಪ್ರತಿಷ್ಠಿತ ವಿಶ್ವ ವಿದ್ಯಾಲಯವಾದ ಜವಹರ ಲಾಲ್ ನೆಹರು ವಿ.ವಿ.ಯಲ್ಲಿನ 277 ಬೋಧಕ ಹುದ್ದೆಗಳಲ್ಲಿ ಕನಿಷ್ಟ 89 ಎಸ್.ಸಿ/ಎಸ್.ಟಿ ಅಭ್ಯರ್ಥಿಗೆ ಮೀಸಲಾಗಿದ್ದರೂ ದಕ್ಕಿರುವುದು ಕೇವಲ 15. ಇದೇ ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವ ವಿದ್ಯಾಲಯದಲ್ಲಿ ಇರಬೇಕಾದ ಶಿಕ್ಷಕರ ಬದಲಿಗೆ ಕೇವಲ ಮೂವರು ಶಿಕ್ಷಕರು ಮಾತ್ರ ಇದ್ದಾರೆ. ಬನಾರಸ್ ಹಿಂದೂ ವಿಶ್ವ ವಿದ್ಯಾಲಯದಲ್ಲಿನ 1,145 ಹುದ್ದೆಗಳಲ್ಲಿ ಕೇವಲ 14 ಹುದ್ದೆಗಳು ಮಾತ್ರವೇ ಪರಿಶಿಷ್ಟ ಜಾತಿ-ಪಂಗಡದವರಿದ್ದಾರೆ. ಅಲಿಘರ್ ಮುಸ್ಲಿಂ ವಿಶ್ವ ವಿದ್ಯಾಲಯದಲ್ಲಿ ಒಂದೆ ಒಂದು ಶಿಕ್ಷಕ ಹುದ್ದೆಯೂ ಪರಿಶಿಷ್ಟ ಜಾತಿ-ಪಂಗಡದವರಿಗೆ ಸಿಕ್ಕಿಲ್ಲ. ದೇಶದ ಇನ್ನಿತರ ಹಲವು ವಿಶ್ವವಿದ್ಯಾಲಯಗಳು ಇದಕ್ಕಿಂತ ತೀರಾ ಭಿನ್ನವಾಗೇನಿಲ್ಲ.

ಪರಿಸ್ಥಿತಿ ಹೀಗಿರುವಾಗ ದಲಿತರು ಎಲ್ಲರೊಂದಿಗೆ ಸ್ಪರ್ಧಿಸಲಿ, ಮೀಸಲಾತಿ ಬೇಡ ಎಂಬ ವಾದ ಅವೈಜ್ಞಾನಿಕ ಅಪ್ರಾಯೋಗಿಕವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ವಿಶ್ವಾರಂಗ ಏಪ್ರಿಲ್ 23, 2000

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 34

ಕಳೆದ ಸಂಚಿಕೆಯಲ್ಲಿ ಬಿಹಾರ-ಪ.ಬಂಗಾಳ ರಾಜ್ಯಗಳ ವಿಲೀನ ಕೈಬಿಟ್ಟು ಕಾಂಗ್ರೆಸ್ ಸರ್ಕಾರದ ನಿಲುವು ಹಾಗೂ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸೋಲಿನ ಬಗ್ಗೆ ಓದಿರುವಿರಿ ಈ ವಾರ ಕಾಂಗ್ರೆಸ್‌ನ ಎಡಬಿಡಂಗಿತನದ ಬಗ್ಗೆ ಮತ್ತು ಗಾಂಧೀಜಿಯವರ ಬಹಿರಂಗ ಪತ್ರದ ಬಗ್ಗೆ ಓದಿರಿ...

ಗಾಂಧೀಜಿ ಪತ್ರ ಬಹಿರಂಗ: ಕಾಂಗ್ರೆಸ್‌ಗೆ ಮುಖಭಂಗ

ಪಿಎಸ್‌ಪಿ ನಾಯಕ ಡಾ. ಪ್ರಫುಲ್ಲ ಚಂದ್ರ ಗುಪ್ತ ಅವರ ಅಧ್ಯಕ್ಷತೆಯಲ್ಲಿ ಕಲ್ಕತ್ತದಲ್ಲಿ 1957 ಜನವರಿ 12 ರಂದು ಒಂದು ಬೃಹತ್ ರ್‍ಯಾಲಿ ನಡೆಯಿತು. ರ್‍ಯಾಲಿಯನ್ನು 'ಐತಿಹಾಸಿಕ' ಎಂದು ಬಣ್ಣಿಸಿದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯ್‌ಘೋಷ್, ಬಂಗಾಳದಲ್ಲಿ ಕಾಂಗ್ರೆಸ್‌ನ ದುರಾಡಳಿತದ ವಿರುದ್ಧ ಹೋರಾಡಲು ಎಡಪಕ್ಷಗಳ ಏಕತೆಯನ್ನು ಜನತೆ ಮಾತ್ರವೇ ಬಲಪಡಿಸಬಲ್ಲರು ಎಂದು ಹೇಳಿದರು.

ಕಾಂಗ್ರೆಸ್ ಸರಕಾರದ ನೀತಿಗಳಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕಿದೆ. ಪಕ್ಷವು ದೇಶವನ್ನು ಆಳುತ್ತಿರುವ ರೀತಿಯನ್ನು ಕಂಡರೆ ಕೆಲವೇ ಶ್ರೀಮಂತ ಜನರು ಮತ್ತು ಜಮೀನುದಾರರಿಗೆ ಮಾತ್ರ ರಕ್ಷಣೆ ಸಿಗುತ್ತಿದೆ ಎಂದು ಅನಿಸುತ್ತದೆ ಎಂದು ಘೋಷ್ ಹೇಳಿದರು. ನಾನು ಕೂಡಾ ಆ ರ್‍ಯಾಲಿಯಲ್ಲಿ ಮಾತನಾಡಿದೆ.

ಎಡಪಕ್ಷಗಳ ಏಕತೆ 'ಸಮಯಸಾಧಕತನದ್ದು' ಎಂದು ಜವಾಹರಲಾಲ್ ನೆಹರೂ ಟೀಕಿಸಿದರು. ಆದರೆ, ನಮ್ಮಏಕತೆ ಸ್ಥಾನ ಹೊಂದಾಣಿಕೆಗೆ ಮಾತ್ರ ಸೀಮಿತವಲ್ಲ; ಹಲವಾರು ಚಳುವಳಿಗಳು ಮತ್ತು ರಕ್ತಮಯ ಹೋರಾಟಗಳ ಆಧಾರದಲ್ಲಿ ಎಡ ಏಕತೆ ರೂಪುಗೊಂಡಿದೆ ಎಂದು ರ್‍ಯಾಲಿಯಲ್ಲಿ ನಾವು ಘೋಷಿಸಿದೆವು. ಈ ನಡುವೆ, ನಾವು 'ಸಂಯುಕ್ತ ಎಡಪಂಥೀಯ ಚುನಾವಣೆ ಸಮಿತಿ ಕಾರ್ಯಕ್ರಮ'ವನ್ನು ಪ್ರಕಟಿಸಿದೆವು.

ಒಂದು ವೇಳೆ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರ ರಚನೆಯಾದರೆ ನಾವು ಭ್ರಷ್ಟಚಾರದ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಆಡಳಿತವನ್ನು ಸುಧಾರಿಸುತ್ತೇವೆ. ಜಮೀನು ರಹಿತರಿಗೆ ಪುನರ್‌ವಸತಿ ಕಲ್ಪಿಸುತ್ತೇವೆ. ಆಡಳಿತವನ್ನು ನ್ಯಾಯಾಂಗದಿಂದ ಪ್ರತ್ಯೇಕಿಸುತ್ತೇವೆ. ಶಿಕ್ಷಣ ವ್ಯವಸ್ಥೆಯನ್ನು ಸುಧಾರಿಸುತ್ತೇವೆ. ನಿರುದ್ಯೋಗ ಸಮಸ್ಯೆಯನ್ನು ನಿಭಾಯಿಸುತ್ತೇವೆ. ಶಿಕ್ಷಕರ ವೇತನ ಹೆಚ್ಚಳಕ್ಕೆ ಕ್ರಮವಹಿಸುತ್ತೇವೆ. ಭೂಸುಧಾರಣೆ ಮತ್ತು ಹೆಚ್ಚುವರಿ ಜಮೀನಿನ ವಿತರಣೆಗೆ ವ್ಯವಸ್ಥೆ ಮಾಡುತ್ತೇವೆ. ಗರಿಷ್ಟ ಮತ್ತು ಕನಿಷ್ಟ ವೇತನ ಮಿತಿಯನ್ನು ನಿಗದಿಪಡಿಸುತ್ತೇವೆ. ಜನಸಾಮಾನ್ಯರ ಜನಜೀವನ ಮಟ್ಟವನ್ನು ಸುಧಾರಿಸುತ್ತೇವೆ. ಸರ್ವತೋಮುಖ ಟ್ರೇಡ್‌ಯೂನಿಯನ್ ಚಟುವಟಿಕೆಯನ್ನು ಖಾತರಿಪಡಿಸುತ್ತೇವೆ. ಗುಡಿ ಕೈಗಾರಿಕೆಯನ್ನು ರಕ್ಷಿಸುತ್ತೇವೆ ಮತ್ತು ಭಾಷೆ ಹಾಗೂ ಭೂಗೋಳದ ಆಧಾರದಲ್ಲಿ ಗಡಿಗಳನ್ನು ನಿಗದಿಪಡಿಸಲು ಕಾಳಜಿ ವಹಿಸುತ್ತೇವೆ ಎಂದು ಕಾರ್ಯಕ್ರಮವನ್ನು ಬಿಡುಗಡೆ ಮಾಡಿದ ಮೋಹಿತ್ ಮೈತ್ರ ಘೋಷಿಸಿದರು.

ನಾನು ಮತ್ತೆ ಬಾದಾನಗರ್ ಅಸೆಂಬ್ಲಿ ಕ್ಷೇತ್ರಕ್ಕೆ ಪಕ್ಷದ ಅಭ್ಯರ್ಥಿಯಾದೆ. ನಾನು ಹೆಚ್ಚಿನ ಸಮಯ ಓಡಾಟದಲ್ಲೇ ಇರುವುದರಿಂದ ಕ್ಷೇತ್ರಕ್ಕೆ ಹೆಚ್ಚಿನ ಗಮನವನ್ನು ಕೊಡಲು ಆಗುತ್ತಿರಲಿಲ್ಲ. ಆದರೂ ಪಕ್ಷದ ಸ್ಥಳೀಯ ಸಂಗಾತಿಗಳು ಮತ್ತು ಜನರು ಅಮಿತೋತ್ಸಾಹದೊಂದಿಗೆ ನನ್ನ ಪರವಾಗಿ ಕೆಲಸ ಮಾಡಿದರು.

ಕೊಳಕು ರಾಜಕೀಯ

ಪ್ರಚಾರದ ವೇಳೆ ಕಾಂಗ್ರೆಸ್ ಎಂದಿನಂತೆ ಕೊಳಕು ರಾಜಕೀಯಕ್ಕೆ ಇಳಿಯಿತು. 1956 ರಲ್ಲಿ ಹಂಗೇರಿಯಲ್ಲಿ ಕಮ್ಯುನಿಸ್ಟ್ ವಿರೋಧಿ ಪ್ರಭುತ್ವ ಸ್ಥಾಪನೆಗೆ ಯತ್ನ ನಡೆದಿತ್ತು. ಇದು ಆದೇಶದಲ್ಲಿ ಕಮ್ಯುನಿಸ್ಟ್ ಆಡಳಿತ ವಿಫಲವಾಗಿರುವುದರ ಸಂಕೇತ ಎಂದು ಕಾಂಗ್ರೆಸಿಗರು ಪ್ರಚಾರ ಮಾಡಿದ್ದರು. ಆದರೆ ಅದು ಜನರ ಮೇಲೆ ಯಾವುದೇ ಪರಿಣಾಮ ಬೀರಿರಲಿಲ್ಲ. ಮನೆ ಮನೆಗೂ ತೆರಳಿದ ಕಾಂಗ್ರೆಸಿಗರು ಯಾರು ಯಾರಿಗೆ ಓಟು ಹಾಕಿದ್ದೀರಿ ಎನ್ನುವುದು ಗೊತ್ತಾಗುತ್ತದೆ, ಇದರ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಜನರನ್ನು ಬೆದರಿಸುವ ಕೀಳು ಮಟ್ಟಕ್ಕೂ ಇಳಿದರು.

ಇದನ್ನು ಬಲವಾಗಿ ಪ್ರತಿಭಟಿಸಿದ ನಾವು ಜನರು ಯಾವುದೇ ಭೀತಿಯಿಲ್ಲದೆ ಮತ ಚಲಾಯಿಸುವಂತೆ ಮನವಿ ಮಾಡಿಕೊಂಡೆವು. ಈ ಸಂಬಂಧ ಒಂದು ಜಂಟಿ ಹೇಳಿಕೆಯನ್ನು ಹೊರಡಿಸಿದೆವು.

ಇದರ ಜತೆಗೆ ಕಾಂಗ್ರೆಸ್‌ಗೆ ಮುಜುಗರ ಉಂಟಾಗುವ ಇನ್ನೂ ಒಂದು ವಿದ್ಯಮಾನ ನಡೆಯಿತು. ಪಶ್ಚಿಮ ಬಂಗಾಳದ ಪ್ರಥಮ ಮುಖ್ಯಮಂತ್ರಿ ಡಾ.ಪ್ರಫುಲ್ಲ ಚಂದ್ರ ಘೋಷ್ ಕಾಂಗ್ರೆಸ್ ಬಿಟ್ಟು ಪಿ.ಎಸ್.ಪಿ.ಯನ್ನು ಸೇರಿದ್ದರು. ಎರಡನೇ ಸಾರ್ವತ್ರಿಕ ಚುನಾವಣೆಯಲ್ಲಿ ಅವರು ಎಡ ಮತ್ತು ಪ್ರಜಾಸತ್ತಾತ್ಮಕ ರಂಗದ ಸಂಯುಕ್ತ ಅಭ್ಯರ್ಥಿ ಆಗಿದ್ದರು.

ಎಡಪಂಥೀಯರ ಜತೆ ಸೇರಿ ಘೋಷ್ ವಿಶ್ವಾಸದ್ರೋಹ ಎಸಗಿದ್ದಾರೆ ಎಂದು ಕಾಂಗ್ರೆಸ್ ಬಹಿರಂಗವಾಗಿ ಹೇಳಿತು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಮುಖಕ್ಕೆ ಮಂಗಳಾರತಿ ಆಗುವಂಥ ವಿವರಗಳನ್ನು ಡಾ. ಘೋಷ್ ಬಹಿರಂಗ ಪಡಿಸಿದರು.

ಅವರು ಒಂದು ಪತ್ರಿಕಾಗೋಷ್ಠಿಯಲ್ಲಿ ಗಾಂಧೀಜಿ ಬರೆದಿದ್ದ ಪತ್ರವೊಂದನ್ನು ಮಂಡಿಸಿದರು. ತಮ್ಮ ಮಂತ್ರಿ ಮಂಡಳಕ್ಕೆ ಒಬ್ಬ ಬಂಗಾಲಿಯೇತರ ವ್ಯಾಪಾರಿಯನ್ನು ಸೇರಿಸಿಕೊಳ್ಳಬೇಕೆಂಬ ಒತ್ತಡಕ್ಕೆ ತಾವು ಮಣಿಯಲಿಲ್ಲ; ಬದಲಿಗೆ ಕಾಂಗ್ರೆಸ್ ಪಕ್ಷವನ್ನೇ ತೊರೆದೆ ಎಂದು ಘೋಷ್ ಹೇಳಿದರು.

ಡಾ.ಘೋಷ್ ಬಹಿರಂಗ ಪಡಿಸಿದ ಗಾಂಧೀಜಿ ಬರೆದರೆನ್ನಲಾದ ಆ ಪತ್ರದಲ್ಲಿ "ಮಾರ್ವಾಡಿಯಾದ ಬದ್ರಿದಾಸ್ ಗೋಯೆಂಕಾ ಅಥವಾ ಖೈತಾನ್‌ರನ್ನು ನಿಮ್ಮ ಮಂತ್ರಿ ಮಂಡಳಕ್ಕೆಸೇರಿಸಿಕೊಳ್ಳಬೇಕೆಂದು ಸರ್ದಾರ್(ವಲ್ಲಭಬಾಯಿ ಪಟೇಲ್) ಇಚ್ಛೆ ವ್ಯಕ್ತಪಡಿಸಿದ್ದಾರೆ. ಆ ರೀತಿ ಮಾಡುವುದು ಸರಿಯಾದುದು. ಆದ್ದರಿಂದ ಹಾಗೆ ಮಾಡಬೇಕೆನ್ನುವುದು ನನ್ನ ಅಭಿಪ್ರಾಯ" ಎಂದು ಬರೆಯಲಾಗಿತ್ತು.

'ಸೌಜನ್ಯ'ದ ಕಾರಣಕ್ಕಾಗಿ ನಾನು ಈ ಪತ್ರವನ್ನು ಇದುವರೆಗೆ ಬಹಿರಂಗಪಡಿಸಿರಲಿಲ್ಲ. ಆದರೆ ನಾನು ವಿಶ್ವಾಸದ್ರೋಹ ಮಾಡಿದೆನೆಂದು ಕಾಂಗ್ರೆಸಿಗರು ಆರೋಪಿಸುತ್ತಿರುವುದರಿಂದ ಈ ರೀತಿ ಮಾಡದೆ ಬೇರೆ ದಾರಿಯಿರಲಿಲ್ಲ ಎಂದು ಘೋಷ್ ನುಡಿದರು.

ಇಂಥ ಸೂಚನೆಗಳಿಗೆಲ್ಲ ನಾನು ಅಷ್ಟು ಸುಲಭವಾಗಿ ಬಗ್ಗುವುದಿಲ್ಲ, ಈ ಪ್ರಶ್ನೆ ಮೇಲೆ ಬೇಕಿದ್ದರೆ ರಾಜನಾಮೆಯನ್ನಾದರೂ ಕೊಡುತ್ತೇನೆ ಎಂದು ತಾವು ಅಂದಿನ ಎಐಸಿಸಿ ಅಧ್ಯಕ್ಷ ಆಚಾರ್ಯ ಕೃಪಲಾನಿಯವರಿಗೆ ಹೇಳಿದ್ದಾಗಿಯೂ ಘೋಷ್ ತಿಳಿಸಿದರು.

ಈ ಪತ್ರ ಪ್ರಕರಣದಿಂದಾಗಿಯೇ ಘೋಷ್ ಸರಕಾರ ಪತನಗೊಂಡಿತ್ತು.

(ಮುಂದುವರಿಯುವುದು)

ಯುವಜನರನ್ನು ತಲುಪುವುದರತ್ತ

ದೇಶದ ಯುವಜನ ಆಂದೋಲನದಲ್ಲಿ ಡಿವೈಎಫ್‌ಐ ಸ್ಥಾಪನೆ ಮಹತ್ವದ್ದು. ಡಿ.ವೈ.ಎಫ್.ಐ. ಸ್ಥಾಪನೆಯ ಎರಡು ದಶಕಗಳು ತ್ಯಾಗಮಯ ಹೋರಾಟದ ದಶಕಗಳು ಈಗಾಗಿ ಕೇರಳದಲ್ಲಿ ನಡೆದ ಅಖಿಲ ಬಾರತದ ಸಮ್ಮೇಳನ ಯುವಜನರ ನಡುವೆ ಸಂದೇಶವನ್ನು ಪ್ರತಿ- ಮನೆ -ಮನೆಗೂ ಕೊಂಡೊಯ್ಯುವ ಮುಲಕ, ಸಮ್ಮೇಳಕ್ಕೆ ನಡೆದ ತಯಾರಿಯು ಇಡೀ ಕೇರಳದಾದ್ಯಾಂತ ಹಬ್ಬದ ವಾತಾವರಣವನ್ನೇ ಮೂಡಿಸಿತ್ತು. ದೇಶಾದ್ಯಂತ 930 ಪ್ರತಿನಿಧಿಗಳು 16 ವಿದೇಶಿ ಪ್ರತಿನಿಧಿಗಳು ಭಾಗವಹಿಸಿದ್ದ ಐದು ದಿನಗಳ ಈ ಸಮ್ಮೇಳನವು ಏಪ್ರಿಲ್ -10 ರಂದು 50 ಸಾವಿರ ಶ್ವೇತಾದಾರಿ ಸ್ವಯಂ ಸೇವಕರ ಪಥಸಂಚಲನ ಮತ್ತು ಲಕ್ಷಾಂತರ ಜನರ ಬೃಹತ್ ಬಹಿರಂಗ ಸಬೆ ಮೂಲಕ ಕೊನೆಗೊಂಡಿತು. ಈ ಕುರಿತು ಮತ್ತಷ್ಟು ವರದಿಗಳು.

ಎಲ್ಲೆಲ್ಲೂ ಸಂಭ್ರಮದ ಸಿದ್ಧತೆ

ಡಿ.ವೈ.ಎಫ್.ಐ.ನ 6ನೇ ರಾಷ್ಟ್ರ ಸಮ್ಮೇಳನ ಕೇರಳದಲ್ಲಿ ಸಂಘಟಿಸಲು ತೀರ್ಮಾನ ಆದ ತಕ್ಷಣ ಸಿದ್ಧತೆಗಳು ಆರಂಭಗೊಂಡವು. ಮೂರು ತಿಂಗಳ ಹಿಂದೆ ಸ್ವಾಗತ ಸಮಿತಿಯು ಹಿರಿಯ ಸಂಗಾತಿ ವಿ.ಎಸ್. ಅಚ್ಯುತಾನಂದನ್‌ರವರ ಅಧ್ಯಕ್ಷತೆಯಲ್ಲಿ ರಚಿತಗೊಂಡು ಕಾರ್ಯ ಆರಂಭಿಸಿತು. ವ್ಯವಸ್ಥೆಗಳ ಸಮರ್ಥ ನಿರ್ವಹಣೆಗಾಗಿ 21 ಉಪಸಮಿತಿಗಳು ರಚಿತವಾದವು. ಸಮ್ಮೇಳನದ ಮುಖ್ಯ ಸಂದೇಶವಾದ Youth unite for education, employment of empowerment ನ್ನು ಸಮ್ಮೇಳನದ ಮಹತ್ವವನ್ನು ವ್ಯಾಪಕವಾಗಿ ಪ್ರಚಾರಗೊಳಿಸಲಾಯಿತು. ಪ್ರಥಮ ಬಾರಿಗೆ ರಾಜ್ಯಮಟ್ಟದ ಕ್ರೀಡಾ ಸ್ಪರ್ದೆ ನಡೆಯಿತು. ಪ.ಬಂಗಾಳದ ಸಚಿವ ಸುಭಾಶ್ ಚಕ್ರವರ್ತಿ ಉದ್ಘಾಟಿಸಿದರು. ಫುಟ್‌ಬಾಲ್ ಕಬಡ್ಡಿ ಅಲ್ಲದೇ ಅಥ್ಲೆಟಿಕ್ಸ್‌ಗಳು ಯಶಸ್ವಿಯಾಗಿ ನಡೆದು ಹೆಚ್ಚಿನ ಭಾಗವಹಿಸುವಿಕೆ ಕಂಡಿದೆ. ಈ ಸಂದರ್ಭದಲ್ಲಿ 1000 ವಿಚಾರ ಸಂಕಿರಣಗಳನ್ನು ಸಂಘಟಿಸಲು ನಿರ್ಧರಿಸಲಾಗಿತ್ತು. ಮಾರ್ಚ್ 22 ರಂದು ಕಾಂ. ಸೀತರಾಮ ಯೆಚೂರಿ ಉದ್ಘಾಟಿಸಿದರು. ಜಾಗತೀಕರಣದ ಪ್ರಭಾವ ಕುರಿತು ಹಳ್ಳಿ ಹಳ್ಳಿಗಳಲ್ಲಿಯೂ ವಿಚಾರಸಂಕಿರಣಗಳು ನಡೆದವು. ಅಲ್ಲದೇ ಏಪ್ರಿಲ್ 2 ರಂದು ಕಾ. ಚಿಡಾಯನ್ ನಗರದಲ್ಲಿ ಸಂವಿಧಾನ ಎದುರಿಸುತ್ತಿರುವ ಸವಾಲುಗಳು ವಿಚಾರ ಸಂಕಿರಣವನ್ನು ಮುಖ್ಯಮಂತ್ರಿ ಇ.ಕೆ. ನಯನಾರ್ ಉದ್ಘಾಟಿಸಿದರು ಕೇಂದ್ರ ಸಚಿವ ರಾಂ ಜೇಠ್ಮಲಾನಿ, ಜಸ್ಟೀಸ್ ವಿ.ಆರ್. ಕೃಷ್ಣ ಅಯ್ಯರ್. ಜಯಪಾಲರೆಡ್ಡಿ ಮುಂತಾದವರು ಪಾಲ್ಗೊಂಡರು. ಎಪ್ರಿಲ್ 3 ರಂದು ಪ್ರಸ್ತುತವಾಗಿ ಕೇರಳದಲ್ಲಿ ಜಾತಿ ಕೋಮುವಾದೀ ಸಂಘಟನೆಗಳು ಕುರಿತು ನಡೆದ ವಿಚಾರ ಸಂಕಿರಣದಲ್ಲಿ ಪಿ. ಗೋವಿಂದ ಪಿಳ್ಳೆ ಬರಹಗಾರ ಕೆ.ಇ.ಎನ್. ಕುಂಜ ಅಹ್ಮದ್, ಪಿಣರಾಯ ವಿಜಯನ್ ಎಂ.ಎ. ಬೇಬಿ ಭಾಗವಹಿಸಿದ್ದರು. ಶಿಕ್ಷಣದ ಶಕ್ತಿ ಬದಲಾವಣೆಯ ಸಾಧ್ಯತೆ, ಸಂಸ್ಕೃತಿ ನಿನ್ನೆ, ಇಂದು ನಾಳೆ, ಈ ಶತಮಾನದ ಸಿನಿಮಾ ಮಾಧ್ಯಮ, ಸಾಮಾಜಿಕ ನೈತಿಕ ಹೊಣೆ ವಿಷಯಗಳ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ಇತರ ವಿಚಾರವಂತರು ಪಾಲ್ಗೊಂಡಿದ್ದಾರೆ. ಈ ನಡುವೆ 7 ರಂದು ಅಂತರಾಷ್ಟ್ರೀಯ ವಿಚಾರ ಸಂಕಿರಣವು ವಿಶ್ವ ಯುವಜನ ಫೆಡರೇಷನ್‌ನ 55 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಡೆದು ಖ್ಯಾತ ಚಿಂತಕ ಪ್ರೋ.ಐ.ಎಸ್ ಗುಲಾಟಿ ಉದ್ಘಾಟಿಸಿದರು.

ಅಲ್ಲದೇ ನಾಲ್ಕು ದಿನಗಳ ನಾಟಕೋತ್ಸವ, ವಿಶೇಷವಾಗಿ ಚಲನ ಚಿತ್ರ ಉತ್ಸವಗಳು ನಡೆಯುತ್ತಿವೆ. ಇದರಲ್ಲಿ ಕವಿತಾ ಲಂಕೇಶ್‌ರವರ ದೇವೀರಿ ಕನ್ನಡ ಚಿತ್ರವೂ ಸಹ ಪ್ರದರ್ಶನಗೊಂಡಿವೆ. ಮತ್ತು ಜಗತ್ತಿನ ಇತರೆ ಉತ್ತಮ ಸಿನಿಮಾಗಳು ಸಹ ಪಾಲ್ಗೊಂಡಿವೆ ವಿಶ್ವ ವಿದ್ಯಾಲಯದ ಮೈದಾನದಲ್ಲಿ ಭಾರತೀಯ ಯುವಜನ ಚಳುವಳಿ ಬಗ್ಗೆ ವಿಶೇಷ ಪ್ರದರ್ಶನದ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಾವಿರ ಸಾವಿರ ಜನತೆ ಪಾಲ್ಗೊಳ್ಳುತ್ತಿದ್ದರು. ಪ್ರೋ ಗೋಪಿನಾಥ್ ಮುತುಕಾಡು ಅವರ ಯಕ್ಷಿಣಿ ಪ್ರದರ್ಶನ ಪ್ರತಿನಿಧಿಗಳ ಮನಗೆದ್ದಿತು.

ಸಮ್ಮೇಳನದ ವ್ಯಾಪಕ ಪ್ರಚಾರದ ಅಂಗವಾಗಿ ಮಾರ್ಚ್ 5 ರಂದು (ಅಖಿಲಭಾರತ ದೇಶ ಪ್ರೇಮಿಯ ಜಾಥ ಆರಂಭಗೊಂಡ ದಿನ) ಕೇರಳದ ಎಲ್ಲಾ ಡಿ.ವೈ.ಎಫ್.ಐ. ಸದಸ್ಯರು, ಹಿತೈಷಿಗಳ ಪ್ರತಿ ಮನೆಗಳ ಮೆಲೆ ಧ್ವಜ ಹಾರಿಸಲಾಯಿತು.

ಗ್ರಾಮ- ಗ್ರಾಮಗಳನ್ನು ತಲುಪಿದ ಕನಿಷ್ಠ ಒಂದು ಸಾವಿರ ಜಾಥಾಗಳು ನಡೆದವು. ಶಿಕ್ಷಣದ ಕಾಳಸಂತೆ ಖೋರತನದ ವಿರುದ್ಧ ಸಂಘರ್ಷದಲ್ಲಿ ಪೋಲೀಸರಿಂದ ಹುತಾತ್ಮರಾದ ಕುತು ಪುರಂಭಾದಿಂದ ಹುತಾತ್ಮಜ್ಯೋತಿ ಸಮ್ಮೇಳನದ ಸಂದರ್ಭಕ್ಕೆ ಆಗಮಿಸಿತು. ತಮಿಳುನಾಡಿನ ಕನ್ಯಾಕುಮಾರಿಯಿಂದ ತರಲಾದ ಬಾವುಟವನ್ನು ಬಹಿರಂಗ ರ್‍ಯಾಲಿ ನಡೆಯಲಿರುವ ತ್ರೀವೇಂಡ್ರಂನ ಪುತ್ತರಿ ಕಂಡಂ ಮೈದಾನದಲ್ಲಿ ಕಾಂ. ವಿ.ಎಸ್. ಅಚ್ಯುತಾನಂದನ್‌ರವರು ಹಾರಿಸಿದರು. ಸೌಹಾರ್ದಪ್ರತಿನಿಧಿಗಳಾಗಿ ಲಿಬಿಯಾ, ನೇಪಾಳ್, ಬಾಂಗ್ಲಾ ಅಲ್ಜೀರಿಯಾ, ವಿಯೆಟ್ನಾಂ, ಬರ್ಮಾ, ಗಳಿಂದ ಅಂತರಾಷ್ಟ್ರೀಯ ಪ್ರತಿನಿಧಿಗಳು ಆಗಮಿಸಿದ್ದರು.

ಕೆಂಪು ನಾಡಿನ ರಸ್ತೆಗಳಲ್ಲಿ....
ಶ್ವೇತಸಮವಸ್ತ್ರಧಾರಿಗಳ ಜನಸಾಗರ.....

ಎಪ್ರಿಲ್-10 ರಂದು ತಿರುವನಂತಪುರದ ಬೀದಿ ಬೀದಿಗಳಲ್ಲಿ ಶ್ವೇತಧಾರಿ ಯುವಜನರೇ ಕಾಣಸುತ್ತಿದ್ದರು. ಬೆಳಗ್ಗೆಯಿಂದಲೇ ವಾಹನಗಳಲ್ಲಿ ವಿವಿಧ ಪ್ರದೇಶಗಳಿಂದ ಬಿಳಿ ಸಮವಸ್ತ್ರ ಧರಿಸಿರುವ ಯುವಕರು ಯುವತಿಯರು ಘೋಷಣೆಗಳನ್ನು ಕೂಗುತ್ತ ನಗರವನ್ನು ಪ್ರವೇಶಿಸಿ ಪ್ರತಿನಿಧಿಗಳಿಗೆ, ರೋಮಾಂಚನ ಗೊಳಿಸುತ್ತಿದ್ದರು.

ಪುಟ 6 ಕ್ಕೆ



ಏಪ್ರಿಲ್ 23, 2000 ಐಕ್ಯರಂಗ

ಕಾಂಗ್ರೆಸ್ಸಿನ ಜಾತ್ಯಾತೀತ ತತ್ವಕ್ಕೆ ತಿಲಾಂಜಲಿ?

ಸುರ್ಜಿತ್


ಕಳೆದ ನಾಲ್ಕು ವರ್ಷಗಳಲ್ಲಿ ಭಾರತೀಯ ಜನತಾ ಪಕ್ಷವು ಲೋಕಸಭೆಯಲ್ಲಿ ದೊಡ್ಡ ಪಕ್ಷವಾಗಿ ಮೂಡಿಬಂದಿದ್ದು ಇದು ಜಾತ್ಯಾತೀತ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಗೂ ಇದೊಂದು ಸವಾಲು.

ಹೊಸ ರಾಜಕೀಯ ಸಂಸ್ಕೃತಿ' 'ಶಿಸ್ತಿನ ಪಕ್ಷ' ಎಂದೆಲ್ಲಾ ಬಡಾಯಿಕೊಚ್ಚಿಕೊಳ್ಳುತ್ತಿದ್ದ ಬಿಜೆಪಿ ಉತ್ತರ ಪ್ರದೇಶದಲ್ಲಿ ಮಾಡಿದುದೇನು? ಬೇರೆ ಬೇರೆ ಪಕ್ಷಗಳಿಂದ ಪಕ್ಷಾಂತರಿಗಳನ್ನು ಹುಟ್ಟುಹಾಕಿ, ಅವರೆಲ್ಲರಿಗೂ ಮಂತ್ರಿ ಸ್ಥಾನವನ್ನು ಮೀಸಲಾಗಿಟ್ಟು ಸರ್ಕಾರವನ್ನು ನಡೆಸುತ್ತಿದೆ. ಅಂತಹುದೇ ಮಾತಿನ ಸ್ವರೂಪವನ್ನು ಎನ್.ಡಿ.ಎ. ಹೆಸರಿನಲ್ಲಿ ಕೇಂದ್ರದಲ್ಲಿ ಜಾರಿಗೆ ತಂದಿದೆ.

1998 ರಲ್ಲಿ ತನ್ನ ಸ್ವಂತ ಪ್ರಣಾಳಿಕೆಯ ಆಧಾರದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ ಬಿಜೆಪಿ, 1999 ರ ಚುನಾವಣಾ ಘೋಷಣೆಯ ಸಂದರ್ಭದಲ್ಲಿ ಸ್ವಂತ ಪ್ರಣಾಳಿಕೆ ತ್ಯಜಿಸಿ ರಾಷ್ಟ್ರೀಯ ಪ್ರಜಾಪ್ರಭುತ್ವ ಒಕ್ಕೂಟ(ಎನ್.ಡಿ.ಎ) ಪ್ರಣಾಳಿಕೆಯಲ್ಲಿ ಸ್ಪರ್ಧಿಸಿತು. ಅಧಿಕಾರಕ್ಕೆ ಬರುವ ಏಕೈಕ ಉದ್ದೇಶದಿಂದ 24 ಚಿಕ್ಕ ಪುಟ್ಟ ಪಕ್ಷಗಳೊಂದಿಗೆ ರಾಜಿ ಮಾಡಿಕೊಂಡು ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡಿತು. ಆದರೆ ಸಂಘ ಪರಿವಾರದ ಮೂಲಕ ಬಚ್ಚಿಟ್ಟ ಅಜೆಂಡಾವನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದೆ. ತಮಗೆ ಬಹುಮತ ಇಲ್ಲದೇ ಇರುವುದರಿಂದ ಬಿಜೆಪಿಯ ಪ್ರಣಾಳಿಕೆಯನ್ನು ಜಾರಿಗೆ ತರಲಾಗುತ್ತಿಲ್ಲ ಎಂಬುದನ್ನು ಸಾರ್ವಜನಿಕವಾಗಿ ಹೇಳಿಕೊಂಡಿರುತ್ತಾರೆ.

ಇನ್ನೊಂದೆಡೆಯಲ್ಲಿ ಬಿಜೆಪಿಯನ್ನು ನಿಯಂತ್ರಿಸುತ್ತಿರುವ ಆರ್.ಎಸ್.ಎಸ್.ಗೂ ಬಿಜೆಪಿ ಮುಖಂಡರು ಹಾಗೂ ಸರಕಾರದ ಪ್ರತಿನಿಧಿಗಳ ನಡುವೆ ವೈರುಧ್ಯ ತೀವ್ರಗೊಳ್ಳುತ್ತಿದೆ. ಬಿಜೆಪಿಯ ಮೂಲಕ ಶಿಕ್ಷಣ, ಸಾಂಸ್ಕೃತಿಕ, ವಿದೇಶಾಂಗ ನೀತಿ ಮತ್ತಿತರೆ ಕ್ಷೇತ್ರಗಳಲ್ಲಿ ಆರ್.ಎಸ್.ಎಸ್. ತನ್ನ ಅಜೆಂಡಾವನ್ನು ತೂರಿಸುತ್ತಿದೆ. ಗುಜರಾತ್ ಸರಕಾರವು ನೌಕರರಿಗೆ ಆರ್.ಎಸ್.ಎಸ್. ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಟ್ಟಿರುವುದು ಈ ಹಿನ್ನೆಲೆಯಲ್ಲಿ. ಕೊನೆಗೆ ಜನರ ವಿರೋಧ ಪಕ್ಷಗಳ, ಒತ್ತಾಯದ ಮೇರೆಗೆ ತನ್ನ ನಿರ್ದೇಶನವನ್ನು ಗುಜರಾತ್ ಸರಕಾರ ಹಿಂತೆಗೆದು ಕೊಳ್ಳಲಾಯಿತು.

ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ (ICHR)ನಲ್ಲಿ ಆರ್.ಎಸ್.ಎಸ್. ಸಕ್ರಿಯರನ್ನು ಸೇರಿಸಿದ ಬಿಜೆಪಿ ಸರಕಾರ, ಕೋಮುವಾದಿ ವಿರೋಧಿ ವ್ಯಕ್ತಿಗಳನ್ನು ಪ್ರಸಾರ ಭಾರತಿಯಿಂದ ಕಿತ್ತುಹಾಕಿತು. ಉತ್ತರ ಪ್ರದೇಶದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಕೋಮುವಾದಿ ಚಟುವಟಿಕೆಗಳಿಗೆ ಅಲ್ಲಿನ ಮುಖ್ಯಮಂತ್ರಿಗಳೇ ಕುಮ್ಮಕ್ಕು ನೀಡುತ್ತಿದ್ದಾರೆ. ಬಿಹಾರದಲ್ಲಿ ಇತ್ತೀಚೆಗೆ



ನಡೆಸಿದ ಬಿಜೆಪಿ ಕುಕೃತ್ಯ ಪ್ರಜಾಪ್ರಭುತ್ವ ಶಕ್ತಿಗಳ ಟೀಕೆಗೆ ಗುರಿಯಾಗಿದೆ.

ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ಬಿಜೆಪಿ ಶಾಸಕರು ಬೇರೆಯವರಿಗೆ ಮತ ಹಾಕಿರುವುದು 'ಶಿಸ್ತಿನ ಪಕ್ಷದ' ಅಶಿಸ್ತಿಗೆ ಒಂದು ಉದಾಹರಣೆ. ಇದಾದ ಕೆಲವೇ ದಿನಗಳಲ್ಲಿ ಹಣಕಾಸು ಮಸೂದೆಯು ವಿಧಾನಸಭೆಯಲ್ಲಿ ಸೋಲನ್ನು ಅನುಭವಿಸಿತು. ಆದರೂ ಬಿಜೆಪಿ ನೇತೃತ್ವದ ಸರಕಾರ ರಾಜೀನಾಮೆ ಸಲ್ಲಿಸಿಲ್ಲ.

ಇದೀಗ ಕಾಂಗ್ರೆಸ್ ಪಕ್ಷದ ನೆರವನ್ನು ಕೇಳುತ್ತಿರುವ ಬಿಜೆಪಿ ತಮ್ಮದು 'ಒಂದೇ ನಾಣ್ಯದ ಎರಡು ಮುಖಗಳು' ಎಂಬುದನ್ನು ಸಾಬೀತು ಪಡಿಸಿದ್ದಾರೆ.

ಕಾಂಗ್ರೆಸ್ಸಿನ ಅವನತಿ-ಪಶ್ಚಿಮ ಬಂಗಾಳದಲ್ಲಿ ಅಸಮಾಧಾನ

1991 ರಿಂದ ಹೊಸ ಆರ್ಥಿಕ ನೀತಿ, ಖಾಸಗೀಕರಣ ನೀತಿಯನ್ನು ಆರಂಭಿಸಿದ ಕಾಂಗ್ರೆಸ್ ಬಹುಬೇಗನೆ ಜನರ ಪ್ರತಿರೋಧವನ್ನು ಎದುರಿಸಬೇಕಾಯಿತು. ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರು, ಬಡವರು ಮತ್ತು ಇತರೆ ಹಿಂದುಳಿದವರು ಕಾಂಗ್ರೆಸ್ ಪಕ್ಷದಿಂದ ದೂರವಾದರು. ಜಾತ್ಯಾತೀತ ನಿಲುವಿನಲ್ಲಿ ಚಂಚಲತೆ ತೋರಿದ ಕಾಂಗ್ರೆಸ್ ಅಲ್ಪಸಂಖ್ಯಾತರಿಂದಲೂ ದೂರವಾಯಿತು. ಅಂತೆಯೇ ಕಳೆದ ಚುನಾವಣೆಯಲ್ಲಿ ಇದುವರೆಗಿನ ಅತ್ಯಂತ ಕಡಿಮೆ ಸ್ಥಾನ - ಬರೀ 112 ಸ್ಥಾನಗಳಿಗೆ ತೃಪ್ತಿಪಡಬೇಕಾಯಿತು.

1991 ರಲ್ಲಿ ಹೊಸ ಆರ್ಥಿಕ ನೀತಿಯನ್ನು ಜಾರಿಗೊಳಿಸಿದ ಮಾಜಿ ಪ್ರಧಾನಿ ಪಿ.ವಿ.ನರಸಿಂಹರಾವ್ ಅವರೇ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಬಡತನ, ನಿರುದ್ಯೋಗವನ್ನು ಹೋಗಲಾಡಿಸಲಾಗದ ಆರ್ಥಿಕನೀತಿಯ ಕೆಲವು ಅಂಶಗಳನ್ನು ಅವರು ಟೀಕಿಸಿದ್ದಾರೆ. ಕಾಂಗ್ರೆಸ್ ಪಕ್ಷ ತನ್ನ ನೀತಿಯನ್ನು ಬದಲಾಯಿಸಲು ತಯಾರಿಲ್ಲ. ತಾನು ಅಧಿಕಾರದಲ್ಲಿದ್ದ ಒರಿಸ್ಸಾವನ್ನು ಕಳೆದುಕೊಂಡ ಕಾಂಗ್ರೆಸ್ ಬಿಹಾರದಲ್ಲಿ ಬರೀ 23 ಸ್ಥಾನಗಳಿಸಿತು.

ಇತ್ತೀಚಿನ ರಾಜ್ಯ ಸಭಾ ಚುನಾವಣೆಯಲ್ಲಿ ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಕಾಂಗ್ರೆಸ್ ಶಾಸಕರು ಅಧಿಕೃತ ಅಭ್ಯರ್ಥಿಗಳ ವಿರುದ್ಧವಾಗಿ ಮತ ನೀಡಿರುವುದು ಜಗಜ್ಜಾಹೀರಾಗಿದೆ. ಪಶ್ಚಿಮ ಬಂಗಾಳದಲ್ಲಂತೂ ಅಧಿಕೃತ ಅಭ್ಯರ್ಥಿ ಹೀನಾಯ ಸೋಲನ್ನು ಅನುಭವಿಸಿದ್ದು, ಇನ್ನೊಂದು ಗುಂಪು ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಬೆಂಬಲಿತ ಸ್ವತಂತ್ರ ಅಭ್ಯರ್ಥಿಯನ್ನು ಗೆಲ್ಲಿಸಿದೆ. ಮುಂದಿನ ಶಾಸನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗವನ್ನು ಸೋಲಿಸಬೇಕೆಂದು ಆ ನಿಟ್ಟಿನಲ್ಲಿ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ಸಿನೊಂದಿಗೆ 'ಮಹಾ ಹೊಂದಾಣಿಕೆ' ಮಾಡಿಕೊಳ್ಳಬೇಕೆಂದು ಈ ಮುಖಂಡರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರನ್ನು ಮೊರೆ ಹೊಕ್ಕಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ, ಕೆಲವೊಂದು ಮುಖಂಡರನ್ನು ಬಿಟ್ಟರೆ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿಯವರು ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಹೇಳಿಕೆ ನೀಡಿಲ್ಲ. ಕಾಂಗ್ರೆಸ್ ಪಕ್ಷವು ತೃಣಮೂಲ ಮತ್ತು ಬಿಜೆಪಿಯೊಂದಿಗೆ ಹೊಂದಾಣಿಕೆಯಾಗುವುದನ್ನು ಬಿಜೆಪಿ ಮುಖಂಡ ಹಾಗೂ ಗೃಹಮಂತ್ರಿ ಎಲ್.ಕೆ.ಅಡ್ವಾಣಿ ಸ್ವಾಗತಿಸಿದ್ದು ಸಿಪಿಐ(ಎಂ) ಬಿಟ್ಟು ಉಳಿದ ಪಕ್ಷಗಳೊಂದಿಗೆ ಸೇರುವುದಾಗಿ ತಿಳಿಸಿದ್ದಾರೆ. ಕಾಂಗ್ರೆಸ್ ಯಾವುದೇ ಸೂಕ್ತ ಪ್ರತಿಕ್ರಿಯೆ ನೀಡದೇ ಇರುವುದು ಅಪಾಯಕಾರಿ ಸಂಕೇತ. ಈಗಾಗಲೇ ಅಲ್ಪಸಂಖ್ಯಾತರಿಂದ ದೂರಸರಿದ ಕಾಂಗ್ರೆಸ್ ತನ್ನ ನೆಲೆಯನ್ನೇ ಕಳೆದುಕೊಳ್ಳಬೇಕಾಗುತ್ತದೆ ಎಂಬುದನ್ನು ಅರಿತಿಲ್ಲವೇ?

ಎಲ್ಲೆ ಮೀರಿದ ಸಂದರ್ಭಸಾಧಕತನ

ಬಂಡವಾಳಶಾಹಿ-ಭೂಮಾಲಕ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ಸಿಗೆ ತಾವು ಅನುಸರಿಸಿದ ನೀತಿಗಳಿಂದ ಜನರಿಂದ ದೂರವಾಗುತ್ತಿರುವುದು ಗೊತ್ತಾಗುತ್ತಿದೆ. ಆದರೆ ಶ್ರೀಮಂತರ ಪರ, ವಿದೇಶಿ ಕಂಪನಿಗಳ ಪರ ನೀತಿಗಳನ್ನು ಬದಲಿಸಲು ತಯಾರಿಲ್ಲ. ತನ್ನ ಇತಿಮಿತಿಯಲ್ಲಿ ಸತತವಾಗಿ 24 ವರ್ಷಗಳಿಂದ ಅಧಿಕಾರ ನಡೆಸುತ್ತಿರುವ ಹಾಗೂ ಜನರಿಗೆ ಸಂಕಷ್ಟಗಳಿಗೆ ಸ್ಪಂದಿಸುತ್ತಿರುವ ಎಡರಂಗ ಸರಕಾರವನ್ನು ಸೋಲಿಸುವ ತವಕ ಈ ಪಕ್ಷಗಳಿಗೆ. ಭಾರತದೇಶದ ಎರಡು ಪ್ರಮುಖ ರಾಜಕೀಯ ಪಕ್ಷಗಳ ಸಂದರ್ಭಸಾಧಕತನವನ್ನು ಇದು ಎತ್ತಿತೋರಿಸುತ್ತದೆ. ಆರ್ಥಿಕ ನೀತಿಯಲ್ಲಿ ಈ ಎರಡು ರಾಜಕೀಯ ಪಕ್ಷಗಳಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ. ಇದೀಗ ಅಧಿಕಾರದ ದಾಹಕ್ಕಾಗಿ ಜಾತ್ಯಾತೀತ ತತ್ವಗಳಿಗೆ ತಿಲಾಂಜಲಿ ನೀಡಲು ಕಾಂಗ್ರೆಸ್ ತುದಿಗಾಲಿನಲ್ಲಿ ನಿಂತಂತಿದೆ. ಪಶ್ಚಿಮ ಬಂಗಾಳ ಬಹುಶಃ ಒಂದು ಪ್ರಯೋಗವಾಗಬಹುದೇ?

ಡಿವೈಎಫ್ಐ ಸಮ್ಮೇಳನ.....

ಮಧ್ಯಾಹ್ನ 4 ಗಂಟೆಯಾಗುತ್ತಿದ್ದಂತೆ ಸಾವಿರಾರು; ಶ್ವೇತಾಧಾರಿ ಸ್ವಯಂ ಸೇವಕರು ಹನಿಯಾಗೆ... ಝುರಿಯಿಸಿ ನದಿಯಾಗಿ ಹೋರಾಟದ ಸಾಗರವನ್ನು ಸೇರತೊಡಗಿದರು. ಮುದ ನೀಡುವ ಬ್ಯಾಂಡ್‌ನ ನಾದದೊಂದಿಗೆ ಶಿಸ್ತುಬದ್ಧ ಹೆಜ್ಜೆಗಳನ್ನಿಡುತ್ತಾ ಯಾವುದೇ ರಸ್ತೆಯನ್ನೊಕ್ಕರೂ ಎದುರಾಗುತ್ತಿದ್ದರು ಶ್ವೇತಾಧಾರಿಗಳು.

ಸಮಯಕ್ಕೆ ಸರಿಯಾಗಿ ಕೇರಳದ ವಿಧಾನಸೌಧ ಮುಂಬಾಗದಿಂದ ಬಿಳಿ ಸಮವಸ್ತ್ರಧಾರಿ ಸ್ವಯಂಸೇವಕರ ಪಥ ಚಲನ ಪ್ರಾರಂಭವಾಯ್ತು. ಮುಂಬಾಗದಲ್ಲಿ ಡಿ.ವೈ.ಎಫ್.ಐ. 6 ನೇ ರಾಷ್ಟ್ರ ಸಮ್ಮೇಳನದ ಆಕರ್ಷಕ ಬಣ್ಣದ ವಿಶಿಷ್ಟವಾಗಿ ಕೇರಳದ ಸಂಸತಿಯ, ಬ್ಯಾನರ್ ಹಿಡಿತ ಸ್ವಯಂ ಸೇವಕರು ನಂತರದಲ್ಲಿ ಡಿ.ವೈ.ಎಫ್.ಐ.ನ ಅಖಿಲ ಭಾರತ ಪದಾಧಿಕಾರಿಗಳು, ಕೇಂದ್ರ ಸಮಿತಿ ಸದಸ್ಯರು ಅನಂತರ ವಿವಿಧ ರಾಜ್ಯಗಳ ಪ್ರತಿನಿಧಿಗಳು, ಆಯಾಯಾ ರಾಜ್ಯಗಳ ಬ್ಯಾನರುಗಳ ಹಿಂದೆ ಅವರವರ ಭಾಷೆಗಳಲ್ಲಿ ಘೋಷಣೆಗಳನ್ನು ಮೊಳಗಿಸುತ್ತಾ ಮುನ್ನಡೆದರು. ನಂತರದಲ್ಲಿ ಸಮ್ಮೇಳನಕ್ಕಾಗಿಯೇ ಹಲವು ದಿನಗಳ ಕಾಲ ತಯಾರಿ ನೀಡಿದ್ದ ಸ್ವಯಂ ಸೇವಕರ ತಂಡಗಳ ಬ್ಯಾಂಡ್‌ಗಳು ಶಿಸ್ತಾಗಿ ಬಹಿರಂಗ ಸಭೆ ನಡೆಯುವ ಸ್ಥಳದೆಡೆಗೆ ಇಕ್ಕೆಲಗಳಲ್ಲಿ ನೆರೆದಿದ್ದ ಸಹಸ್ರಾರು ಜನರನ್ನು ಆಕರ್ಷಣೆಗೊಳಪಡಿಸುತ್ತಾ ಹೊರಟಿತು.

ರ್‍ಯಾಲಿ ಸಂಚರಿಸುವ ರಸ್ತೆಗಳುದ್ದಕ್ಕೂ ವಿಶೇಷವಾಗಿ, ಕಲಾತ್ಮಕ ಕಟೌಟ್ ಗಳನ್ನು ಕಲಾ ವಿನ್ಯಾಸಗಳನ್ನು ನಿರ್ಮಾಣ ಮಾಡ ಲಾಗಿತ್ತು. ಅಲ್ಲದೆ. ಸಹಾಸಾರು ಶ್ವೇತಾ ಪತಾಕೆಗಳು ಹಾರಾಡುತ್ತಾ, ಕಡಲತೀರದ ಸೆಕೆಯನ್ನು ಹಿಂದೆ ಸರಿಸಿ ತಂಗಾಳಿಯ ತಂಪನೆರೆಯುತ್ತಿದ್ದವು. ದಾರಿಯುದ್ದಕ್ಕೂ ವಿವಿಧ ಸಂಘಟನೆಗಳ ಸಾವಿರಾರು ಕಾರ್ಯಕರ್ತರು ಸಾಲಾಗಿ ನಿಂತು ಸೌಹಾರ್ದ ವ್ಯಕ್ತಪಡಿಸುತ್ತಿದ್ದು ಹೂಮಳೆ ಸುರಿಸುತ್ತಿದ್ದಾಗಲಂತೂ ಯುವಜನರ ದುಡಿಯುವ ಜನತೆಯು ಘೋಷಣೆಗಳು ಮುಗಿಲಿಗೇರುತ್ತಿದ್ದವು.



ಬಹಿರಂಗ ಸಭೆ

ಮುತ್ತರಿಕಾಂಡ ಮೈದಾನದಲ್ಲಿ ಕಾ|| ಇ.ಎಂ.ಎಸ್. ನಗರದಲ್ಲಿ ವಿಶೇಷವಾಗಿ ನಿರ್ಮಾಣಗೊಂಡಿದ್ದ, ಭವ್ಯ ವೇದಿಕೆಯಿಂದ ಕೇರಳದ ಸಂಸ್ಕೃತಿ, ಐಕ್ಯತೆ ಕುರಿತಂತೆ ವಿವಿಧ ರಾಜ್ಯಗಳ ಭಾಷೆಗಳ ಸಮೂಹಗಾನವು ಹಾರ್ದಿಕವಾಗಿ ಸ್ವಾಗತಿಸುವುದರೊಂದಿಗೆ, ಬಹಿರಂಗ ಅಧಿವೇಶನವು ಆರಂಭಗೊಂಡಿತು.

ಬಹಿರಂಗ ಸಭೆಯನ್ನುದ್ದೇಶಿಸಿ, ಸಿ.ಪಿ.ಐ(ಎಂ)ನ ಪ್ರಧಾನ ಕಾರ್ಯದರ್ಶಿ ಕಾ|| ಹರಕಿಶನ್ ಸಿಂಗ್ ಸುರ್ಜಿತ್, ಕೇರಳದ ಜನಪ್ರಿಯ ಮುಖ್ಯಮಂತ್ರಿ ಕಾ|| ಇ.ಕೆ.ನಾಯನರ್ ಸ್ವಾಗತ ಸಮಿತಿಯ ಅಧ್ಯಕ್ಷರು ಮತ್ತು ಪಾಲಿಟ್‌ಬ್ಯೂರೋ ಸದಸ್ಯರಾದ ವಿ.ಎಸ್. ಅಚ್ಯುತಾನಂದನ್, ಸೀತಾರಾಂ ಯೆಚ್ಚೂರಿ, ಮಹ್ಮದ್ ಸಲೀಂ, ಕೃಷ್ಣದಾಸ್ ಮಾತನಾಡಿದರು.

ಸಮ್ಮೇಳನದ ಅಂಗವಾಗಿ ಏಪ್ರಿಲ್ 1 ರಿಂದ 10 ರವರೆಗೆ ನಡೆದ ವಿಶಿಷ್ಟ ಸಾಹಿತ್ಯ, ಸಾಂಸತಿಕ, ರಾಜಕೀಯ, ವಿಚಾರಪೂರ್ಣ ಕಾರ್ಯಕ್ರಮಗಳು:

ಏಪ್ರಿಲ್-1

'ಭಾರತ ಯುವಜನ ಚಳುವಳಿ ಇತಿಹಾಸ ಕುರಿತಂತೆ ವಸ್ತು ಪ್ರದರ್ಶನ ವಿಶ್ವವಿದ್ಯಾನಿಲಯ ಕಾಲೇಜ್ ಮೈದಾನದಲ್ಲಿ ಏರ್ಪಡಿಸಲಾಗಿತ್ತು ಕಾರ್ಯಕ್ರಮವನ್ನು ಡಾ|| ಎನ್. ಬಾಬು ಉದ್ಘಾಟಿಸಿದರು.

'ಏಪ್ರಿಲ್-2 ರಿಂದ 9 ವರೆಗೆ ಸಮ್ಮೇಳನದ ಅಂಗವಾಗಿ ಈ ಕೆಳಕಂಡ ವಿಷಯಗಳ ಕುರಿತಂತೆ ಪ್ರತಿನಿತ್ಯ ಸಂಜೆ 6 ಗಂಟೆಯಿಂದ ವಿಚಾರ ಸಂಕಿರಣ ಕಾರ್ಯಕ್ರಮಗಳು ಕಾಂ|| ಚಿಡಿಯನ್ ನಗರದಲ್ಲಿ (ವಿ.ಜೆ.ಟಿ. ಹಾಲ್‌ನಲ್ಲಿ) ನಡೆದವು.

"ಯುವ ಜನತೆ ಮೇಲೆ ಜಗತೀಕರಣದ ಪರಿಣಾಮ"

ಅಂತರಾಷ್ಟ್ರೀಯ ವಿಚಾರ ಸಂಕಿರಣ

ಡಿವೈಎಫ್ಐ 6ನೇ ರಾಷ್ಟ್ರ ಸಮ್ಮೇಳನದ ಹಿನ್ನೆಲೆಯಲ್ಲಿ ಹಾಗೂ WFDY (world Federation of democratic youth) ಸ್ಥಾಪನೆಯ 55 ವರ್ಷಾಚರಣೆ ಅಂಗವಾಗಿ ತಿರುವನಂತಪುರದ ಎ.ಕೆ.ಜಿ. ಸಂಭಾಗಣದಲ್ಲಿ (ಕುತುಂಪುರಂ ಹುತಾತ್ಮರ ವೇದಿಕೆ) ಅಂತರ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಸಂಘಟಿಸಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ, ಬಾಂಗ್ಲಾ ಬರ್ಮಾ ಅಲ್ಜಿರಿಯಾ, ಮಾರಿಷಸ್ ನಬಿಯಾ, ವಿಯೆಟ್ನಾಂ, ಶ್ರೀಲಂಕಾ ದೇಶಗಳಿಂದ ಆಗಮಿಸಿದ್ದ ವಿದೇಶಿ ಸೌಹಾರ್ದ ಪ್ರತಿನಿಧಿಗಳು ಸೇರಿದಂತೆ WFDYನ ಪ್ರಧಾನ ಕಾರ್ಯದರ್ಶಿ ಹರ್ ಚಂದ್ ಸಿಂಗ್ ಭಟ್ ಡಿವೈಎಫ್ಐ ಮಾಜಿ ರಾಷ್ಟ್ರಾಧ್ಯಕ್ಷರಾದ ಎಂ.ಎ. ಬೇಬಿ ಬಿನೊಯ್ ವಿಶ್ವಾವಸ್ ಡಾ| ಧಾರುಸ್ ವೆಸಾರ್ ಡಿ.ವೈ.ಎಫ್.ಐ. ಪ್ರಧಾನ ಕಾರ್ಯದರ್ಶಿ ಮಹ್ಮದ್ ಸಲಿಂ AIYFI ಪ್ರಧಾನ ಕಾರ್ಯದರ್ಶಿ ಸೋನಿತಂಗಂ ಎಸ್.ಎಫ್.ಐ. ಅಧ್ಯಕ್ಷರಾದ ಕೃಷ್ಣಪ್ರಸಾದ್ ಮೊದಲಾದವರು ಭಾಗವಹಿಸಿದ್ದ ಅಧ್ಯಕ್ಷತೆಯನ್ನು ಕಾ|| ಕೃಷ್ಣದಾಸ್ ವಹಿಸಿದ್ದರು.

ವಿಚಾರ ಸಂಕೀರಣವನ್ನು ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ|| ಡಿ.ಎಸ್.ಗುಲಾಟಿ ಉದ್ಘಾಟಿಸಿ ಮಾತನಾಡುತ್ತಾ ಭಾರತದ ಮಾರುಕಟ್ಟೆಯನ್ನು ಜಗತ್ತಿಗೆ ಮುಕ್ತಗೊಳಿಸುತ್ತಿರುವುದರಿಂದ ಭವಿಷ್ಯದಲ್ಲಿ

ಪುಟ 12 ಕ್ಕೆ

“ಪಟ್ಟಭದ್ರರು ಬೀಗುತ್ತಿದ್ದಾರೆ-ನಾನೀಗ ದುಃಖಿತನಾಗಿದ್ದೇನೆ”

ಡಾ.ಬಿ.ಆರ್. ಅಂಬೇಡ್ಕರ್

ನಾನೀಗ ಅತ್ಯಂತ ನಿರಾಶನಾದ ವ್ಯಕ್ತಿ ತುಳಿತಕ್ಕೊಳಗಾದ ಮಿಲಿಯಾಂತರ ದಲಿತ ಜನರ ವಿಮೋಚನೆಗಾಗಿ ಬಿಡುವಿಲ್ಲದೆ ದುಡಿದಿದ್ದೇನೆಂದು ನಾನು ಭಾವಿಸಿದ್ದೇನೆ. ಎಂಥದೇ ಸವಲತ್ತುಗಳಿಂದ ವಂಚಿತರಾಗಿರುವ ದಲಿತ ಸಮುದಾಯ “ಮಾನವ ಘನತೆ” ಯಿಂದ ತಲೆಯೆತ್ತಿ ಬದುಕುವಂತ ಮಾನವೀಯ ಹಕ್ಕುಗಳನ್ನು ನೆಲೆಗೊಳಿಸುವ ಸಲುವಾಗಿ ನಾನು ದುಡಿದೆ. ಆದರೆ ಸ್ಥಾಪಿತ ಹಿತಾಸಕ್ತಿಗಳು ನನ್ನ ಆಶಯಗಳನ್ನು ಮುರಿಯುತ್ತಿವೆ. ನಾನು ಇಂದು ಅತ್ಯಂತ ನೊಂದ ವ್ಯಕ್ತಿಯಾಗಿದ್ದೇನೆ. ಇಂದಿಗೂ ದಲಿತ ಜನಾಂಗವನ್ನು ನಾನಾ ರೀತಿಯ ಶೋಷಣೆಯ ಮೂಲಕ ವಂಚಿಸಿ ಸೌಲಭ್ಯಗಳಿಲ್ಲದಂತೆ ಮಾಡಿ ಅಪಾರ ಲಾಭ ಪಡೆಯುತ್ತಿರುವ ಸ್ಥಾಪಿತ ಹಿತಾಸಕ್ತಿಗಳನ್ನು ನಾನು ಈಗಲೂ ನೋಡಬೇಕಾಗಿದೆ. ಸಂವಿಧಾನದ ಆಶಯಗಳ ಪರಿಗಣನೆಯಿಲ್ಲದೆ ಈ ಪಟ್ಟಭದ್ರರು ತಮ್ಮ ಹಿತಾಸಕ್ತಿಯ ಸಲುವಾಗಿ ಅಪಾರ ಸಂಖ್ಯೆಯ ದಲಿತರಿಗೆ ಯಾವ ಸವಲತ್ತನ್ನೂ ನೀಡದಂತೆ ತಡೆಯಲು ತಮ್ಮ ಶಕ್ತಿಯನ್ನೆಲ್ಲಾ ಉಪಯೋಗ ಮಾಡುತ್ತಿದ್ದಾರೆ. ಹೀಗಾಗಿ “ಪಟ್ಟಭದ್ರರು ಈಗ ಬೀಗುತ್ತಿದ್ದಾರೆ, ನಾನು ದುಃಖಿತನಾಗಿದ್ದೇನೆ.” ಹೀಗೆಂದವರು ಡಾ|| ಬಾಬಾ ಸಾಹೇಬ್ ಅಂಬೇಡ್ಕರ್.

ತಮ್ಮ ಕೊನೆಯ ದಿನಗಳನ್ನು ಎಣಿಸುತ್ತಾ 1956ರಲ್ಲಿ ಔರಂಗಾಬಾದಿನ “ರೈಲ್ವೇ ವ್ಯೂ ಹೋಟೆಲ್” ನಲ್ಲಿ ವೈದ್ಯರ ಸಲಹೆಯ ಮೇರೆಗೆ ವಿಶ್ರಾಂತಿಯಲ್ಲಿದ್ದ ಸಂದರ್ಭದಲ್ಲಿ, ‘ಸೇಲ್ಸ್ ಮ್ಯಾನಾಗಿ’ ಕಂಪನಿಯೊಂದರ ವ್ಯವಹಾರದ ಸಲುವಾಗಿ ಅದೇ ಹೋಟೆಲಿನಲ್ಲಿ ತಂಗಿದ್ದ 33 ವರ್ಷದ ಆರ್.ವಿ. ಬಿಜೂರ್ ಎನ್ನುವ ಯುವಕನ ಮುಂದೆ ಅತ್ಯಂತ ದುಃಖಿತರಾಗಿ ಅಂಬೇಡ್ಕರ್ ಈ ಮಾತುಗಳನ್ನು ಹೇಳಿದ್ದರು. ಅವರ ಹಳೆಯ ನೆನಪುಗಳನ್ನು ಬಿಚ್ಚಿಡುತ್ತಾ ಬೀಜೂರ್‌ರವರು ಮುಂದುವರಿಯುತ್ತಾರೆ.

ಅಂಬೇಡ್ಕರ್ ಅವರ 109ನೇ ಜನ್ಮ ದಿನಾಚರಣೆಯನ್ನು ಆಚರಿಸುವಾಗಲಾದರೂ, ಅವರ ಅಧ್ಯಕ್ಷತೆಯಲ್ಲಿ ರಚನೆಗೊಂಡ ಸಂವಿಧಾನವನ್ನು ದೇಶಕ್ಕೆ ಅರ್ಪಿಸಿ 50 ವರ್ಷಗಳು ಸಂದ ಸಂದರ್ಭದಲ್ಲಾದರೂ ಅವರ ಆಶಯಗಳು ಈಡೇರಿವೆಯೇ ಎನ್ನುವ ಪ್ರಶ್ನೆಯನ್ನು ಪ್ರತಿಯೊಬ್ಬ ನಾಗರೀಕರು ಹಾಕಿಕೊಳ್ಳಬೇಕಿದೆ.

ಬಹುಶಃ ಇಂದಿಗಿಂತಲೂ ಅಂದಿನ ಪರಿಸ್ಥಿತಿಯೇ ಸಮಾಧಾನಕರವಾಗಿತ್ತೇನೋ ಎನಿಸುತ್ತದೆ. ಕೊನೆಯಪಕ್ಷ ಅಂದಿನ ಆಳುವ ವರ್ಗ ‘ಸಂವಿಧಾನದ’ ಆಶಯಗಳನ್ನು ಜಾರಿಮಾಡದೇ ಹೋದರೂ ಅವುಗಳ ಬಗ್ಗೆ ರಾಜಾರೋಷವಾಗಿ ವಿರೋಧ ಮಾಡುತ್ತಿರಲಿಲ್ಲ, ಸಂವಿಧಾನವನ್ನು ಪ್ರಶ್ನೆ ಮಾಡುವ ಕೆಲಸಕ್ಕೆ ಹೋಗಿರಲಿಲ್ಲ.

ಆದರೆ “ಜಾತ್ಯಾತೀತತೆ”ಯ ಮೇಲೆ ನಿಂತಿರುವ ಸಂವಿಧಾನವನ್ನು ಪ್ರಶ್ನೆ ಮಾಡುವ ಮಟ್ಟಕ್ಕೆ ಇಂದಿನ ಆಳುವ ವರ್ಗ ಮುಂದಾಗಿದೆ. “ಸಂವಿಧಾನ ಪರಾಮರ್ಶೆಯಾಗಬೇಕೆಂದು ಹೇಳುವ ಮೂಲಕ ದಲಿತ ವಿರೋಧಿಯಾದ ಮತ್ತು ಅಲ್ಪಸಂಖ್ಯಾತರು ಹಾಗೂ ಮಹಿಳಾ ವಿರೋಧಿಯಾದ “ಮನುಸ್ಮೃತಿ”ಯನ್ನು ಹೇರಲು ಹೊರಟಿದೆ? ಅಂಬೇಡ್ಕರ್ ಈಗ ಬದುಕಿದ್ದಿದ್ದರೆ ಖಂಡಿತ ಎದೆ ಬಡಿದು



ಸಾಯುತ್ತಿರಲಿಲ್ಲವೆ? ಹೇಳಿ.

ಏನೇ ಇರಲಿ, ಇಂಥಹ ಸವಾಲುಗಳನ್ನು ಹಿಮ್ಮೆಟ್ಟಿಸುವ ಪ್ರತಿಜ್ಞೆಯನ್ನು ಮಾಡುತ್ತಾ ಅಂಬೇಡ್ಕರ್ ಅವರ ಹಾಗೂ ದೇಶದ ‘ಸಂವಿಧಾನ’ದ ಆಶಯಗಳನ್ನು ನನಸು ಮಾಡಲೇಬೇಕಿದೆ. ಇಲ್ಲದೇ ಹೋದಲ್ಲಿ ಅಂಬೇಡ್ಕರ್ ಜಯಂತಿ ಸಲುವಾಗಿ ಎಷ್ಟು ಕೋಟಿ ಹಣ ಖರ್ಚು ಮಾಡಿದರೂ ಪ್ರಯೋಜನವಿಲ್ಲ. ಔಪಚಾರಿಕವಾಗಿ ಎಷ್ಟು ಸಭೆ ಸಮಾರಂಭಗಳನ್ನು ಸಂಘಟಿಸಿದರೂ ಪ್ರಯೋಜನವಿಲ್ಲ.

ಅಂಬೇಡ್ಕರ್ ಜೀವನಚಿತ್ರ

18ರ ಏಪ್ರಿಲ್ 14 ರಂದು ಮಧ್ಯಪ್ರದೇಶದ ಇಂದೂರ್ ಬಳಿಯಿರುವ ಮ್ಹಾವ್ ಎಂಬಲ್ಲಿ ಜನ್ಮಿಸಿದರು. ತಂದೆ ಸುಬೇದಾರ್ ರಾಮ್‌ಜಿ ಸಕ್‌ಪಾಲ್ ತಾಯಿ ಭೀಮಾಬಾಯಿ 1896ರಲ್ಲಿ ಸತಾರ ಎಂಬಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣ. ಸತಾರ’ದ ಪ್ರೌಢಶಾಲೆಯಲ್ಲಿ (ಈಗಿನ ಹೊಸ ಪ್ರತಾಪ ಪ್ರೌಢಶಾಲೆ) ಹೈಸ್ಕೂಲ್ ವಿದ್ಯಾಭ್ಯಾಸ 1900 ರಿಂದ 1905ರವರೆಗೆ. 1905ರಿಂದ 1907ರ ವರೆಗೆ ಬಾಂಬೆಯ ಎಲ್ ಫಿನ್‌ಸ್ಟೋನ್ ಕಾಲೇಜಿನಲ್ಲಿ ಬಿ.ಎ. ಪದವಿ. 1912ರಲ್ಲಿ ನ್ಯೂಯಾರ್ಕ್‌ನ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಗೆ ಸೇರ್ಪಡೆ. 1913ರಲ್ಲಿ ಪದವಿ. ಇದೇ ವಿಶ್ವವಿದ್ಯಾಲಯದಲ್ಲಿ 1927ರಲ್ಲಿ ಡಾಕ್ಟರ್ ಆಫ್ ಫಿಲಾಸಫಿ. 1923ರಲ್ಲಿ ಕಾನೂನು ಪದವಿ 1952ರಲ್ಲಿ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಡಾಕ್ಟರ್ ಆಫ್ ಲಾ. 1906ರ ಏಪ್ರಿಲ್ ನಲ್ಲಿ ರಮಾಬಾಯಿಯೊಂದಿಗೆ ವಿವಾಹ.

ಮೇ 1935ರಲ್ಲಿ ರಮಾಬಾಯಿಯವರ ನಿಧನ. 1946ರ ಏಪ್ರಿಲ್ 15 ರಂದು ‘ಸವಿತಾ’ರೊಂದಿಗೆ ಮತ್ತೊಮ್ಮೆ ವೈವಾಹಿಕ ಬಂಧನ. 1946ರಲ್ಲಿ ಸಿದ್ಧಾರ್ಥ ಕಾಲೇಜಿನ ಸ್ಥಾಪನೆ. 1947ರಲ್ಲಿ ನೆಹರೂ ರವರ ಕ್ಯಾಬಿನೆಟ್‌ಗೆ ಕಾನೂನು ಮಂತ್ರಿಗಳಾಗಿ ಸೇರ್ಪಡೆ. 1948ರಲ್ಲಿ ‘ಕರಡು ಸಂವಿಧಾನ’ದ ಅರ್ಪಣೆ. 1949ರಲ್ಲಿ ಸಂವಿಧಾನದ ಅಂಗೀಕಾರ.

1951ರಲ್ಲಿ ಪಾರ್ಲಿಮೆಂಟಿನಲ್ಲಿ ‘ಹಿಂದೂ ಕೋಡ್ ಬಿಲ್’ ಮಂಡನೆ 26-11-1951ರಲ್ಲಿ ಬಿಲ್ ತಿರಸ್ಕಾರ - ಕ್ಯಾಬಿನೆಟ್‌ಗೆ ಅಂಬೇಡ್ಕರ್ ರಾಜೀನಾಮೆ.

6-12-1956ರಲ್ಲಿ ಅಂಬೇಡ್ಕರ್ ನಿಧನ. ಡಿಸೆಂಬರ್ 7 ರಂದು ದಾದರನ ಸಮುದ್ರ ತೀರದಲ್ಲಿ ಶವಸಂಸ್ಕಾರ.

- ಎನ್. ಪ್ರಭಾ.

ಅಂಬೇಡ್ಕರ

ಶತ ಶತಮಾನಗಳಿಂದ ಎಲ್ಲಾ ರೀತಿಯಿಂದಲೂ ತುಳಿತಕ್ಕೆ ಒಳಪಟ್ಟಿದ್ದ ದಲಿತ ಜನಾಂಗಕ್ಕೆ ಸಮಾಜದಲ್ಲಿ ಸಮಾನ ಅವಕಾಶ ಕಲ್ಪಿಸಲು ದುಡಿದ ಮಹಾನೀಯರು ಹಲವರು. ಅವರಲ್ಲಿ ದಲಿತ ಜನಾಂಗದಲ್ಲೇ ಹುಟ್ಟಿ ದಲಿತರ ನೋವುಂಡು ಬೆಳೆದು ಬಂದ ಮಹಾನ್ ನಾಯಕ ಅಂಬೇಡ್ಕರರು ದಲಿತರ ಏಳ್ಗೆಗೆ ದುಡಿದವರಲ್ಲಿ ಪ್ರಮುಖರಾಗಿದ್ದಾರೆ. ಅಂಬೇಡ್ಕರ್‌ರವರು ತಮ್ಮ ಜೀವನದ ಸಮಯಕ್ಕಿಂತ ಇಂದು ಹೆಚ್ಚು ಪ್ರಚಲಿತರಾಗಿದ್ದಾರೆ. ದಲಿತರಲ್ಲಿ ವಿದ್ಯಾಭ್ಯಾಸ, ಉದ್ಯೋಗ ಹೆಚ್ಚಿದಂತೆ ಇಂದು ಅಂಬೇಡ್ಕರ್ ಸಂಘಗಳು ಸ್ಥಾಪನೆ ಗೊಳ್ಳುತ್ತಿವೆ. ಬಹಳ ವೇಗದಿಂದ ಹುಟ್ಟುತ್ತಿವೆ ಎಂಬ ಆಶಯ ಒಂದು ಕಡೆಯಾದರೆ, ಅಂಬೇಡ್ಕರ್ ಹೆಸರಿನಲ್ಲಿ ಹುಟ್ಟುವ ದಲಿತ ಸಂಘಗಳು ಎಷ್ಟರ ಮಟ್ಟಿಗೆ ಅಂಬೇಡ್ಕರ್ ಆಶಯಗಳಿಗೆ ಸ್ಪಂದಿಸುವ ಸಂಘಗಳಾಗಿ ಉಳಿದಿವೆ? ಎಂಬುದನ್ನು ಅರಿಯುವುದು ಸೂಕ್ತ.

ಮೇಲ್ನೋಟಕ್ಕೆ ಕರ ಪತ್ರಗಳಲ್ಲಿ ಉಪಯುಕ್ತ ಸಾಹಿತ್ಯದ ಪದ ಬಳಕೆಗಳಿಂದ ಉದ್ಧುದ್ದ ಸಾಲುಗಳಲ್ಲಿ “ದಲಿತರ ಬದುಕಿನ ಬದಲಾವಣೆಗಾಗಿ ಹೋರಾಡೋಣ” ಎಂಬೆಲ್ಲಾ ಸಾಲುಗಳಿದ್ದರೂ, ಸಂಘದ ಉದ್ಘಾಟನೆಗೆ ಅತಿಥಿಗಳಾಗಿ ಆಗಮಿಸುವವರು ಸಮಾಜದ “ಗೌರವಾನ್ವಿತ” ನಾಯಕರುಗಳಾದ ದಲಿತ ವಿರೋಧಿಗಳು, ಜಾತಿವಾದಿಗಳು, ಬಂಡವಾಳ ಶಾಹಿಗಳು, ಭೂಮಾಲಕರು ತುಂಬಿರುತ್ತಾರೆ. ತಮ್ಮ ಭಟ್ಟಂಗಿತನವನ್ನು ತೋರಿಸಿ ಸಂಘಗಳ ಪದಾಧಿಕಾರಿಗಳಿಂದ ಸನ್ಮಾನಿಸಲ್ಪಡುತ್ತಾರೆ. ಸಮಾರಂಭದ ಖರ್ಚಿಗೆಂದು ಹಣವನ್ನು ನೀಡುತ್ತಾರೆ. ತಮ್ಮ ವಿರುದ್ಧ ಸೊಲ್ಲೆತ್ತದಂತೆ ನೋಡಿಕೊಳ್ಳುತ್ತಾರೆ. ದಲಿತ ಸಂಘಗಳ ಕಾರ್ಯಕರ್ತರು ಅಂಬೇಡ್ಕರ್ ರವರ ಧೋರಣೆ ಹಾಗೂ ಸಾಹಿತ್ಯದ ಓದಿನ ಬಗ್ಗೆ ಗಮನ ಹರಿಸದೆ ಅವರ ಮೂಲ ಧ್ಯೇಯಗಳನ್ನು ಅರಿಯದೆ ಅಂಬೇಡ್ಕರ್ ಮೂರ್ತಿಯನ್ನು ದೊಡ್ಡ ದೊಡ್ಡದಾಗಿ ನಿರ್ಮಿಸಿ ಅಲಂಕರಿಸುವುದು, ಪೂಜಿಸುವುದು, ಮೆರೆಸುವುದು ಇಂತಹವುಗಳಲ್ಲಿ ಮುಳುಗಿ ಹೋಗಿರುತ್ತಾರೆ. ದಲಿತರಲ್ಲೇ ಇರುವ ಪಟ್ಟಭದ್ರ ಹಿತಾಸಕ್ತಿಗಳು “ಬ್ರಾಹ್ಮಣರು ರಾಮನನ್ನು ಪೂಜಿಸುವಂತೆ ಅಂಬೇಡ್ಕರರನ್ನು ದೇವರಂತೆ ನಾವೆಲ್ಲಾ ಪೂಜಿಸಬೇಕು” ಎಂದು

ಸಮಾಜದ ಅನಿಷ್ಟಗಳ ವಿರುದ್ಧ ಸಿಡಿದು ನಿಂತ ಬಂಡಾಯಗಾರ

ಸ್ವತಂತ್ರ ಭಾರತ ಭವಿಷ್ಯವನ್ನು ರೂಪಿಸುವುದರಲ್ಲಿ ಅತ್ಯಂತ ಮುಖ್ಯ ಪಾತ್ರವನ್ನು ವಹಿಸಿ, ದೇಶದ ಮೇಲೆ ಚಿರಕಾಲ ಉಳಿಯುವಂತಹ ಪರಿಣಾಮಕಾರಿ ಮುದ್ರೆಯನ್ನೊತ್ತಿದ, 19 ನೇ ಶತಮಾನದ ಮಹನೀಯರ ಗುಂಪಿನಲ್ಲಿ, ಡಾ. ಅಂಬೇಡ್ಕರ್ ಹೆಸರು ಅತ್ಯಂತ ಪ್ರಕಾಶಮಾನವಾದ ನಕ್ಷತ್ರದಂತೆ ಹೊಳೆಯುತ್ತದೆ. ಸ್ವತಂತ್ರ ಭಾರತದ ಸಂವಿಧಾನ ಶಿಲ್ಪಿಯಾಗಿ, ದಲಿತರ ಮತ್ತು ಹಿಂದುಳಿದ ಬಡಜನರ ಉದ್ಧಾರಕರಾಗಿ ಹಾಗೂ ಮೇಲು ಕೀಳು, ಬಡವ-ಸಿರಿವಂತ ಎಂಬ ಭೇದ-ಭಾವ, ತಾರತಮ್ಯಗಳ ವಿರುದ್ಧ ಸಿಡಿದೆದ್ದ ಜ್ವಾಲಾಮುಖಿಯಾಗಿ, ಅವರು ಸಲ್ಲಿಸಿದ ದೇಶ ಸೇವೆ ಅಪೂರ್ವವಾದದ್ದು ಮತ್ತು ಅಪ್ರತಿಮವಾದದ್ದು. ಬಾಬಾಸಾಹೇಬರ ಈ ಸಾಧನೆಯು ಆಕಸ್ಮಿಕವೂ ಅಲ್ಲ, ಅದೃಷ್ಟವೂ ಅಲ್ಲ. ತಮ್ಮ ನಿರಂತರ ಪರಿಶ್ರಮ, ತ್ಯಾಗ ನಿಸ್ವಾರ್ಥ ವ್ಯಕ್ತಿತ್ವ, ಅಧ್ಯಯನ, ಸಮರ್ಪಣೆ ಹಾಗೂ ತಮ್ಮ ಆದರ್ಶಗಳಲ್ಲಿ ಅಚಲ ನಂಬಿಕೆಯಿಟ್ಟುಕೊಂಡಿದ್ದರಿಂದಾಗಿ ಅವರು ಯಶಸ್ವಿ ಸಾಧಕರೆನಿಸಿಕೊಂಡಿದ್ದಾರೆ.

ಭಾರತದ ಇತಿಹಾಸದಲ್ಲಿ ಡಾ. ಅಂಬೇಡ್ಕರ್ ಶೋಷಿತರ ಮನದಾಳದ ಕೀಳರಿಮೆಯನ್ನು ಕಿತ್ತೊಗೆಯಲು ಕರೆಕೊಟ್ಟರು. ಅಸ್ಪೃಶ್ಯರ ಹೋರಾಟದ ಚಕ್ರವೂ ಹಿಂದೆದೂ ಕಾಣದಷ್ಟು ವೇಗವಾಗಿ ತಿರುಗತೊಡಗಿತು. ಡಾ. ಅಂಬೇಡ್ಕರರ ಹೋರಾಟದ ನದಿಯು ಭೋರ್ಗರೆದು ಹರಿದು, ಧುಮಿಕ್ಕತೊಡಗಿತು. ಅವರು ಅನೇಕ ಸಂಘಗಳನ್ನು ಕಟ್ಟಿದರು. ರಾಜಕೀಯ ಪಕ್ಷಗಳನ್ನು ಆರಂಭಿಸಿದರು ಹಾಗೂ ಪತ್ರಿಕೆಗಳನ್ನು ಆರಂಭಿಸಿದರು. ಅಂದಿನ ಸೇವಾಸಂಸ್ಥೆಗಳು ಹಿಂದೂಗಳ ಕೈಯಲ್ಲಿದ್ದವು. ಕಾಂಗ್ರೆಸ್ ನಂತಹ ಪಕ್ಷಗಳು ಮೇಲ್ಜಾತಿಯ ಮುಂತಾದವರ ಪಕ್ಷಗಳಾಗಿದ್ದವು. ಅಂತಹ ಜನರೇ ನಡೆಸುತ್ತಿದ್ದ ಪತ್ರಿಕೆಗಳು ಅಸ್ಪೃಶ್ಯರಿಗೆ ಯಾವ ರೀತಿಯಲ್ಲೂ ಪ್ರಯೋಜನಕಾರಿಯಾಗಿರಲಿಲ್ಲ. ಇದನ್ನೆಲ್ಲಾ ಅರಿತ ಡಾ. ಅಂಬೇಡ್ಕರ್ ಬಹುಮುಖ ಹೋರಾಟವನ್ನು ನಡೆಸಿದ್ದರು. 1920 ರಲ್ಲಿ, ಮೂಕನಾಯಕ ಎಂಬ ಮರಾಠಿ ಪತ್ರಿಕೆಯನ್ನು ಆರಂಭಿಸಿದರು. 1918 ರಷ್ಟು ಹಿಂದೆಯೇ ಸೌತ್‌ಬರೋ ಚುನಾವಣಾ ಸುಧಾರಣಾ ಸಮಿತಿಯ ಮುಂದೆ ಅವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಗಟ್ಟೆಗಳ ವ್ಯವಸ್ಥೆಬೇಕೆಂದು ವಾದಿಸಿದ್ದರು. ಆದರೆ ಅವರ ವಾದವನ್ನು ಸಮಿತಿಯು ಒಪ್ಪಲಿಲ್ಲ.

ಡಾ.ಅಂಬೇಡ್ಕರ್ ಕೇವಲ ಪುಸ್ತಕಗಳನ್ನು ಬರೆಯುತ್ತಾ ಉಪದೇಶ ಕೊಡುವುದರಲ್ಲೇ ಕಾಲಕಳೆಯಲಿಲ್ಲ. ಅಸ್ಪೃಶ್ಯರ ವಿಮೋಚನೆಗಾಗಿ ಹೋರಾಟದ ಮಾರ್ಗವನ್ನು ಹಿಡಿದರು. ಮಹಾರಾಷ್ಟ್ರದ ಕೊಲಾಬಾ ಜಿಲ್ಲೆಯಲ್ಲಿದ್ದ ಮಹಡ್ ಎಂಬಲ್ಲಿ ಎಂದು ಕೆರೆ ಇತ್ತು, ಅದರ ಹೆಸರು ಚೌಡರ್ ಕೆರೆ. ಈ ಕೆರೆಯ ನೀರನ್ನು ಅಸ್ಪೃಶ್ಯರು ಬಳಸುವಂತಿರಲಿಲ್ಲ. ಈ ಕೆರೆಯ ನೀರನ್ನು ಬಳಸಲು 1927 ರಲ್ಲಿ ಡಾ. ಅಂಬೇಡ್ಕರರ ನಾಯಕತ್ವದಲ್ಲಿ ಹೇರಾಟ ನಡೆಸಲಾಯಿತು. ನಂತರ ನಾಸಿಕ್ ನಲ್ಲಿದ್ದ ಕಾಲಾರಾಂ ದೇವಾಸ್ಥಾನಕ್ಕೆ ಪ್ರವೇಶ ಕೋರಿ, ಚಳುವಳಿ ನಡೆಸಿದರು. ಇಲ್ಲಿಂದಾಚೆಗೆ, ಡಾ. ಅಂಬೇಡ್ಕರರ ಹೋರಾಟಗಳು ತೀವ್ರವಾಗತೊಡಗಿದವು. “ ನಮ್ಮ ವಿಮೋಚನೆಯು ನಮ್ಮಿಂದ ಮಾತ್ರ ಸಾಧ್ಯ. ಸ್ವಯಂ ಸಹಾಯ, ಆತ್ಮ ವಿಶ್ವಾಸ, ಅರಿವು ಮತ್ತು ಸ್ವಾಭಿಮಾನವುಳ್ಳ ಜನಾಂಗವು ಮಾತ್ರ ತನ್ನನ್ನು ತಾನು ಬಿಡುಗಡೆ ಮಾಡಿಕೊಳ್ಳಬಲ್ಲದು” ಎಂದರು. ಹೀಗೆ ನಿರಂತರವಾಗಿ ಜೀವನ ಪರಿಯಾಂತ ಶೋಷಿತರ, ದೇಶದ ಎಲ್ಲಾ ಬಡಜನರ, ಮಹಿಳೆಯರ ಏಳ್ಗೆಗಾಗಿ ಹೋರಾಡಿದರು.

ಸಂಘಗಳು-ದಲಿತ ನಾಯಕರು : ಒಂದು ಅನುಭವ

ಬಿ.ರಾಜಶೇಖರಮೂರ್ತಿ

ದಲಿತರನ್ನು ಉತ್ತೇಜಿಸುತ್ತಿದ್ದಾರೆ. ಈ ರೀತಿಯಲ್ಲಿ ಪ್ರಾರಂಭಗೊಳ್ಳುವ ಸಂಘಗಳಲ್ಲಿ ಅಧ್ಯಕ್ಷರು, ಕಾರ್ಯದರ್ಶಿ ಎಂಬ ನಾಮಾಂಕಿತ ನಾಯಕರುಗಳಾಗಲು ಎಷ್ಟೋ ಬಾರಿ ಹೊಡೆದಾಡಿ ಪೋಲೀಸ್ ಠಾಣೆಗಳಿಗೆ ದಲಿತ ಯುವಕರು ಅಲೆದಾಡುತ್ತಿರುವುದು ಉಂಟು. ಆಳುವ ವರ್ಗದ ಪಿತೂರಿಯಿಂದ ಅವಕಾಶ ವಂಚಿತಗೊಂಡ ದಲಿತ ಯುವಕರು ಅಲ್ಪ ವಿದ್ಯೆ ಪಡೆದು ಇತ್ತ ಕೃಷಿ ಕಾರ್ಖಾನೆ, ಕಚೇರಿಗಳಲ್ಲಿ ಕೆಲಸ ಇಲ್ಲದೆ ಅತ್ತ ಇರುವ ಅಲ್ಪ ಸೌಲಭ್ಯವನ್ನು ಬಳಸಿಕೊಂಡು ಓದದೆ ಮಧ್ಯವರ್ತಿಗಳಾಗಿ ದಲಿತ ವಿರೋಧಿ ರಾಜಕೀಯ ಪಕ್ಷಗಳ ಬಾಲಂಗೋಚಿಗಳಾಗಿ ಬದುಕುತ್ತಿರುವುದು ಸಾಮಾನ್ಯವಾಗಿ ಬಿಟ್ಟಿದೆ. ಇಂಥ ಯುವಕರೇ ಅಂಬೇಡ್ಕರ್ ಸಂಘಗಳನ್ನು ನಿರ್ಮಿಸಿ ತಮ್ಮ ಸ್ವಾರ್ಥಕ್ಕೆ ಸಹಾಯಕರಾದ ನಾಯಕರನ್ನು ಕರೆಸುವುದು. ಅವರಿಂದ ಪಡೆದ ಹಣವನ್ನು ತಮ್ಮ ಜೇಬಿಗಿಳಿಸುವುದು ಬಹಳಷ್ಟು ಮಾಮೂಲಾಗಿದೆ. ಒಮ್ಮೆ ಪ್ರಾಮಾಣಿಕ ದಲಿತನಾಯಕರೊಬ್ಬರು "ಅಂಬೇಡ್ಕರ್ ಬ್ಲಾಂಕ್ ಚೆಕ್‌ಗೆ ಸಹಿ ಹಾಕಿ ಹೋಗಿದ್ದಾರೆ" ಎಂದು ಚರ್ಚೆಯಲ್ಲಿ ಹೇಳಿದಿದ್ದನ್ನು ಸ್ಮರಿಸಬಹುದು. ಅಂಬೇಡ್ಕರ್ ಸಂಘಗಳು ವರ್ಷಕ್ಕೊಮ್ಮೆ ಅಂಬೇಡ್ಕರ್ ಜಯಂತಿಯಂದು ಅಂಬೇಡ್ಕರ್‌ರನ್ನು ನೆನೆಯುವುದು, ಪೂಜಿಸುವುದು, ಅವರ ಸಾಹಿತ್ಯಗಳನ್ನು ತೆಗೆದು ಧೂಳು ಒರೆಸುವುದು ಮಾತ್ರ ತಪ್ಪದೇ ನಡೆಸುತ್ತವೆ.

ಡಾ॥ ಬಿ.ಆರ್. ಅಂಬೇಡ್ಕರ್ ಹೆಸರಿನ ಸಂಘಗಳೆಲ್ಲಾ ದುರುಪಯೋಗವಾಗುತ್ತಿವೆ ಎಂದು ಹೇಳಿದರೆ ತಪ್ಪಾಗುತ್ತದೆ. ನೂರಕ್ಕೆ ಒಂದೆರಡು ಪ್ರಾಮಾಣಿಕವಾಗಿ ಅಂಬೇಡ್ಕರ್ ಧ್ಯೇಯದ ಹಾದಿಯಲ್ಲೇ ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಊರು ಕೇರಿಗಳಲ್ಲಿ ದಲಿತ ವಿದ್ಯಾವಂತ ಯುವಕರು ಅಂಬೇಡ್ಕರ್ ಸಂಘಗಳನ್ನು ಕಟ್ಟುತ್ತಾರೆಂದು ಊರಿನ ಜನಕ್ಕೆ ತಿಳಿದ ಕೂಡಲೇ ದಲಿತರಲ್ಲಿ ಆತ್ಮಸ್ಥೆರ್ಯ ಮೂಡತ್ತದೆ. ನಮ್ಮೂರಿನಲ್ಲಿ ಸಂಘ ಕಟ್ಟಿದರೆ ನಮಗೆ ಭಾಗ್ಯ ಸಿಕ್ಕಿದಂತಾಗುತ್ತದೆಂಬ ಆಶಾವಾದಿಗಳಾಗುತ್ತಾರೆ. ಅಕ್ಕ ಪಕ್ಕದ ಭೂಮಾಲಿಕ ಮೇಲ್ಜಾತಿಯ ಜನರ ಕೆಂಗಣ್ಣಿಗೆ ಗುರಿಯಾಗುತ್ತಾರೆ.

"ಏನ್ರುಲಾ! ಒಲಯ ನನ್ನಮಕ್ಳ ಸಂಘ ಸಂಘ ಅಂತ ನಿಮ್ಮಮಕ್ಕಳು ಕಟ್ಟಕ್ಕೆ ಹೋಗ್ತಾವಂತೆ, ನಮ್ ಜಮೀನ್‌ದಾಗೆ ಕೂಲಿ ನಾಲಿಗೆ ಬರದಾಂಗೆ ಆದೋದಾದ್ ಉಷಾರ್" ಎಂದು ಒಬ್ಬ ಅಂದರೆ, ಮತ್ತೊಬ್ಬರು "ನೀವು ಏನೇ ಸಂಘ ಪಂಘ, ಅಂಬೇಡ್ಕರ್ ಅಂತ ಕಿಸಿದರೂ ಹೊತ್ತು ಹುಟ್ಟೊವತ್ಗೆ ನಮ್ಮ ಹಟ್ಟಿ ಬಾಕ್ಲಿಗೆ ಬಂದು ದುಡಿ ಬೇಕಾಗ್ತದೆ" ಎಂಬ ವ್ಯಂಗ್ಯವಾಡುತ್ತಾರೆ.

ಮೇಲ್ಜಾತಿಯವರ ಅಟ್ಟಹಾಸಕ್ಕೆ ಹೆದರುತ್ತಾ ಆತಂಕದಲ್ಲೇ ಸಂಘ ಕಟ್ಟುವ ಯುವಕರಿಗೆ "ಬ್ಯಾಡ್ರಲ್ಲೇ ಹುಡುಗರಾ ಹಿಂದಾಗ್ನಿಂದ ಬಂದದ್ನ ತಪ್ಪಿಸಕ್ಕೆ ಆಗ್ತದ" ಎಂಬ ಪ್ರಶ್ನೆ ಹಾಕಿದರೆ, ಮತ್ತೊಬ್ಬ ಹಿರಿಯ ದಲಿತಜ್ಜ "ಮಾಡ್ರಲೇ ಸಂಘವಾ ಎಟು ದಿವಸಾ ಅಂತ ಅವರ ಅಂಗ್‌ನಲ್ಲೇ ಅವ್ರು ಹೇಳ್‌ದಂಗೆ ಕೇಳುಕಂಡು ಬಿದ್ದೀರೊದ್" ಎಂದು ಆತ್ಮಸ್ಥೈರ್ಯ ತುಂಬುವಂತ ಹಿರಿಯರು. ಇಂಥ ಪರಿಸ್ಥಿತಿಗಳಲ್ಲಿ ಸ್ವಾಭಿಮಾನದ ಕಿಚ್ಚು ಹೋರಾಟದ ಉಮಸ್ಸು ಸಂಘಗಳನ್ನು ಸ್ಥಾಪಿಸುವ ಸಮಯದಲ್ಲಿ ಹೋರಾಟದ ಹಾಡುಗಳನ್ನು ತಾಳ-ಮೇಳಗಳಿಂದ ಮನ ಮಿಡಿಯುವಂತೆ ಹಾಡುತ್ತಾರೆ. ಹಾಡುಗಳನ್ನು ಕೇಳುವ ದಲಿತರು ಕಂಬನಿ ಮಿಡಿಯುತ್ತಾರೆ. "ನಮಗೆ ಮುಕ್ತಿಯೆಂದು" ಎಂದು ಎದುರುಗಡೆ ಭೀಮಾಕೃತಿಯಲ್ಲಿರುವ ಡಾ॥ ಬಿ.ಆರ್. ಅಂಬೇಡ್ಕರ್ ಭಾವ ಚಿತ್ರವನ್ನು ಪ್ರಶ್ನಿಸುತ್ತಾರೆ.

ದೊಡ್ಡ ಗೌಡರ ಬಾಗಿಲಿಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲು ಕಯ್ಯಿ
ಕಂಬ ಅವರ ಹಟ್ಟಿಗೆ

ಅವರ ಬೇಟೆಗೆ ನಾವು ಮೊಲಗಳು
ನಮ್ಮ ಬಾಳೇ ಬಂಗಲೆ
ಅವರ ಬಂಗಲೆಯಂಗಳಕ್ಕೆ
ನಮ್ಮ ರಕ್ತದ ರಂಗಾಲೆ ,

ಅವರ ತೋಟದ ತೆಂಗಿನಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು


ಕವಿ ಸಿದ್ಧಲಿಂಗಯ್ಯನವರ (ಅಂದು ದಲಿತರ ಹೋರಾಟದ ನಾಯಕರಾಗಿದ್ದ ಸಿದ್ದಲಿಂಗಯ್ಯ ಇಂದು ಮನುಸ್ಮತಿ ಸಂಘ ಪರಿವಾರದವರ ವೇದಿಕೆ ಗಳಲ್ಲಿ ಅಸೀನರಾಗುತ್ತಿರುವುದನ್ನು ಕಾಣುತ್ತಿದ್ದೇವೆ.) ಈ ಹಾಡನ್ನು ಕೇಳಿದ ದಲಿತರಲ್ಲಿ ಬದಲಾವಣೆಯ ತುಡಿತ ಮಿಡಿಯುವ, ಅವರಿಗೆ ಅರಿವನ್ನು ಮೂಡಿಸುವ ನಾಯಕರು ಇಂದು ಇಲ್ಲವಾಗುತ್ತಿದ್ದಾರೆ. ಹರ್ಷದಿಂದ ಸಂಘಗಳನ್ನು ಕಟ್ಟಿ ಒಂದು ವರ್ಷವಾಗುತ್ತಿದ್ದಂತೆ ಸಂಘಗಳ ಬೋರ್ಡ್ ತುಕ್ಕು ಹಿಡಿಯುವಂತೆ ದಲಿತರ ಬದುಕು, ದೇಹಗಳು ತುಕ್ಕು ಹಿಡಿಯುತ್ತಿದೆ.

ಕೆಲವು ದಲಿತ ಗ್ರಾಮಗಳಲ್ಲಿ ಯುವಕರು ಸಂಘ ನಿರ್ಮಾಣ ಮಾಡಲು ಹಾತೊರೆಯುತ್ತಿದ್ದಾರೆ. ದುರಾದೃಷ್ಟ ವಿಚಾರವಂತ, ಪ್ರಗತಿ ಪರ, ಪ್ರಾಮಾಣಿಕ ನಾಯಕರ ಕೊರತೆಯಿಂದ ಆ ಗ್ರಾಮಗಳ ಸಂಘಗಳು ಮೇಲ್ಜಾತಿಯ ಭೂಮಾಲಿಕರ, ಶ್ರೀಮಂತರ ಹಿಡಿತದಲ್ಲಿಯೇ ನಲುಗಿ ಹೋಗುತ್ತಿವೆ.

ದಲಿತರ ಪರನಾಗಿದ್ದೇವೆಂದುಕೊಂಡೇ 50 ವರ್ಷ ಅಧಿಕಾರ ನಡೆಸಿದ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಗಳಿಂದ ದಲಿತರು ತತ್ತರಿಸಿ ಹೋಗಿದ್ದಾರೆ. ಈಗ ಬಿಜೆಪಿ ಸರ್ಕಾರ ಇನ್ನೂ ವೇಗವಾಗಿ ದಲಿತರನ್ನು ಅಭದ್ರ ಸ್ಥಿತಿಯಲ್ಲಿಡಲು ಏನೆಲ್ಲಾ ಹುನ್ನಾರ ನಡೆಸುತ್ತಿದ್ದಾರೆಂಬುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಆಳುವ ವರ್ಗದ ಕಾಲಡಿಯಲ್ಲಿ ಮೀಸಲಾತಿಯಿಂದ ಗೆದ್ದು ಹೋಗುವ ದಲಿತ ನಾಯಕರು ದಲಿತರ ಜೀವನದ ಸ್ಥಿತಿಯ ಬಗ್ಗೆ ಕನಿಷ್ಠ ಕಾಳಜಿಯ ಸೊಲ್ಲೆತ್ತದೆ ಸಮಯ ಸಾಧಕತನದಿಂದ ಬಂಡವಾಳಶಾಹಿ ವರ್ಗಕ್ಕೆ ಸೇರುತ್ತಿದ್ದಾರೆ. ದೇಶದ ಜನರನ್ನೆಲ್ಲಾ "ಹಿಂದೂ" ಗಳಾಗಿ ಮಾಡುತ್ತೇವೆಂಬ ಆರ್.ಎಸ್. ಎಸ್.ನ ಸಿದ್ಧಾಂತದ ಪಕ್ಷವಾದ ಬಿಜೆಪಿ ಸರ್ಕಾರದಲ್ಲಿ ದಲಿತ ನಾಯಕ ರೆನಿಸಿಕೊಂಡ ಅವಕಾಶವಾದಿಗಳು ಅಧಿಕಾರದ ಆಸೆಗಾಗಿ ದಲಿತರ ಸ್ವಾಭಿಮಾನವನ್ನು ಅಡವಿಟ್ಟು, ಬಿಜೆಪಿ ಸರ್ಕಾರ ಎಂಥ ಕಠಿಣವಾದ ದಲಿತ ವಿರೋಧಿ ನೀತಿಯನ್ನು ಕೈಗೊಂಡು ಜಾರಿ ಗೊಳಿಸಿದರೂ ಅವರ ಜೊತೆ ಕೈ ಜೋಡಿಸಿಕೊಂಡು ಕೂತಿರುವುದನ್ನು ಕಾಣುತ್ತಿದ್ದೇವೆ.

ದಲಿತ ಸಂಘ ಸಂಸ್ಥೆಗಳು ಹಂಚಿ ಹರಿದು ಹೋಗಿ ದಲಿತ ಯುವಕರಿಂದ ವಿಶ್ವಾಸ ಕಳೆದುಕೊಂಡು ದೂರವಾಗಿವೆ. ನಾಯಕರುಗಳು ತಮ್ಮ ಸಂಘಟನೆಗಳ ಬ್ಯಾನರ್ ಅಡಿಯಲ್ಲೇ ತಮ್ಮ ಸಂಘಟನೆ ಹೆಸರುಗಳನ್ನು ಮಾತ್ರ ಭದ್ರಗೊಳಿಸುತ್ತಿದ್ದಾರೆಯೇ ಹೊರತು, ಎಲ್ಲರೂ ಐಕ್ಯತೆಯಿಂದ ಹೋರಾಡದೆ, ದಲಿತರ ಏಳ್ಗೆಗೆ ಪ್ರಾಮಾಣಿಕ ತ್ಯಾಗ ಇಲ್ಲದೆ ದಲಿತ ಸಂಘಟನೆಗಳು ನಶಿಸಿ ಹೋಗುತ್ತಿವೆ. ಇಂಥ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಘಗಳನ್ನು ಕಟ್ಟಿರುವ, ಕಟ್ಟುತ್ತಿರುವ ಕಾರ್ಯಕರ್ತರಿಗೆ ಪ್ರಗತಿಪರ ಅಂಬೇಡ್ಕರ್ ಆಶಯಗಳಾದ ***"ಮಾನವೀಯತೆಗಾಗಿ, ಆತ್ಮಾಭಿಮಾನಕ್ಕಾಗಿ, ನಿರಂತರ ಸಾಗುವ ಸಮರದಲ್ಲಿ ನೀವು ಸಾವನ್ನಪ್ಪಿದರೆ ನಿಮ್ಮ ಕೂಲಿ, ಗುಲಾಮತನ, ಅಸ್ಪೃಶ್ಯತೆ, ಹಸಿವು ಎಲ್ಲವೂ ಸುಟ್ಟು ಹೋಗುತ್ತವೆಯೇ ಹೊರತು ಇದರಿಂದ ನಿಮಗಾಗುವ ನಷ್ಟವೇನು ಇಲ್ಲ". "ಯಾರೋ, ಯಾವ ಮಹಾತ್ಮನೋ, ನಿಮ್ಮನ್ನು ರಕ್ಷಿಸುತ್ತಾರೆ, ಉದ್ಧಾರ ಮಾಡುತ್ತಾರೆಂಬ ಹುಚ್ಚು ನಂಬಿಕೆ ಬೇಡ". "ನಿಮ್ಮ ನಿಮ್ಮ ಬದುಕುಗಳ ಹೊಣೆಗಾರಿಕೆ ನಿಮಗೇ ಗೊತ್ತು". "ಅಂಧಕಾರವನ್ನು ಸೀಳಿ, ಬೆಳಕಿನತ್ತ ನಡೆಯಿರಿ"*** ಮುಂತಾದ ಹಲವಾರು ಹೋರಾಟದ, ಸ್ವಾಭಿಮಾನದ ನುಡಿಗಳನ್ನು ಅವರಲ್ಲಿಗೆ ತಲುಪಿಸುವವರು ಯಾರು? ಎಂಬ ಪ್ರಶ್ನೆಗಳು ಉದ್ಭವಿಸುತ್ತಿವೆ.

ಅಂಬೇಡ್ಕರ್ ಸಂಘಗಳು ದಲಿತರಿಗೆ ಒಂದು ಆತ್ಮವಿಶ್ವಾಸದ ಆಶ್ರಯಗಳಾಗಿದ್ದಂತೆಯೇ ಒಟ್ಟು ಸಮಾಜದ ದಲಿತೇತರ ಬಡವರಿಂದ ದೂರಮಾಡುತ್ತಿದೆ. ಈ ಪ್ರತ್ಯೇಕತೆ ದಲಿತ ಜನ ಸಮುದಾಯಕ್ಕೆ ಮುಳುವಾಗುತ್ತಿದೆ. ಆದ್ದರಿಂದ ದಲಿತರ ವಿಶಿಷ್ಟ ಸಮಸ್ಯೆ ಸಂಕಟಗಳನ್ನು ಪರಿಹರಿಸಲು ಹೋರಾಡುವಾಗಲೇ ದಲಿತರನ್ನು ಭಾದಿಸುವ ಹಾಗೂ ಇತರೆ ಜಾತಿ ಜನಾಂಗಗಳಲ್ಲಿರುವ ಶೋಷಿತರ ಭೂಮಿ, ಕೂಲಿ ಮುಂತಾದ ಸಮಸ್ಯೆಗಳನ್ನು ಒಟ್ಟಾಗಿ ಕೈಗೆತ್ತಿಕೊಂಡು ಹೋರಾಟ ನಡೆಸುವುದು ಅತ್ಯಗತ್ಯ. ಒಟ್ಟಾರೆ ಶೋಷಿತರ ಐಕ್ಯ ಚಳುವಳಿಯತ್ತ ಗಮನ ನೀಡುವುದು ಮುಖ್ಯ. ○



ಅಂಬೇಡ್ಕರ್

ಅಭಿಮಾನದ ನೇಗಿಲಿಂದ
ಬಂಜರು ನೆಲ ಉತ್ತವನೆ
ಪಾತಿಮಾಡಿ ನಾಟಿಹಾಕಿ
ಬೆಲೆಯ ಕಾಣದೋದವನೆ
ಕಪ್ಪುಕ್ಕಿನ ಕೋಳಗಳನು
ಕಡಿದು ಎಸೆದ ವಜ್ರವೆ
ಬಂಗಾರದ ಕೋಳವೊಕ್ಕ
ಮಹಾಬೌದ್ಧ ಭಿಕ್ಷುವೆ
ಮಲಗಿದ್ದವರ ಕೂರಿಸಿದೆ
ನಿಲ್ಲಿಸುವವರು ಯಾರೋ?
ಛಲದ ಜೊತೆಗೆ ಬಲದ ಪಾಠ
ಕಲಿಸುವವರು ಯಾರೋ?

ಡಾ॥ ಸಿದ್ದಲಿಂಗಯ್ಯ
ಕೃಪೆ: ಹೊಲೆಮಾದಿಗರ ಹಾಡು

ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಸಂಘದ ಯಶೋ ಗಾಥೆ

ಯು. ಬಸವರಾಜ

ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಎಂದು ಪುನರ್ ನಾಮಕರಣಗೊಂಡ ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಸಂಘದ ಬೆಳವಣಿಗೆಯ ಯಶೋಗಾಥೆಯು ರಾಜ್ಯದ ವ್ಯವಸಾಯ ಸೇವಾ ಸಹಕಾರಿ ಸಂಘಗಳು ಕೆಟ್ಟು ಮಣ್ಣು ತಿನ್ನುವ ಹಾದಿಯನ್ನು ಬಿಟ್ಟು ಅವು ಮುನ್ನಡೆಯಬೇಕಾದ ಹಾದಿಯನ್ನು ಸಾರಿಹೇಳುತ್ತದೆ.

ಸಹಕಾರಿ ಸಂಘಗಳ ಕಥೆ-ವ್ಯಥೆ :

ಗ್ರಾಮೀಣ ಪ್ರದೇಶದ ಪಟ್ಟಭದ್ರ ಹಿತಾಸಕ್ತಿಗಳಾದ ಭೂಮಾಲಿಕರು ಹಾಗೂ ಬಡ್ಡಿ ವ್ಯಾಪಾರಗಾರರ ಹಿಡಿತದಿಂದ ವಿಮೋಚನೆಗೊಂಡು ಕೃಷಿಯು ಅಭಿವೃದ್ಧಿಯಾಗಿ ಆ ಮೂಲಕ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಯೆಡೆಗೆ ಸಾಗುವ ಉದ್ದೇಶ ಹೊಂದಿದ ರಾಜ್ಯದ ವ್ಯವಸಾಯ ಸೇವಾ ಸಹಕಾರಿ ಸಂಘಗಳ ಹೆಚ್ಚಿನ ಕಥೆಯು ಎಲ್ಲೆಡೆ ಅದಕ್ಕೆ ತದ್ವಿರುದ್ಧವಾಗಿ ಸಾಗುತ್ತಿದೆ.

ಗ್ರಾಮಗಳ ಸಂಪತ್ತಿನ ಸೃಷ್ಟಿಕರ್ತರಲ್ಲಿ ಪ್ರಮುಖ ಪಾತ್ರ ವಹಿಸುವ ಬಡರೈತ-ಕೂಲಿಕಾರರನ್ನು ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಠಿಯಿಂದ ಬಿಡಿಸಿ ಸ್ವಾವಲಂಬಿಗಳಾಗಿಸುವ ಬದಲು ಮತ್ತಷ್ಟು ಅವರ ಕತ್ತು ಹಿಚುಕುವ ಕೆಲಸಕ್ಕೆ ಈ ಸಹಕಾರಿ ಸಂಘಗಳು ನೆರವಾಗುತ್ತಿವೆಯೆಂಬುದು ಗುಟ್ಟಾಗಿ ಉಳಿದಿಲ್ಲ! ಯಾವ ಪಟ್ಟಭದ್ರ ಹಿತಾಸಕ್ತಿಗಳು ಮೂಲೆ ಗುಂಪಾಗಬೇಕಿತ್ತೋ, ಅವುಗಳೇ ಈ ಸಹಕಾರಿ ಸಂಘಗಳ ಅಧಿಕಾರ ಹಿಡಿದು ಆಡಳಿತ ನಡೆಸುತ್ತಿರುವುದೇ ಸಂಘಗಳ ಪರಿಸ್ಥಿತಿಯ ಹಿಂದಿನ ತಿರುಳಾಗಿದೆ.

ಕೇಂದ್ರ-ರಾಜ್ಯ ಸರ್ಕಾರಗಳು ಒಂದೆಡೆ ಬಡರೈತರು - ಕೂಲಿಕಾರರ ಹಿತಾಸಕ್ತಿಯನ್ನು ಮಾರುಕಟ್ಟೆಯ ಶಕ್ತಿಗಳಿಂದ ಕಾಪಾಡಲು ವಿಫಲವಾಗಿರುವುದರಿಂದ ಸುಗ್ಗಿಯ ಕಾಲದಲ್ಲಿ ಕುಸಿದ ಬೆಲೆಗಳು ಇವರನ್ನು ಸಹಕಾರಿ ಸಂಘಗಳಿಂದ ಹೊರದೂಡಿದರೇ, 'ಢೀಫಾಲ್ಟರ್'ಗಳೆಂಬ ಹಣೆ ಪತ್ರವನ್ನು ನೀಡಿ ಶಾಶ್ವತವಾಗಿ ಒಳಬರದಂತೆ ಸಹಕಾರಿ ಸಂಘಗಳು ಬಾಗಿಲು ಹಾಕಿಕೊಂಡಿವೆ.

ಎಷ್ಟೋ ಸಂದರ್ಭಗಳಲ್ಲಿ ಭೂಮಾಲಿಕರು ಬಡ್ಡಿ ವ್ಯಾಪಾರಿಗಳು ತಮ್ಮ ಹಿಡಿತದಲ್ಲಿರುವ ಬಡರೈತರು - ಕೂಲಿಕಾರರ ಹೆಸರಿನಲ್ಲಿ ಸಾಲ ಪಡೆದು ತಮ್ಮ ಬಂಡವಾಳವಾಗಿ ಉಪಯೋಗಿಸಿ ಅವರನ್ನು ಡೀಫಾಲ್ಟರ್‌ಗಳನ್ನಾಗಿಸಿರುವುದು ಎಲ್ಲಾ ಬ್ಯಾಂಕ್ ಹಾಗೂ ಸಹಕಾರಿ ಸಂಘಗಳ ಚರಿತ್ರೆಯ ಪುಟಗಳು ಪಿಸುಗುಡುವುದು ಆಕಡೆ ಕಿವಿಗೊಡುವ ಕೇಳುಗರ ಅನುಭವವಾಗಿದೆ.

ಪಟ್ಟಭದ್ರ ಹಿತಾಸಕ್ತಿಗಳೇ ಅಧಿಕಾರದಲ್ಲಿರುವುದರಿಂದ ಸಹಕಾರಿ ಸಂಘಗಳ ಬಂಡವಾಳದ ಹೆಚ್ಚಿನ ಪಾಲನ್ನು ಪಡೆದು ಬಡರೈತ ಕೂಲಿಕಾರರಿಗೆ ಸಾಲಸಿಗದಂತೆ ನೋಡಿಕೊಳ್ಳುತ್ತವೆ. ಬೀಳು ಭೂಮಿಗಳ ಹೆಸರಿನಲ್ಲಿ ಪಡೆದ ಸಾಲವನ್ನು ಭೂಮಾಲಿಕರು ಆ ಭೂಮಿಯ ಅಭಿವೃದ್ಧಿಗೆ ತೊಡಗಿಸದೇ ತಮ್ಮ ಇತರೇ ಕೆಲಸಗಳಿಗೆ ಅದನ್ನು ಬಂಡವಾಳವಾಗಿ ತೊಡಗಿಸುವುದು ಇಲ್ಲವೇ ಇದೇ ಕಡಿಮೆ ಬಡ್ಡಿಗೆ ದೊರೆಯುವ ಸಾಲಬಂಡವಾಳವನ್ನು ಅದೇ ಗ್ರಾಮದ ಬಡರೈತರಿಗೆ ಕೂಲಿಕಾರರಿಗೆ ತಿಂಗಳಿಗೆ 4 ರೂ ನಿಂದ 10 ಬಡ್ಡಿಯದರದವರೆಗೆ ಸಾಲನೀಡಿ ಅವರ ಮಿಗುತಾಯ ಮೌಲ್ಯವನ್ನು ದೋಚಲು ಬಳಸುವುದು ಕಂಡುಬಂದಿದೆ!.

ದುಬಾರಿ ಬಡ್ಡಿಗೆ ಸಾಲ ಮತ್ತು ಹೆಚ್ಚಿನ ದರದಲ್ಲಿ ಮಾರಾಟ ಮಾಡುವ ರಸಾಯನಿಕ ಗೊಬ್ಬರ - ಕ್ರಿಮಿನಾಶಕ ಬೀಜ ಭೂಮಾಲಿಕರ ಅಂಗಡಿಗಳಿಗೆ ಸಹಕಾರಿ ಸಂಘದ ಸಾಲ ಬಂಡವಾಳದ ಹೂಡಿಕೆಯಾಗುವುದು ಸಾಮಾನ್ಯವಾಗಿ ಭೂಮಾಲಿಕರು ಕೊಬ್ಬಿ ಮತ್ತಷ್ಟು ಗ್ರಾಮಗಳಲ್ಲಿ ಬಲಿಷ್ಠರಾಗುತ್ತಿದ್ದಾರೆ.

ಹೀಗಾಗಿ ಸಹಕಾರಿ ಸಂಘಗಳು ಇಂತಹವರ ಕೈನಲ್ಲಿ ನರಳುತ್ತಿವೆ. ಬೆಳೆಯಲು ಸೊಂಟದಲ್ಲಿ ಶಕ್ತಿಯಿಲ್ಲದೇ ಬಿದ್ದು ಹೋಗುವ ಮರಗಳಾಗುತ್ತಿವೆ. ಬಂಡವಾಳ ತೊಡಗಿಸಿದ ಶೇರುದಾರರಿಗೆ ಪೈಸೆ ಲಾಭಾಂಶವನ್ನೂ ಕಾಣದಂತೆ ಮಾಡಿವೆ. ಕೇವಲ ರಸಾಯನಿಕ ಗೊಬ್ಬರ, ಕ್ರಿಮಿನಾಶಕ ಬೀಜ ಕಂಪೆನಿಗಳ ಆದಾಯ ಹೆಚ್ಚಿಸುವ ಬಂಡವಾಳಗಾರರ ನೆಚ್ಚಿನ ಖಚಿತ ಮಾರುಕಟ್ಟೆಗಳಾಗಿವೆ.

ಈ ಸಹಕಾರಿ ಸಂಘಗಳ ಸಿಬ್ಬಂಧಿಯಲ್ಲಿ ಭೂಮಾಲಿಕರ ಬಂಧು ಬಳಗ ಇಲ್ಲವೇ ಅವರ ಹಿತಾಸಕ್ತಿ ಕಾಪಾಡುವವರನ್ನೇ ತುಂಬಿಕೊಳ್ಳಲಾಗುತ್ತಿದೆ.

ಕೆಲವೊಮ್ಮೆ ಮಧ್ಯಮ ರೈತರು ಕೆಳಮಧ್ಯಮ ರೈತರು ಸಂಘಗಳಿಂದ ಸಾಲ ಪಡೆಯುವಾಗ ಕನಿಷ್ಠ ಸಾಲ ಪಡೆಯುವುದಿದೆ. ಅಂತಹವರ ಖಾತೆಯಿಂದ ಈ ಸಿಬ್ಬಂಧಿಗಳೆಂಬ ಭೂಮಾಲಿಕರ ಭಂಟರು ಗರಿಷ್ಟ ಮಟ್ಟದ ಸಾಲವನ್ನು ಪಡೆದು ದುಬಾರಿ ಬಡ್ಡಿ ವ್ಯವಹಾರದ ಸಾಲ ಬಂಡವಾಳವನ್ನಾಗಿ ಹೊರಗಡೆ ತೊಡಗಿಸುವುದು ಕಂಡು ಬಂದಿದೆ. ಕೇವಲ 3-4 ಸಾವಿರ ರೂಪಾಯಿಗಳ ಸಂಬಳಕ್ಕಿರುವ ಇವರು ಬಂಗಲೆಗಳನ್ನು ಕಟ್ಟಿಸಿಕೊಂಡು ಭಾರೀ ಕುಳಗಳಾಗಿದ್ದಾರೆ. ಮಧ್ಯಮ ರೈತರು ಬಡರೈತರು ಇಂತಹ ಖಾತೆಯಲ್ಲಿ ತಾವು ಪಡೆದ ಸಾಲದ ರಸೀದಿಗಳನ್ನು ಹೊಂದದೇ ಹೋದರೆ ಹೆಚ್ಚಿನ ಸಾಲದ ಒಂದು ಭಾಗವನ್ನು ಅವರೇ ತೀರಿಸುವಂತೆ ಲೆಕ್ಕ ಹೇಳಿ ಪಡೆಯಲಾಗುತ್ತದೆ. ತಕರಾರು ಎತ್ತಿದಲ್ಲಿ ಹೊಸ ಸಾಲ ಸಿಗದಂತೆ ಕಿರಿ, ಕಿರಿ ಮಾಡುವುದಿದೆ.

ಹೀಗೆ ಅವ್ಯವಹಾರಗಳ ಆಗರವಾಗಿ ಪಟ್ಟಭದ್ರ ಹಿತಾಸಕ್ತಿಗಳ ಲಾಭದಾಯಕ ದಂಧೆಯಾಗಿರುವ ಬಡರೈತರು ಕೂಲಿಕಾರರನ್ನು, ಹೆಚ್ಚಿನ ಮಧ್ಯಮ ರೈತರನ್ನು (ಇತ್ತೀಚೆಗೆ) ಹೊರನೂಕಿರುವ ಈ ಸೊಸೈಟಿಗಳು ವಸೂಲಿಯಾಗದ ಸಾಲದ ಕೂಪದಲ್ಲಿ ಬಿದ್ದು ರೌರವ ನರಕ ಅನುಭವಿಸುತ್ತಿರುವಾಗ 44 ಲಕ್ಷದಿಂದ 4 ಕೋಟಿ ಬಂಡವಾಳದೆಡೆಗೆ ಸಾಗಿರುವ 1983 ರಿಂದಲೂ ಪ್ರತಿವರ್ಷ ಸಾಧಾರಣ 2 ಲಕ್ಷದಿಂದ 6 ಲಕ್ಷರೂಪಾಯಿಗಳ ಲಾಭ ಸಂಪಾದನೆ ಮಾಡುತ್ತಿರುವ ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್ ಮಾರ್ಗದರ್ಶಿಯಲ್ಲದೇ ಮತ್ತೇನು?

ಸ್ವಾತಂತ್ರ್ಯ, ಸ್ವಾವಲಂಬನೆಯೆಡೆಗೆ :

1956ರಲ್ಲಿ ರಚನೆಗೊಂಡ ಕೋಟೆಕಾರ್ ವ್ಯವಸಾಯ ಸೇವಾ ಸಹಕಾರಿ ಸಂಘವು 1983ರವರೆಗಿನ ಅನುಭವವು ಉಳಿದವುಗಳಿಗಿಂತ ಭಿನ್ನವೇನಾಗಿರಲಿಲ್ಲ. ಇಲ್ಲಿಯೂ ಪಟ್ಟಭದ್ರರದೇ ಕಾರುಬಾರಾಗಿತ್ತು. ಆದರೆ 1983ರ ನಂತರ ಇದರ ಇತಿಹಾಸ ಹೊಸದಾಗಿ ಬರೆಯಲ್ಪಟ್ಟಿತು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಉಳ್ಳಾಲ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಈ ಸಹಕಾರಿ ಸಂಘವು ಸುಮಾರು ಹತ್ತು ಹಳ್ಳಿಗಳ ವ್ಯಾಪ್ತಿಗಳನ್ನೊಳಗೊಂಡಿದೆ. ಈ ಪ್ರದೇಶವು ಭೂಮಾಲಿಕ ಬಡ್ಡಿ ವ್ಯಾಪಾರಗಾರರ ದೌರ್ಜನ್ಯ ದಬ್ಬಾಳಿಕೆಗಳ ಮೂಟೆಗಟ್ಟಲೇ ಇತಿಹಾಸವನ್ನು ಹೊಂದಿದೆ. ಇಂತಹ ದಬ್ಬಾಳಿಕೆಯ ವಿರುದ್ಧ ಅಖಿಲಭಾರತ ಕಿಸಾನ್ ಸಭಾದ ನಾಯಕತ್ವದ ಕರ್ನಾಟಕ ಪ್ರಾಂತ ರೈತಸಂಘವು 1950ರ ದಶಕದಿಂದಲೇ ತೀವ್ರವಾಗಿ ಸೆಣಸುತ್ತಾಬಂದಿದೆ. ಅಂದು ಪ್ರಚಲಿತ ವಿದ್ದ ಬಿಟ್ಟಿಚಾಕರಿ, ದುಬಾರಿ ಗೇಣಿ ದುಬಾರಿ ಬಡ್ಡಿಸಾಲ, ಹಾಗೂ ಗೇಣಿ ವ್ಯವಸಾಯದಿಂದ ಕೊಬ್ಬಿದ್ದ ಭೂಮಾಲಿಕರು ಪಟ್ಟಭದ್ರರು ಸೋತು ಸುಣ್ಣವಾದ ಇತಿಹಾಸ ಬಿಟ್ಟು ಸಹಕಾರಿ ಸಂಘದ ಬೆಳವಣಿಗೆಗೆ ಬೇರೆ ಬುನಾದಿ ಇಲ್ಲವೆಂದು ಆ ಪ್ರದೇಶದ ಪ್ರಾಂತರೈತ ಸಂಘದ ಈಗಿನ ಮುಖಂಡರಾದ ಕಾಂ। ರಾಮಚಂದ್ರ ಉಚ್ಚಿಲರು ನೆನಪಿಸುತ್ತಾರೆ. 1983ರವರೆಗೆ ಭೂಮಾಲಿಕತ್ವದ ವಿರುದ್ಧ ತೀವ್ರರೀತಿಯಲ್ಲಿ ಆಂದೋಲನವು ಬೆಳೆದು ಬಂದಿದ್ದರೂ ಅದರ ಸುಮಾರು ಎರಡೂವರೆ ದಶಕಗಳಷ್ಟು ಹಿಂದೆಯೇ ರಚಿಸಲಾದ ಸಹಕಾರಿ ಸಂಘಕ್ಕೆ ಬಡರೈತರು ಕೂಲಿಕಾರರು ಎಡಚಾಚುತ್ತಿರಲಿಲ್ಲ. ಈ ಆಂದೋಲನಕ್ಕೆ ಜಾಗ್ರತಿ ಮೂಡಿಸಲು ಇಷ್ಟು ಸಮಯ ಬೇಕಾಯಿತೇನೋ ಅನಿಸುತ್ತದೆ.

ಬಿಟ್ಟಿಚಾಕರಿ ನಿಲ್ಲಿಸಲು ಗೇಣಿನೀಡಿದುದಕ್ಕೆ ರಸೀದಿಯನ್ನು ಪಡೆಯಲು ಜೀತಗಾರರನ್ನು ವಿಮೋಚನೆಗೊಳಪಡಿಸಲು ಕಡಿಮೆ ಗೇಣಿಗಾಗಿ ಆರ್.ಓ.ಆರ್ ಪ್ರತಿಯಲ್ಲಿ ಹೆಸರು ದಾಖಲಿಸಲು ನೂರಾರು ಸಾವಿರಾರು ರೈತರ ಸಮಾವೇಶಗಳು, ರ್‍ಯಾಲಿಗಳು, ಪ್ರತಿಭಟನೆಗಳ ಮೂಲಕ ಹೋರಾಟಗಳು ಚಿಮ್ಮಿಬಂದಿವೆ. ಬಿಟ್ಟಿ ದುಡಿಮೆಯ ಬೆನ್ನಿನ ಬಾಸುಂಡೆಗಳ ಬೀದಿಯಲ್ಲಿ ಕೆರಳಿನಿಂತಿದೆ.

ಯಾವಮಾಲೀಕ ಗೇಣಿ ಕಡಿತಕ್ಕೆ, ಗೇಣಿ ರಸೀದಿಯನ್ನು ನಿರಾಕರಿಸುತ್ತಾನೋ, ಬಿಟ್ಟಿ ದುಡಿಮೆ ಪಡೆಯುತ್ತಾನೋ ಅಂತಹವನ ಮನೆಯ ಮುಂದುಗಡೆಗೆ ನೂರಾರು ರೈತ-ಕೂಲಿಕಾರರ ಮೆರವಣಿಗೆಯಲ್ಲಿ ಸಾಗಿ ಪ್ರತಿಭಟನೆಗಳನ್ನು ನಡೆಸಿ, ಸೆಣಸಿ ದಬ್ಬಾಳಿಕೆಗೆ, ಗೂಂಡಾ ದಾಳಿಗೆ ಪ್ರತ್ಯುತ್ತರ ನೀಡಿ ಸೋಲಿಸಿದ ವೀರ ಗಾಥೆಗಳು ಈ ನೆಲದಲ್ಲಿದೆ.

ಈ ರೀತಿಯಲ್ಲಿ ಭೂ ಮಾಲಿಕರ ವಿರುದ್ಧ ಸೆಣಸಿದ ಬಡರೈತ-ಕೂಲಿಕಾರನಿಗೆ ತನ್ನ ಸ್ವಾವಲಂಬಿ ಬದುಕಿಗೆ 'ಸಾಲ ಬಂಡವಾಳದ' ಅವಶ್ಯಕತೆ ಬೇಡಿಕೆಯಾಗಿ ಸಾಮೂಹಿಕ ಸ್ವರೂಪ ಪಡೆದಿದ್ದು 1982ರ ನಂತರವೇ ಅದುವರೆಗೆ ಕೆಲ ರೈತರು ಸದಸ್ಯರಾಗಿದ್ದರೂ ಸಾಲ ಪಡೆಯಲು ಕಾನೂನೊಂದು ತೊಡಕಾಗಿದ್ದದು ನಂತರ ತಿಳಿದುಬಂತು.

ಸಾಲಪಡೆಯುವ ರೈತನು ತಾನು ಸಾಲಪಡೆಯುವ ಒಟ್ಟು ಮೊತ್ತದ ಶೇ. 10ರಷ್ಟನ್ನು ಶೇರು ಬಂಡವಾಳವಾಗಿ ಮುಂಗಡವಾಗಿಯೇ ಕಟ್ಟಬೇಕಿತ್ತು. ಉದಾ : 10 ಸಾವಿರ ಸಾಲ ಪಡೆಯಲು ಉದ್ದೇಶಿಸಿದ ರೈತನು 1000 ರೂ ಮುಂಗಡವಾಗಿ ಶೇರುಕಟ್ಟಬೇಕಿತ್ತು. ಇದನ್ನು ಕಟ್ಟಲಾಗದವರು ಮತ್ತು ಭೂಮಾಲಿಕರ ಹತ್ತಿರ ವೈಯುಕ್ತಿಕವಾಗಿ ಸುಳಿದು ಸದಸ್ಯರಾಗಲಾರದವರು, 1982ರವರೆಗೆ ಸಹಾಕಾರಿ ಸಂಘದ ಹತ್ತಿರ ಸುಳಿಯಲು ಹೆದರುವ ಪರಿಸ್ಥಿತಿ ಇತ್ತು. ಒಟ್ಟಾರೆ ಇಲ್ಲಿಯವರೆಗೆ ಬಡರೈತ ಕೂಲಿಕಾರರಿಗೆ ಸಾಲ ಸೌಲಭ್ಯಗಳು ಸಿಗುತ್ತಿರಲಿಲ್ಲ.

ತಮ್ಮ ಅಭಿವೃದ್ಧಿಗಾಗಿಯೇ ಸಹಕಾರಿ ಸಂಘವಿರುವುದು ಅದರ ಆಡಳಿತ ಮಂಡಳಿಯ ಬಹಿರಂಗ ಚುನಾವಣೆಯ ಮೂಲಕವೇ ರಚಿಸಲ್ಪಡುವುದು, ಬಡರೈತರೆಲ್ಲಾ ಒಗ್ಗೂಡಿ ಸದಸ್ಯರಾಗಿ ಚುನಾವಣೆಗೆ ನಿಂತು ಪಟ್ಟಭದ್ರ ಹಿತಾಸಕ್ತಿಗಳನ್ನು ಎದುರಿಸಬಹುದೆಂಬ ಸತ್ಯವು ಅಲ್ಲಿಯವರೆಗೆ ಈ ರೈತರಿಗೆ ತಿಳಿದಿರಲಿಲ್ಲ. ಹಾಗೇ ಅದರ ಗೌಪ್ಯತೆಯನ್ನು ಕಾಪಾಡಿ ಜನತೆಯನ್ನು ವಂಚಿಸಲಾಗಿತ್ತು.

ಮೊದಲಬಾರಿಗೆ ಚಿಂತಿಸಿದ ಸಿಪಿಐ(ಎಂ) ಹಾಗೂ ರೈತ ಸಂಘವು ಸಾವಿರಾರು ಬಡರೈತ ಕೂಲಿಕಾರರನ್ನು ಸದಸ್ಯರನ್ನೊಗ್ಗೂಡಿಸಿ ಪ್ರತಿ ವರ್ಷ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಿತು. 1983ರಲ್ಲಿ 5 ಸ್ಥಾನಗಳಿಗೆ ಸ್ಪರ್ಧಿಸಿ ಒಂದು ಸ್ಥಾನ ಪಡೆಯುವ ಮೂಲಕ ಬಡರೈತ ಕೂಲಿಕಾರರಿಗೆ ಸಾಲ ಸೌಲಭ್ಯಸಿಗದಂತೆ ಮಾಡಿರುವ ಹುನ್ನಾರವನ್ನು ಹೊರಗೆಳೆಯಿತು. 1983ರಲ್ಲಿ ಕಾಂ। ಉಚ್ಚಿಲ್‌ರವರ ನಾಯಕತ್ವದಲ್ಲಿ ಎಲ್ಲಾ ಸ್ಥಾನಗಳಿಗೂ ಸ್ಪರ್ಧಿಸಿ, ಸದಸ್ಯರಿಗೆ ವಂಚನೆಯ ಹಿಂದಿನ ರಾಜಕೀಯ ವಿವರಿಸಿ ಎಲ್ಲಾ ಸ್ಥಾನಗಳಲ್ಲಿ ಅದ್ಭುತ ಜಯಪಡೆಯಿತು. ರೈತ ಸಂಘದ ಮುಖಂಡರಾದ ಪಾಲ್ ಡಿಸೋಜಾರವರು ಅಧ್ಯಕ್ಷರಾದರು.

ಮುಂದೆ ರೈತ ಸಂಘವು ಸಾಲ ಪಡೆಯಲು ಬಡರೈತರಿಗೆ ಅಡ್ಡಿಯಾಗಿದ್ದ ಮುಂಗಡ ಶೇರು ಹಣ ನೀಡುವಿಕೆಯ ವಿರುದ್ಧ ಹೋರಾಡಿ ಯಶಸ್ಸನ್ನು ಪಡೆದು ಸಾಲನೀಡಿಕೆಯಲ್ಲಿ ಶೇ. 10 ಶೇರು ಹಣ ಕಡಿತಗೊಳ್ಳುವಂತೆ ಕ್ರಮಕೈಗೊಳ್ಳಲಾಯಿತು.

ಹೀಗೆ ಒಂದೆಡೆ ರೈತ ಸಂಘ ಮತ್ತೊಂದೆಡೆ ಬಡರೈತರ ಪರವಾಗಿರುವ ಸಹಕಾರಿ ಸಂಘದ ನಿರ್ದೇಶಕ ಮಂಡಳಿ ಪಟ್ಟಭದ್ರ ಹಿತಾಸಕ್ತಿಗಳ ಪರವಿದ್ದ ಸಹಕಾರಿ ಸಂಘದ ದಿಕ್ಕಿನಿಂದ ಬಡ ರೈತರ ದಿಕ್ಕಿನೆಡೆಗೆ ಸೆಳೆದು ತರಲಾಯಿತು. ಅಂದಿನಿಂದ ಇಂದಿನವರೆಗೆ ವಿರುದ್ಧ ದಿಕ್ಕಿನೆಡೆ ತಿರುಗಿನೋಡದೆ ಅಭಿವೃದ್ಧಿಯೆಡೆಗೆ ದಾಪುಗಾಲು ಹಾಕುತ್ತಿದೆ. ಸಿಪಿಐ(ಎಂ) ನಾಯಕತ್ವದಲ್ಲಿರುವ ನಾಗರೀಕ ಸಮಿತಿಯು ಬಡರೈತ ಕೂಲಿಕಾರರ ಹಾಗೂ ಆ ಪ್ರದೇಶದ ಅಭಿವೃದ್ಧಿಯ ಕಾವಲುಗಾರನಾಗಿ ನಿಂತಿದೆ.

1982ರ ಪೂರ್ವದಲ್ಲಿ ಕೇವಲ 2000 ಸದಸ್ಯತ್ವ ಹೊಂದಿದ್ದ ಸಂಘ 8000 ಸದಸ್ಯತ್ವ ಸೇರ್ಪಡೆ ಮಾಡಲಾಯಿತು. ಶುಲ್ಕವು 10ರೂ ನಿಂದ 20 ರೂಪಾಯಿಗೆ ಹೆಚ್ಚಳವಾದ ಕಾರಣದಿಂದ ಸದಸ್ಯತ್ವವನ್ನು ಹಲವರು ನವೀಕರಿಸದೇ ಇದ್ದರಿಂದ ಈಗ 5000ದಷ್ಟಿದೆ. ಆಗ ಕೇವಲ ಶೇ. 20ರಷ್ಟಿದ್ದ ಬಡರೈತರ ಸಂಖ್ಯೆಯು ಈಗ ಶೇ. 80ಕ್ಕೆ ಸಾಗಿದೆ. ಅವರ ಕೃಷಿಗೆ ಸಾಗುವಳಿಗೆ, ಮಧ್ಯಮಾವಧಿ, ಧೀರ್ಘಾವಧಿ ಸಾಲಗಳಿಗೆ ಸೇರಿದಂತೆ ಗರಿಷ್ಠ 6 ಲಕ್ಷ ರೂ ವರೆಗೆ ಫಲಾನುಭವಿಗಳು ಪಡೆದು ಹಾಗೂ ಕೂಲಿಕಾರರು, ಪಶುಲಾಲನೆಗಾಗಿ, ಮನೆಕಟ್ಟಲು, ದೋಣಿ ಖರೀದಿಸಲು, ಇತರೇ ವ್ಯವಹರಿಸಲು ಮತ್ತು ಸಣ್ಣ ವ್ಯಾಪಾರಿಗಳು ತಮ್ಮ ವ್ಯಾಪಾರಕ್ಕಾಗಿ, ಕೆರೆ ರಿಪೇರಿಗಾಗಿ, ಮುಂತಾಗಿ ಹೀಗೆ ಇಡೀ ಗ್ರಾಮ ದುಡಿಯುವ ಜನಸಮೂಹವೇ ಹಣಪಡೆದು ಪಟ್ಟಭದ್ರ ಹಿತಾಸಕ್ತಿಗಳಿಂದ ತಮ್ಮ ಸಂಕೋಲೆ ಕಡಿದುಕೊಂಡು ಸ್ವಾತಂತ್ರ್ಯದ ಸವಿಯನ್ನು ಸ್ವಾವಲಂಬಿಗಳಾಗಿ ಸವಿಯುತ್ತಿದ್ದಾರೆ.

40ಲಕ್ಷಗಳಿಂದ 4 ಕೋಟಿಗೆ ಬೆಳೆದ ವಹಿವಾಟಿನಿಂದ 1995ರಲ್ಲಿ ಕೋಟೆ ಕಾರ್ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ಆಗಿ ಮೇಲ್ಮಟ್ಟವನ್ನು ಸಂಘವು ತಲುಪಿತು. ಈಗದು ತೊಕ್ಕೊಟ್ಟು ಹಾಗೂ ದೇರಳ ಕಟ್ಟೆಯಲ್ಲಿ ಶಾಖೆಗಳನ್ನು ತೆರೆದಿದೆ. ರಾಜ್ಯದೆಲ್ಲೆಡೆ ಶೇರುದಾರರು ಹಾಕಿದ ಬಂಡವಾಳಕ್ಕೆ ಲಾಭಾಂಶ ಸಿಗದೇ ನಷ್ಟಕ್ಕೀಡಾಗಿದ್ದರೆ ಈ ಬ್ಯಾಂಕ್ ಮಾತ್ರ ಶೇ. 15 ರಷ್ಟು ಲಾಭಾಂಶವನ್ನು ಕಳೆದ ಹಲವಾರು ವರ್ಷಗಳಿಂದ ಶೇರುದಾರರಿಗೆ ನೀಡಿ ಅವರನ್ನು ಮತ್ತಷ್ಟು ಉತ್ಸಾಹ ಭರಿತರನ್ನಾಗಿಸಿದೆ. 1982ರ ಪೂರ್ವದಲ್ಲಿ ಸಾಲ ನೀಡಿಕೆಯ ಶೇ. 65ರಷ್ಟು ವಸೂಲಾತಿಯ ತೊಂದರೆ ಅನುಭವಿಸುತ್ತಿದ್ದರೆ

ಪುಟ 9 ಕ್ಕೆ

ಬೆಟ್ಟಿಂಗ್ ಮಹಾಪೂರದಲ್ಲಿ ಕ್ರಿಕೆಟ್

ಮೂರನೇ ಜಗತ್ತಿನ ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾ, ದಕ್ಷಿಣ ಆಫ್ರಿಕಾ, ಜಿಂಬಾಂಬ್ವೆ, ವೆಸ್ಟ್ ಇಂಡಿಸ್, ನ್ಯೂಜಿಲ್ಯಾಂಡ್ ಜೊತೆಗೆ ಆಸ್ಟ್ರೇಲಿಯ ಮತ್ತು ಇಂಗ್ಲೆಂಡ್‌ಗಳಲ್ಲಿ ಕ್ರಿಕೆಟ್ ಎಂಬ ಪದ ಅಭಿಮಾನಿಗಳ ಪ್ರಾಣ. ಇಲ್ಲಿನ ನಿರುದ್ಯೋಗಿ ಉದ್ಯೋಗಿ ವಿದ್ಯಾರ್ಥಿ ಯುವಜನತೆಗೆ ರಾಷ್ಟ್ರ ಪ್ರೇಮ ಕೆಲವೊಮ್ಮೆ ಕುರುಡು ಪ್ರೇಮದ ಹುಚ್ಚು ಹೊಳೆ ಹರಿಸಲು ಇರುವ ಮಾರ್ಗ ಈ ಕ್ರಿಕೆಟ್. ಇಂತಹ ಕ್ರಿಕೆಟ್ ಇಂದು ಬೆಟ್ಟಿಂಗ್ ಎಂಬ ಚಂಡ ಮಾರುತಕ್ಕೆ ಸಿಕ್ಕಿ ಜಗತ್ತಿನ ಕೋಟ್ಯಾಂತರ ಕ್ರಿಕೆಟ್ ಪ್ರೇಮಿಗಳಿಗೆ ದಿಗ್ಭ್ರಮೆ ತಂದಿದೆ.

ಯಾವ ತಂಡ ಎರಡು ದಶಕಗಳ ಕಾಲ ಕ್ರೀಡೆಯಿಂದ ಬಹಿಷ್ಕರಿಸಲ್ಪಟ್ಟಿತ್ತೋ, ವಿವಾದಗಳಿಂದ ಗಾವುದ ದೂರ ಉಳಿದ, ಕ್ರಿಕೆಟ್ ತಂಡಗಳ ನಾಯಕರಲ್ಲೆ ಸಭ್ಯ ನಾಯಕ ಎಂದು ಹೆಸರು ಪಡೆದ ದಕ್ಷಿಣ ಆಫ್ರಿಕಾ ತಂಡದ ನಾಯಕ ಮತ್ತು ಆತನ ಸಹಪಾಟಿಗಳಿಂದಲೇ 'ಸಭ್ಯರ ಆಟ'ದ ಪರದೆ ಹರಿದಿದ್ದು ವಿಪರ್ಯಾಸ.

ಆಸ್ಟ್ರೇಲಿಯಾದಲ್ಲಿ ಟೆಸ್ಟ್ ಹಾಗೂ ಏಕದಿನ ಪಂದ್ಯಗಳ ಸರಣಿಯಲ್ಲಿ ಸೋತು ಬಸವಳಿದು ತವರಿಗೆ ಮರಳಿದ ಭಾರತದ ಸಚಿನ್ ತಂಡ ದ. ಆಫ್ರಿಕಾಕ್ಕೆ ಟೆಸ್ಟ್ ಸರಣಿ ಸೋತಾಗ ಇನ್ನು ಕ್ರಿಕೆಟ್ ಮುಗಿಯಿತು ಎಂಬ ಉದ್ಗಾರ ಎದ್ದಾಗ, ಭಾರತ ಮೈಕೊಡವಿ ಎದ್ದು ಏಕದಿನದ ಸರಣಿಯನ್ನು ಜಯಿಸಿ, ಕ್ರಿಕೆಟ್ ಪ್ರೇಮಿಗಳಲ್ಲಿ ನೆಮ್ಮದಿ ತಂದಿತ್ತು. ಆದರೆ, ಏಪ್ರಿಲ್ ಮೊದಲವಾರ ದೆಹಲಿ ಪೊಲೀಸರು ದ. ಆಫ್ರಿಕಾದ ತಂಡದ ಆಟಗಾರರಾದ ಹ್ಯಾನ್ಸಿ ಕ್ರೊನಿಯೇ "ನಿಕಿಬೋಯೆ, ಹರ್ಶಲ್ ಗಿಬ್ಸ್, ಪೀಟರ್ ಸ್ಟ್ರೈಡಮ್, ಪೆಪ್ಸಿ ಸರಣಿ ಸೋಲಲು 5ಲಕ್ಷ ಡಾಲರ್‌ಗೆ ಒಪ್ಪಂದ (10 ಲಕ್ಷ ಡಾಲರ್ ಎಂದು ಇಂಡಿಯಾ ಟುಡೆ ವರದಿ ಮಾಡಿದೆ.) ಪೂರ್ವಯೋಜಿತ ಪಂದ್ಯಹೊಂದಾಣಿಕೆ ಬಗ್ಗೆ ದೂರು ದಾಖಲಿಸಿಕೊಂಡಿದ್ದಾರೆ. ಇದರಲ್ಲಿ ಭಾರತೀಯ ಮೂಲದ ಇಂಗ್ಲೆಂಡಿನ ಪ್ರಜೆ ಸಂಜಯ್, ನಟ ಕಿಶನ್ ಕುಮಾರ್ ಮತ್ತು ರಾಜೇಶ್ ದೆಹಲಿಯ ಉದ್ಯಮಿ ಕಲ್ರಾ (ಉದ್ಯಮಿ) ಇವರುಗಳು ಆರೋಪಿಗಳೆಂದು ಹೆಸರಿಸಲಾಗಿದೆ. ರಾಜೇಶ್ ಕಾಲ್ರಾನನ್ನು ಬಂದಿಸಿದ್ದು ವಿಚಾರಣೆ ನಡೆಯುತ್ತಿದೆ.

ಎಲ್ಲವೂ 'ವಿಶ್ವಗ್ರಾಮ'ದಡಿ

ಕ್ರಿಕೆಟಿನಲ್ಲಿ 70ರ ದಶಕದಲ್ಲಿಯೇ ಜೂಜು ವಂಚನೆಯ ಆರೋಪ ಕೇಳಿಬಂದರೂ ಅಷ್ಟು ಮುಖ್ಯವಾಗಿರಲಿಲ್ಲ. ಆದರೆ 90ರ ದಶಕದ ನಂತರದಲ್ಲಿ, ಜಾಗತೀಕರಣ, ಉದಾರೀಕರಣ, ಮತ್ತು ಖಾಸಗೀಕರಣದ ಮೂಲಕ 'ವಿಶ್ವಗ್ರಾಮ'



ಮಾಡ ಹೊರಟ ಡಾಲರ್ ದೊರೆಗಳು ತಮ್ಮ ದೇಶಗಳ ಧಣಿಗಳಿಗಾಗಿ ಮೂರನೇ ಜಗತ್ತಿನ ಬಾಗಿಲು ತೆರಸಿ, ಲಾಭದೋಚಲು ಸಿಗುವ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಅದರಲ್ಲಿ ಈ ದೇಶಗಳಲ್ಲಿ ಅತ್ಯಂತ ಜನಪ್ರಿಯವಾದ ಕ್ರಿಕೆಟನ್ನು ಬಿಟ್ಟಾರೆಯೇ? ಹೀಗೆ ಬಂದ ಡಾಲರ್ ಕಂಪನಿಗಳು, ವರ್ಷಕ್ಕೊಂದು ಸರಣಿ ನಡೆಸತೊಡಗಿದವು. ಉದಾ : ಕೋಲಾ, ಪೆಪ್ಸಿ, ವಿಲ್ಸ್, ಸಿಗಾರ್, ಮತ್ತು ಬೆನ್ಸನ್ ಆಂಡ್ ಹೆಡ್ಜಸ್ಸ್ ಇತ್ಯಾದಿಗಳು ತಮ್ಮ ಉತ್ಪಾದನೆಗೆ ಮಾರುಕಟ್ಟೆ ಗಿಟ್ಟಿಸಲು ಸರಣಿಗಳನ್ನು ಸ್ಪಾನ್ಸರ್ ಮಾಡ ತೊಡಗಿದವು.

ದೇಶದ ಘನತೆ ಸಾರ್ವಭೌಮತೆಯನ್ನು ರಾಜಕಾರಣಿಗಳು ಮಂತ್ರಿ ಮಹೋದಯರು, ಸರ್ಕಾರ ಕೇವಲ ಕಮಿಷನ್‌ಗಾಗಿ ಎಲ್ಲವನ್ನು ಬಹು ರಾಷ್ಟ್ರೀಯರಿಗೆ, ಖಾಸಗಿ ಕಂಪನಿಗಳಿಗೆ ಸುಧಾರಣೆ ಹೆಸರಲ್ಲಿ, ಮಾರಾಟ ನಡೆಸಿದರೆ. ಕ್ರಿಕೆಟ್ ಆಟಗಾರರು ಕೂಡ ಕೇವಲ ಹಣಕ್ಕಾಗಿ ದೇಶ ನಿಷ್ಠೆ, ರಾಷ್ಟ್ರ ಪ್ರೇಮ ಕೋಟ್ಯಾಂತರ ಅಭಿಮಾನಿಗಳ ಅಭಿಮಾನ ಅಷ್ಟೆ ಏಕೆ? ತಮಗೆ ಹಣ ಖ್ಯಾತಿ ತಂದುಕೊಟ್ಟ ಕ್ರಿಕೆಟ್‌ಗೆ ವಂಚಿಸಿ ಬಾಜಿಯಲ್ಲಿ ಭಾಗಿಯಾಗಿದ್ದಾರೆ.

ಕ್ರಿಕೆಟಿನ ಮಾನ ಕಳೆದವರು.

ಇತರೆ ಕ್ರಿಡೆಗಳ ಜನಪ್ರಿಯತೆ ಕುಂಠಿತವಾದಂತೆ, ಕ್ರಿಕೆಟ್ ಹೆಚ್ಚೆಚ್ಚು ಜನಪ್ರಿಯತೆ ಉತ್ತುಂಗಕ್ಕೇರಿ ಆಟಗಾರರಿಗೆ ಖ್ಯಾತಿ ತಂದರೆ ಕ್ರಿಕೆಟ್‌ಗೆ ವಂಚನೆ ದಗಲ್ಬಾಜಿ ಹಗರಣದಲ್ಲಿ ಖ್ಯಾತ ತಾರೆಗಳು ದಾಖಲೆ ವೀರರು, ಮಹಾನ್ ಪಂಡಿತರು, ಕ್ರಿಕೆಟ್ ಮಂಡಳಿಯ ಹಲವರ, ಮೆನೇಜರುಗಳ ಹೆಸರುಗಳು ತೇಲಿ ಬರತೊಡಗಿದೆ.

ಭಾರತದ ಸುನಿಲ್ ಗವಾಸ್ಕರ್ ತಂದೆ ಮನೋಜ್ ಗವಾಸ್ಕರ್ ಪತ್ನಿ ಮೊರ್ಘನಿಲ್, ಕಪಿಲ್ ದೇವ್, ಪತ್ನಿ ರೋಮಿ ಕರ್ನಾಟಕದ ಜಿ.ಆರ್. ವಿಶ್ವನಾಥ್ ಅಜರುದ್ದೀನ್, ಸಚಿನ್, ಮನೋಜ್ ಪ್ರಭಾಕರ್, ನಯನ್ ಮೊಂಗಿಯಾ, ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಜಗಮೋಹನ್ ದಾಲ್ಮಿಯ, ಎ. ವೆಂಕಟರಾವ್, ಅಜಿತ್ ವಾಡೇಕರ್ ಮುಂತಾದವರ ಹೆಸರುಗಳು ಕಳಂಕಿತಗೊಂಡಿವೆ.

ಪಾಕಿಸ್ತಾನದ ಆಸೀಫ್ ಇಕ್ಬಾಲ್, ಸಲಿಂ ಮಲ್ಲಿಕ್, ವಾಸಿಂ ಅಕ್ರಂ, ರಶೀದ್, ಅಮೀರ್ ಸೋಹಿಲ್, ಮೋಹಿಸ್ ಖಾನ್, ಆಸ್ಟ್ರೇಲಿಯಾದ ಮಾರ್ಕವಾ, ಸ್ಟೀವ್‌ವಾ ಮತ್ತು ಶೇನ್ ವಾರ್ನೆ ಮುಂತಾದ ಜಗತ್ ವಿಖ್ಯಾತ ತಾರೆಗಳು ವಂಚನೆಯ ಪಟ್ಟಿಯಲ್ಲಿ ಸಿಲುಕಿದ್ದಾರೆ.

ಕ್ರಿಕೆಟ್ ತಾರೆಗಳ ಸಂಪತ್ತಿನಲ್ಲಿ ತಮ್ಮ ನೈಜ ಪ್ರತಿಭೆಯಿಂದ ಗಳಿಸಿದ್ದೆಷ್ಟು ರಾಷ್ಟ್ರ ತಂಡಕ್ಕೆ ವಂಚಿಸಿ ದೋಚಿದ್ದೆಷ್ಟು ಎಂಬ ಸತ್ಯ ಹೊರ ಬೀಳಬೇಕಿದೆ.

ರೇಸ್ ಕೋರ್ಸ್‌ನಿಂದ ಕ್ರಿಕೆಟ್‌ಗೆ ಬಾಜಿ ಮಾಫಿಯಾ!

ಕುದುರೆ ಜೂಜಿನಲ್ಲಿ ತೊಡಗಿದ್ದ ಬಾಜಿ ಮಾಫಿಯ ಇಂದು ಕ್ರಿಕೆಟ್ ಅಂಗಳದತ್ತ ದಾವಿಸಿದೆ. ಕುದುರೆ ಜೂಜಿನಲ್ಲಿ ಕಾನೂನು ತೆರಿಗೆ ಇತ್ಯಾದಿ ನಿಯಮಗಳಿದ್ದರೆ ಕ್ರಿಕೆಟ್‌ನಲ್ಲಿ ಈ ಯಾವ ಅಡೆತಡೆಗಳಿಲ್ಲದೆ ಕೋಟ್ಯಾಂತರ ರೂಪಾಯಿ ಸಂಪಾದನೆಯ ಆಕರ್ಷಣೆ ಕ್ರಿಕೆಟ್ಗಿದೆ. ಕುದುರೆ ಜೂಜಿನಲ್ಲಿ ದಿನವೊದಕ್ಕೆ ಅತ್ಯುತ್ತಮ ಸಂಪಾದನೆ 10 ಲಕ್ಷ ರೂ ಸಂಪಾದನೆ. ಬುಕ್ಕಿಗೆ ಕ್ರಿಕೆಟಿನಲ್ಲಿ ಪಂದ್ಯ ಒಂದಕ್ಕೆ 50 ಲಕ್ಷ ರೂ. ಸಂಪಾದನೆ.

ರೇಸ್‌ನಲ್ಲಿ ದಿನವೊಂಧಕ್ಕೆ 1 ಕೋಟಿ ರೂ ಕೈ ಬದಲಾದರೆ ಕ್ರಿಕೆಟ್ ಜೂಜಿನಲ್ಲಿ 1 ಸಾವಿರ ಕೋಟಿ ರೂ ಕೈ ಬದಲಾಗುತ್ತಿದೆ. ಭಾರತ ಪಾಕಿಸ್ತಾನ ಪಂದ್ಯವೆಂದರೆ 10 ಸಾವಿರ ಕೋಟಿ ರೂ ಬಾಜಿ ವ್ಯವಹಾರ ನಡೆಯುತ್ತಿದೆ. ಶಾರ್ಜಾದಲ್ಲಿ ಕ್ರಿಕೆಟ್ ಪ್ರಾರಂಭದ ನಂತರ ಬಾಜಿ ಕೇಂದ್ರವಾಗಿ ಮಾರ್ಪಟ್ಟಿದೆ.

ಗಲ್ಫ್‌ನಿಂದ ನಿಯಂತ್ರಿಸಲ್ಪಡುವ ಈ ಜೂಜು ಮಾಫಿಯ ದುಬೈ ಹಾಗೂ ಮುಂಬೈ ಗುಂಪುಗಳಾಗಿ ಕಾರ್ಯನಿರ್ವಹಿಸುತ್ತಿದೆ. ಈ ವಂಚನೆ ಬಾಜಿ ವ್ಯವಹಾರದ ಹಿಂದೆ ಭೂಗತ ಜಗತ್ತಿನ ದಾವೂದ್ ಇಬ್ರಾಹಿಂ ಮತ್ತು ವೈ. ಕುಮಾರ್‌ನ ಸಹಚರರ ಪ್ರಭಾವವಿದೆ ಎನ್ನಲಾಗಿದೆ.

ಕಠಿಣ ಕ್ರಮ ಅಗತ್ಯ.

ಈ ಪೂರ್ವಯೋಜಿತ ಪಂದ್ಯ ಹೊಂದಾಣಿಕೆ ಈ ಕ್ರೀಡೆಯನ್ನೇ ಅನುಮಾನಾಸ್ಪದವಾಗಿಸಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಅದರಲ್ಲಿ ಪಾಲ್ಗೊಂಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ ಈ ಬಾಜಿ ವ್ಯವಹಾರದಲ್ಲಿ ಭಾಗಿಯಾದ ಆಟಗಾರರನ್ನು ಕ್ರೀಡೆಯಿಂದ ಉಚ್ಚಾಟಿಸಿ ಕ್ರೀಡೆಗಳ ಘನತೆ ಮತ್ತು ಸೌಹಾರ್ದತೆ ಹೆಚ್ಚಿಸಬೇಕಾಗಿದೆ. ಕ್ರೀಡೆಯನ್ನು ಕ್ರೀಡೆಯಾಗಿಯೇ ಪೋಷಿಸಬೇಕಾಗಿದೆ.

ಕ್ರಿಕೆಟ್ ಬಾಜಿ ವ್ಯವಹಾರದಲ್ಲಿ ಹವಾಲಾ, ಪ್ರಮುಖ ರಾಜಕಾರಣಿಗಳು ಉದ್ಯಮಿಗಳು ಪಾಲ್ಗೊಂಡಿರುವ ಗುಮಾನಿ ವ್ಯಕ್ತವಾಗುತ್ತಿದೆ.

- ಜಯರಾಮ

ಸಹಕಾರಿ ಸಂಘದ ಯಶೋಗಾಥೆ......

ಪುಟ 8 ರಿಂದ

ಈಗದು ಶೇ. 35ರ ವಸೂಲಾತಿಯ ತೊಂದರೆ ಅನುಭವಿಸಿ ಶೇ. 30ರಷ್ಟು ಹೆಚ್ಚಿನ ವಸೂಲಾತಿಯನ್ನು ಸಾಧಿಸಿರುವುದೊಂದು ಹೆಗ್ಗಳಿಕೆಯ ವಿಷಯವಾಗಿದೆ.

ಬಾಲಸುಟ್ಟುಕೊಂಡ ಬೆಕ್ಕು

ಒಂದೆಡೆ ಬಿಟ್ಟಿಚಾಕರಿ, ದುಬಾರಿಗೇಣಿ, ಭೂಮಾಲಿಕತ್ವ ಹಾಗೂ ಗೇಣಿ ಪದ್ಧತಿಯಿಂದ ದರ್ಪ ನಡೆಸುತ್ತಿದ್ದ ಭೂಮಾಲಿಕರು ರೈತ ಸಂಘದಿಂದ ಪೆಟ್ಟು ತಿಂದು ಮೂಲೆಗುಂಪಾದರೆ ಮತ್ತೊಂದೆಡೆ ಸಿಪಿಐ(ಎಂ) ನೇತೃತ್ವದ ನಾಗರಿಕ ಸಮಿತಿಯಿಂದ ಸಹಕಾರಿ ಬ್ಯಾಂಕ್‌ನಲ್ಲಿ ಅಧಿಕಾರ ಕಳೆದುಕೊಂಡ ಭೂಮಾಲಿಕರು ಬಾಲ ಸುಟ್ಟುಕೊಂಡ ಬೆಕ್ಕಿನಂತೆ ಸಹಕಾರಿ ಸಂಘದ ವಿರುದ್ಧ ಕುಂಯಿಗುಡುತ್ತಿದ್ದಾರೆ. ಈ ರೀತಿಯ ವ್ಯಾಪಕ ಅಪ ಪ್ರಚಾರದಿಂದ 1986ರ ಚುನಾವಣೆಯಲ್ಲಿ 3 ಜನರ ಸೋಲನ್ನು ನಾಗರೀಕ ಸಮಿತಿ ಅನುಭವಿಸಿ ಎಚ್ಚೆತ್ತುಕೊಂಡಿತು.

ಮತ್ತೆ ಇತ್ತೀಚೆಗೆ ಬಿಜೆಪಿಯ ಶಾಸಕರಾದ ಶ್ರೀಯುತ ಜಯರಾಂ ಶೆಟ್ಟಿಯವರು ಆ ಪ್ರದೇಶದ ಭೂಮಾಲಿಕರನ್ನೆಲ್ಲಾ ಒಗ್ಗೂಡಿಸಿ 1995ರಿಂದ ಈ ಸಹಕಾರಿ ಸಂಘದ ವಿರುದ್ಧ ಅಪಪ್ರಚಾರವನ್ನು ಸಂಘಟಿಸಿ 1999ರ ಚುನಾವಣೆಯಲ್ಲಿ 8 ಸ್ಥಾನಗಳಿಗೆ ಸ್ಪರ್ಧೆಗಿಳಿಸಿ ಶತಾಯುಗತಾಯ ಪ್ರಯತ್ನಿಸಿ ಮರಳಿ ಬಾಲ ಸುಟ್ಟುಕೊಂಡು ಒಂದೇ ಒಂದು ಸ್ಥಾನಗೆಲ್ಲಲಾಗದೆ ನಿರಾಶೆ ಹೊಂದಿದರೆ, ನಾಗರೀಕ ಸಮಿತಿ ಅದ್ಭುತ ಬಹುಮತದಿಂದ ಯಶಸ್ಸನ್ನು ಪಡೆದು ತಮಗಾರು ಸಾಟಿಯಿಲ್ಲವೆಂಬಂತೆ ಮುನ್ನಡೆದಿದೆ.

ಆಳುವ ಸರ್ಕಾರ ತನ್ನ ಬೆಂಬಲಿಗರಿಗೆ ಬಹುಮತ ಪಡೆಯಲು ಸಹಕಾರಿ ಸಂಘಗಳಿಗೆ ಗ್ರಾಮ ಪಂಚಾಯತ್‌ಗಳಿಗೆ ಕೆಲವು ಸದಸ್ಯರನ್ನು ನೇಮಕಮಾಡುವುದಿದೆ. ಅಂತಹದೊಂದು ಪ್ರಸಂಗ ಶ್ರೀಯುತ ಬಂಗಾರಪ್ಪನವರು ಮುಖ್ಯಮಂತ್ರಿಗಳಾದಾಗ ಈ ಸಹಕಾರ್ರಿ ಸಂಘ ಎದುರಿಸಿತು. 3 ಮಂದಿ ಕಾಂಗ್ರೆಸ್ ಕುಳಗಳನ್ನು ಸೇರ್ಪಡೆ ಮಾಡಲು ಆದೇಶ ಹೊರಡಿಸಿದಾಗ ಅದರ ವಿರುದ್ಧ ನಿರ್ದೇಶಕರ ಮಂಡಳಿ ತೀರ್ಮಾನಿಸಿ ಕೋರ್ಟಿಗೆ ಹೋಯಿತು. ಸಹಕಾರದ ಪಾಲನ್ನು ಸಹಕಾರಿ ಸಂಘದಿಂದ ವಾಪಾಸು ನೀಡಿ ಆದರ ಸದಸ್ಯರ ಅಗತ್ಯವಿಲ್ಲವೆಂದು ವಾದಿಸಿ ಜಯ ಸಾಧಿಸಿ ಅವರನ್ನು ಹೊರಗಟ್ಟಿತು. ಹೀಗೆ ಮತ್ತೊಂದು ಆಳುವ ವರ್ಗದ ಕುತಂತ್ರವನ್ನೂ ಹಿಮ್ಮೆಟ್ಟಿಸಿತು.

ಇದೇ ರಾಜ್ಯದಲ್ಲಿ ಹಾಸನ ಜಿಲ್ಲೆಯಲ್ಲಿ ಸಹಕಾರಿ ಸಂಘದ ಸದಸ್ಯತ್ವ ಶುಲ್ಕವನ್ನು 50 ರೂಪಾಯಿಯಿಂದ 100 ರೂಗಳಿಗೆ ಹೆಚ್ಚಿಸಿಕೊಳ್ಳಲು ಸರ್ಕಾರ ಆದೇಶ ಹೊರಡಿಸಿದರೂ ಅದು ಬಡರೈತರು ಕೂಲಿಕಾರರು ಸದಸ್ಯತ್ವ ಹೊಂದಲು ಅಡ್ಡಿಯೆಂದು ಈಗಲೂ 20 ರೂಪಾಯಿಗಳನ್ನೇ ಸದಸ್ಯತ್ವ ಶುಲ್ಕವನ್ನಾಗಿ ಪಡೆಯುವ ರಾಜ್ಯದ ಏಕಮೇವ ಸಂಘವಾಗಿದೆ. ರಾಜ್ಯ ಸರ್ಕಾರದ ವೇತನ ಶ್ರೇಣಿಯಂತೆ ಬೋನಸ್, ತುಟ್ಟಿಭತ್ಯೆ, ರಜಾಸೌಲಭ್ಯ ಮುಂತಾಗಿ ಅನುಕೂಲ ಪಡೆದ 24 ಸಿಬ್ಬಂದಿಯುಳ್ಳ ಸಹಕಾರಿ ಸಂಘವಿದು ಇದಕ್ಕೂ 19 ಜನರ ಸಿಬ್ಬಂದಿ ಅವಶ್ಯಕತೆ ಇದ್ದು ಸರ್ಕಾರ ಪರವಾನಿಗೆ ನೀಡಬೇಕಾಗಿದೆ. ಈಗಾಗಲೇ 2 ಶಾಖೆಯನ್ನು ಹೊಂದಿರುವ ಸಂಘವು ಮತ್ತೆರಡು ಶಾಖೆ ತೆರೆಯಲು ಸರ್ಕಾರದ ಪರವಾನಗಿಗಾಗಿ ಕಾಯುತ್ತಿದೆ.

ಹೌದು ಎಲ್ಲೆಡೆ ಇಲ್ಲಿನ ಶೇ. 35ರಷ್ಟು ಸಾಲವು, ಬಡರೈತರು - ಕೂಲಿಕಾರರು ಕೇಂದ್ರ-ರಾಜ್ಯ ಸರ್ಕಾರಗಳ ಹೊಸ ಆರ್ಥಿಕ ನೀತಿ, ಕೃಷಿ ನೀತಿ ಆಮದು-ರಫ್ತು ನೀತಿಗಳಿಗೆ ತುತ್ತಾಗಿ ಪಾವತಿಯಾಗುತ್ತಿಲ್ಲ. ಈ ಬಗ್ಗೆ ವಿಶೇಷ ಕ್ರಮ ಕೈಗೊಳ್ಳುವ ಅವಶ್ಯಕತೆ ನಿರ್ದೇಶಕ ಮಂಡಳಿಯ ಮುಂದಿದೆ.

1994ರಲ್ಲಿ ಆ ಪ್ರದೇಶದ ಭೂಮಾಲಿಕರನ್ನೆಲ್ಲಾ ಒಗ್ಗೂಡಿಸಿ ಬಿಜೆಪಿ ನಾಯಕತ್ವದಲ್ಲಿ ನಿರ್ದೇಶಕ ಮಂಡಳಿ ಹಿಡಿಯಲು ಮುಂದಾದಾಗ ಸಿಪಿಐ(ಎಂ) ನಾಯಕತ್ವದಲ್ಲಿ ನಾಗರೀಕ ಸಮಿತಿಯನ್ನು ರಚಿಸಿಕೊಂಡು ಸೇರಿಸಲು ನೆರವಾದ ಎಂ.ಎ ಬಷೀರ್‌ರವರನ್ನು ಹಾಗೂ ಎಡಚಳುವಳಿಯ ಎಲ್ಲಾ ಸಮೂಹ ಸಂಘಗಳನ್ನು ಯಾವುದೇ ಎಡೆಕೊಡದೆ ಉತ್ತಮ ಆಡಳಿತ ನಿರ್ವಹಣೆಯಲ್ಲಿ ತೊಡಗಿದ ಎಲ್ಲಾ ನಿರ್ದೇಶಕರನ್ನು ವಿಶೇಷವಾಗಿ ನೆನೆಯುತ್ತಾ ಇದೀಗ ಲಾಭದಲ್ಲಿ ಬ್ಯಾಂಕಿನ ಕೇಂದ್ರ ಕಛೇರಿಯನ್ನು ಸ್ವಂತ ಕಟ್ಟಡಕ್ಕೆ ವರ್ಗಾಯಿಸಲು ತಯಾರಿ ನಡೆದಿದ್ದು, ಕೋಟಿಕಾರ್ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ಯಶೋಗಾಥೆಯನ್ನು ಐಕ್ಯರಂಗಕ್ಕೆ ವಿವರಿಸಿದ ಕಾಂ।ರಾಮಚಂದ್ರ ಉಚ್ಚಿಲ್ ಉದ್ಘಾಟಿಸಿ ನಮ್ಮನ್ನೆಲ್ಲಾ ಆಹ್ವಾನಿಸುತ್ತಿದ್ದಾರೆ. ಹೋಗೋಣ ಬನ್ನಿ ಯಶೋಗಾಥೆಯ ಅನುಭವ ಪಡೆಯೋಣ.

ಕೋಟಿಕಾರ್ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ನಿರ್ದೇಶಕರು

1. ಕಾಂ. ರಾಮಚಂದ್ರ ಉಚ್ಚಿಲ್
2. ಕಾಂ. ಪಾಲು ಡಿಸೋಜ
3. ಎಂ.ಎ. ಬಶೀರ್
4. ಅಹಮ್ಮದ್ ಯು.
5. ಕಾಂ. ಕೋರಗಪ್ಪ
6. ಕೆ. ಕೃಷ್ಣ ನಾಯರ್
7. ಕಾಂ. ಪರಮೇಶ್ವರ ಶೆಟ್ಟಿ
8. ಕಾಂ. ಜಿ.ಎಸ್. ನಳಿನಾಕ್ಷಿ

ಕಥೆ

ಅಮರೇಶ್ ನುಗಡೋಣಿಯವರು ಇತ್ತೀಚಿನ ದಶಕಗಳಲ್ಲಿ ಹೆಸರು ಮಾಡಿರುವ ಸತ್ವಯುತ ಕಥೆಗಾರರಲೊಬ್ಬರು. ಹೈದರಾಬಾದ್ ಕರ್ನಾಟಕದ ಸಮಾಜದ ಬಸಿರೊಳಗೆ ಬೆಳೆಯುತ್ತಿರುವ ಸಂಘರ್ಷಗಳನ್ನು ಅವರ ಕಥೆಗಳು ಚಿತ್ರಿಸುತ್ತವೆ

ಕಳೆದ ಸಂಚಿಕೆಯಿಂದ ಮುಂದುವರೆದದ್ದು

ತಮಂಧದ ಕೇಡು

ಅಮರೇಶ ನುಗಡೋಣಿ

ಏನೂ ಮಾಡುವಂಗಿದ್ದಿಲ್ಲ. ದುರುಗ ಮಗನ್ನ ಹಿಡಕಂಡು, 'ಮಗಾ... ಚೆನ್ನಮಲ್ಲಯ್ಯ' ಅಂತ ಅತ್ತುಬುಟ್ಟ. 'ಹ್ವಾದ ಗಿಡಗಳು ಬರ್ತಾವೇನು?' ಅಂದ. ಅದರಾಗ ಚೆನ್ನನ ಪರೀಕ್ಷೆಗಳು ಬಂದಿದ್ದುವು. ಉರಿವ ಚಿಂತೆನ್ನ ತುಂಗಮ್ಮನಲ್ಲಿ ಹಾಕಿ ಚೆನ್ನ ಹೋಗಿಬುಟ್ಟ. ಆಮ್ಯಾಲೆ ಶಾಂತಗೌಡ ದುರುಗನಿಗೆ ಪರಿಪರಿಯಾಗಿ ಸಮಾಧಾನ ಮಾಡಲು ನೋಡಿದ. ಏನು ಮಾಡಿದರೂ ದುರುಗ ಮೊದಲಿನಂಗ ಜೀವ ತುಂಬಿದ ಮನುಷ್ಯ ಆಗಲೇ ಇಲ್ಲ. ಚಂದವ್ವ ಬದುಕಿದ್ದಿದ್ದರೆ ಈ ಮರಗಳು ಮಾಯವಾಗುತ್ತಿದ್ದಿಲ್ಲ ಅಂತ ದುರುಗ ನೆನೆನೆನೆದು ಅಳುತ್ತಿದ್ದ. ಹಂಗೋ ಜೀವ ಹಿಡಕಂಡು ಮಗನ್ನ ನೋಡುತ್ತ ನೆಮ್ಮದಿ ಪಡಕಂತಿದ್ದ. ರಸೂಲಸಾಬ ಮರಗಳ ಸಾವಿರಾರು ತುಂಡುಗಳನ್ನು ಲಾರಿಯಲ್ಲಿ ಸಾಗಿಸಿಕೊಂಡು ಹೋಗಿ, ಆರು ತಿಂಗಳಮ್ಯಾಲೆ ಎರಡು ಬಂಡಿಗಳನ್ನು, ಜತಿಗೆ ಕೂರಿಗೆ, ಕುಂಟೆ, ಮಡಿಕೆ, ಸಣ್ಣಪುಟ್ಟ ಗಳೇವುದ ಸಾಮಾನುಗಳನ್ನು ಬಿಗುದುಕೊಂಡು ಲಾರಿಯಲ್ಲಿ ಹೇರಿಕೊಂಡು ತಂದು ಶಾಂತಗೌಡನ ಮನೆ ಮುಂದ ಕುಂದ್ರಿಸಿದ. ಊರುಕೇರಿ ಮೊದಲು ಮಾಡಿ, ಪಶುಪಕ್ಷಿ ಕಡೆಯಾಗಿ ನಿಂತು ನೋಡಿ ಬೆರಗಾಗಿ ಕಣ್ಣುತುಂಬ ತುಂಬಿಕೊಂಡವು. ಶಾಂತಗೌಡ ಒಂದು ಬಂಡಿಯನ್ನ ತೆನ್ನ ಲಕ್ಕ ರುದ್ರಮ್ಮನಿಗೆ ಕಳಿಸಿದ. ಬಸ್ವನ ಜಯಂತಿಗೆ ದುರುಗನೇ ಬಂಡಿನ್ನ ತೊಳೆದು ಇಬಿತ್ತಿ ಹಚ್ಚಿ, ಕುಂಕುಮದ ಬೊಟ್ಟಿಟ್ಟು ಊದಿನಕಡ್ಡಿ ಬೆಳಗಿ, ಕಾಯಿ ಒಡೆದು, ನೈವೇದ್ಯ ಹಿಡಿದು ಪೂಜೆ ಮಾಡಲು ಬಗ್ಗಿ, ಶರಣು ಮಾಡಿ ಅಂಗೇ ಬಂಡಿಗೆ ಹಣೆಹಚ್ಚಿ ದುಃಖಿಸಿದ್ದುದು ನರಮನುಷ್ಯರಿಗೆ ಗೊತ್ತಾಗಲಿಲ್ಲ! ದುರುಗನ ಜೀವ ಒಂದು ದಿನವೂ ಆ ಬಂಡ್ಯಾಗ ಕುಂತುಕೊಳ್ಳಲಿಲ್ಲ. ಊರು-ಕೇರಿ ಮಂದಿಗೆ ಆ ಬಂಡ್ಯಾಗ ಕುಂತ ನೋಡುವುದೆಂದರೆ ದೇವೇಂದ್ರನ ರಥದಾಗ ಕುಂತಂಗ ಅಂತ ತಿಳಕಂಡು ಉಬ್ಬಿಹೋಗುತ್ತಿದ್ದರು....

ದುರುಗನ ಚಿತ್ತ ಎತ್ತಗೋ ಹರಕೊಂಡು ಹೋಗಿತ್ತು. ಅವನ ದೇಹ ಮಾತ್ರ ಕತ್ತಲಲ್ಲಿ ಹೆಂಡಮನೆ ಮುಂದ ಕುಂತಿತ್ತು. ಮೈಗೆ ಬಾಳ ಚಳಿ ಬಡದಾಗ ಎಚ್ಚತ್ತು ಕಣ್ಣುಜ್ಜಿಸಿದ. ಮೈ ತೊಯ್ದಂಗಾಗಿ ನಮ್ಮಾಗಿತ್ತು. ಬೆಳಕು ಹರಿಯಲು ಬಂದಂಗಿತ್ತು. ಆದರೆ ಎತ್ತಗನ್ನ ನೋಡು ಅರಿಬೆಳಗ ಕಾಣಲು ಸುರುವಾಯ್ತು ಗಾಬರಿಯಾಗಿ ತನ್ನ ಮನೆ ಸುತ್ತ ತಿರುಗಿದ. ಜೀವ ತಡಿಲಾರದೆ, ಎರಡು ವರ್ಷದಿಂದ ತನ್ನ ಮನೆ ಸುತ್ತ ನಟ್ಟಿದ್ದ ನಾಕೈದು ಗಿಡಗಳು ಜೀವ ಹಿಡಕಂಡು ನಿಂತಿದ್ದವು. ಅವುಗಳನ್ನು ಮುಟ್ಟಿ ಮುಟ್ಟಿ ನೋಡಿದ. ತಣ್ಣಗಿದ್ದವು ನೀರು, ನೀರು. 'ದುಮದರಿ ಎದ್ದಾದ ಏನ? ಅನಕಂಡ. ಹನ್ನೆರಡು ಮಾರು ದೂರಿದ್ದ ಶಾಂತಗೌಡನ ಕರೆಕಲ್ಲಿನ ದೊಡ್ಡಮನೆಯ ಬೆನ್ನುಗ್ವಾಡೆ ಕಾಣಲಿಲ್ಲ. ಹಿಂದಿದ್ದ ಕೇರಿ ಗುಡಿಸಲುಗಳು ಕಾಣಲಿಲ್ಲ. ತಾಯಮ್ಮನ ಓಣಾಗಿದ್ದ ದೊಡ್ಡ ಬೇವಿನಮರ ಯಾವ ದಿಕ್ಕಿಗೈತೆ ಅಂತ ಅನುಮಾನ ಬಂತು ದನಕರ, ನಾಯಿ, ಕುರಿ, ಗುಬ್ಬಿ ದನಿ ಮಾಡುವುದು ಕೇಳಿಸುತ್ತಿದ್ದವು. ಕೇರಿಯಿಂದ ದನಿಗಳು ಕೇಳಿಸಿದವು. ಊರವರು ಮನೆಮಾರಿಗಿ ಮ್ಯಾಗ ನಿಂತು ಮಾತಾಡಿದಂಗ ದನಿ ಬರುತ್ತಿದ್ದವು. ಮನೆ ಬಾಗಿಲು ಮುಚ್ಚಿಕೊಂಡು ಕೇರಿಕಡೆ ಬಂದ. ಸಮೀಪ ಸಮೀಪ ಬಂದಂಗೆಲ್ಲ ಬಸ್ಸಪ್ಪನ ಗುಡಿಸಲು ಕಂಡಿತು. ನಾಯಿಗಳು. ಕೋಳಿಗಳು ಹೆಂಗೆಂಗೋ ನೋಡಿಕಂತ ನಿಂತಲ್ಲೇ ನಿಂತಿದ್ದವು. ದನಕರುಗಳು ಎತ್ತೆತ್ತಗೋ ಮುಖ ಮಾಡಿ ಬಾಲ ಬೀಸುತ್ತಿದ್ದವು. ದಟ್ಟವಾಗಿ ಹೊಗೆತುಂಬಿದಂಗ 'ದುಮದುರಿ' ಕುಂದಿತ್ತು.

'ಏ ದುರ್ಗಣ್ಣ ಬಾರಾ! ದುಮದುರಿ ಎದ್ದಾದೆ' ಅಂದು ಕರೆದ, ಬಸ್ಸಪ್ಪ 'ಹೌದು! ಹೆಂಗಾದ ನೋಡು, ಮುಂದಿದ್ರ ನಿನ್ನ ಮನೆ ಕಾಣವಲ್ದು!' ಅನಕಂತ ಬಂದು ಕುಂತ ಬಸ್ಸಪ್ಪ ಅರೆ ಹೊತ್ತಿಗೇ ಚಿಮಣಿ ಬೆಳಕಿನ್ಯಾಗ ಬಾಣ್ಣೆ ಹುಡ್ಯಾಕ ಹತ್ತಿದ್ದ.

'ಅರೆಹೊತ್ತಿಗೆ ಕುಂತಿದ್ದಿ....'

'ತಾಯ್... ಇದು ಬೇಸಾದ್ದೋಇದು! ನೀನೇ ಹೇಳ ಹೆಂಗಾದ್ದ'

ದುರುಗನಿಗೆ ನೆಪ್ಪಿರಲಿಲ್ಲ. ಈಗ ವಾರದಿಂದ ಶಾಂತಗೌಡ ಹೇಳಿ ಕಳಿಸಿದ್ದ. ಅಲ್ಲಲ್ಲಿ ಸುತ್ತಮುತ್ತ ಮಳೆ ಬರುತ್ತಿತ್ತು. ನಮ್ಮ ಸೀಮೆಗೆ ಮಳೆ ಬಂದ್ರೆ ಬೀಜ ಬಿತ್ತಬಹುದಾಯ್ತು ಅಂತಂದಿದ್ದ. ಈ ವರ್ಷ ಮಾನ್ಸೂನ್ ಮಳೆ ಬಂದು ಹೋದರೂ ಮಳೆಯಿದ್ದಿಲ್ಲ. ಅರ್ಧ ಹೊಲಗುಳು ಬೀಜ ಕಂಡಿದ್ದಿಲ್ಲ. ದೇವರು ಮಾಡಿದ್ದ ಏನಾದ, ಅಂತ ಊರುಕೇರಿ ಮಂದಿ ಬಾಡಿಹೋಗಿದ್ದರು. ಅದೇನೋ ತುಫಾನು ಬಂದದಂತ. ಮಳೆ ಬರಾಕಹತ್ತಾದಲ್ಲ. ಅದರಿಂದನೇ ಮೋಡ ಮುಚ್ಚಿಗಂಡಾದ. ತೂಪ್ರಿ ತೂಪ್ರಿಯಂತೂ ಬೀಳಾಕ ಹತ್ತಾದ. ಮಳೆ ಬಂದ್ರೂ ಬಂತ! ದುರುಗಾ, ಹೊಲಗಳನ್ನು ಯಾಕ ಖಾಲಿ ಬುಡಬೇಕು/ ಬೀಜ ಕಾಣಿಸಿದ್ದಾಯ್ತು. ನಮ್ಮ ಹಿರೇರು ಮೂಲೆಕಾರ್ತ್ಯಾಗ ಬಿತ್ತಿ ಕೂರಿಗೆಗೆ ಮೂರು ಖಂಡುಗ ಜ್ವಾಳ ಬೆಳಕಂಡಾರಂತ! ಕಾಲದಾಗ ನಾವೂ ಯಾಕ ಅಥ ಕಾಲನ್ನ ನೋಡಿ ಅನುಭವುಸಬಾರ್ದು ಹೇಳು/ ಅಂಗ ನೋಡಿದ್ರ ಇದು ಕಡುಗು ಮಳೆ!' ಶಾಂತಗೌಡ ಹುರುಪಿಲೆ ಹೇಳಿದ್ದ. ಬೀಜ ಬಿತ್ತಲು ಸಜ್ಜ ಮಾಡಿ ಇಟಗಂಡಿದ್ದ ಕೂರಿಗಿ ಸಾಮಾನದಾಗ ಎಲ್ಲ ಸರಿಯಿದ್ದುವು. ಬಾಣ್ಣೆನ್ನ ಇಲಿಚಮ್ಮ ಕಡುದು ಬುಟ್ಟಿತ್ತು. ಅದಕಂಡು ಶಾಂತಗೌಡ ಬಸ್ಸಪ್ಪಗ ಬಾಣ್ಣೆ ಮಾಡಿಕೊಡು ಅಂತ ಹೇಳಿದ್ದ.

'ಅಲ್ಲ ದುರ್ಗಣ್ಣ, ಈ ನಿಮಗೌಡುಗ ಏಟು ಆಸೆಯಿದ್ದಿತು. ಒಂದೇ ಹೆಣ್ಣು ಐತೆ. ಅದು ಕೊಟ್ಟುಮನಿಗೆ ಹೋಗದು! ಗಂಡಿಲ್ಲ! ಆಸೆ ನೋಡಿದ್ರ ಬೆಟ್ಟದಂಗ..! ಅಲ್ಲ, ಒಂದು ವ್ಯಾಳ್ಯೆ ನಾಕೈದು ಗಂಡು ಹುಟ್ಟಿದ್ರ ಹೆಂಗ ಮಾಡ್ತಿದ್ದನೋ!' ಅಂದ ಬಸ್ಸಪ್ಪ. ದುರುಗ ಮಾತಾಡಲಿಲ್ಲ. ಸಲುವೊತ್ತು ತಡದು ಬಗಲಾಕ ಸರುದು ಬಸ್ಸಪ್ಪ, 'ನಿನ್ನ ಮಗ ಬಾದ್ದೂರ! ಓದಿಕೊಂಡದ್ದು ಸಾರ್ಥಕವಾಯ್ತು ನೋಡು. ಅಲ್ಲ, ನಡಿಲಿ ಬಿಡಲಿ ಆ ಮಾತು ಬ್ಯಾರೆ. ಅಕ್ಕಮ್ಮ, ಅದೇ ಸಣ್ಣ ಗೌಡಸಾನಿ ನಮ್ಮ ಚೆನ್ನನ್ನ ಮಾಡ್ಕೊಂತಿನಿ ಅಂದಾಳಂತಲ್ಲ ಅದೇ ಸಾಕು! ಅಲ್ಲ, ಅದು ಸಣ್ಣ ಮಾತೇನು? ನಮ್ಮ ಬಸ್ವಣ್ಣದೇವರು ಮಾಡ ಆಟಕ್ಕ.. ನಮ್ಮ ಕೈಯಾಗೇನಾದ?'

ದುರುಗನಿಗೆ ಸಿಟ್ಟು ಬಂತು. 'ಬಸ್ಸಪ್ಪ, ಅದೆಂಗ ಸಾಧ್ಯಾದಂತ....' ನಡುವೆ ಬಾಯಿ ಹಾಕಿ 'ಯಾವ ಕಾಲಕ್ಕ ಏನು ನಡೀಬೇಕು ಅದು ನಡಿತಾದ! ಅಲ್ಲ, ನೀನು ಜೀವಗಟ್ಟಿಗಿ ಹಿಡಕಂಡಿರು!' ಅಂದ. ಅಷ್ಟರಾಗ ಬಸ್ಸಪ್ಪನ ಹೇಣ್ತಿ ಹೊರಗ ಬಂದು ಚಾವು ಕೊಟ್ಟಳು. ದುರುಗ ಎದ್ದು ಬಾಯಿ ತೊಳಕೊಂಡು ಚಾವು ಕುಡಿಯತೊಡಗಿದ ದುಮದುರಿ ಕರಗಿದ್ದಿಲ್ಲ. ಸುತ್ತಮುತ್ತ ಕೇರಿ ತುಂಬ ದುಮದುರಿ ಬಗ್ಗೆ ಬೆರಗಾಗಿ, ನನ್ಗ ನೀನು ಕಾಣದಿಲ್ಲ, ನಿನ್ಗ ನಾನು ಕಾಣದಿಲ್ಲ ಅಂತ ಕೇರಿ ಮಂದಿ ಚಿಕ್ಕೋರು ಮಾತಾಡುತ್ತಿದ್ದರು. ಆಕೆ ಗುಡಿಸಲು, ಈಕೆಗೆ ಕಾಣವಲ್ದು, ಈಕೆ ಗುಡಿಸಲು, ಆಕೆಗೆ ಕಾಣವಲ್ದು ಅಂತ ಮಾತಾಡಿಕೊಂಡೇ ಬೆಳಗಿನ ಬದುಕಿಗೆ ನಿಂತುಬುಟ್ಟಿದ್ದರು. ಚಿಕ್ಕೋರು ಮಾತ್ರ ದುಮದುರಿ ಒಳಗನೇ ಕಣ್ಣುಮುಚ್ಚಾಟ ನಡಿಸಿದ್ದವು. 'ಚೆನ್ನ ಬಂದಿದ್ನಲ್ಲ.... ಹೋದ್ನಾ?' ಬಸ್ಸಪ್ಪನ ಹೇಣ್ತಿ ಕೇಳಿದಳು.

'ಹೋದ ಅಂದ ದುರುಗ.

'ಪಾಡಾಯ್ತು ಬುಡು! ಮತ್ತೆ ಬರಾದು ಬ್ಯಾಡ! ಓದಿಕೊಂಡಾನ, ಕೆಲಸ ಸಿಕ್ಯಾದ. ರಾಜ ಇದ್ದಂಗ ಇರದು ಬುಟ್ಟು... ಹೌದಲ್ಲೇನಣ್ಣ? ನಮಗ್ಯಾಕಬೇಕು? ಲೋಕದಾಗ ನಡಿವಲುದ್ದು ಮಾಡಾಕ ಹೋಗಿ ನಿನ್ನ ಜೀವಕ್ಕ ನಿರುಮ್ಮಳ ಇಲ್ದಂಗ.....

'ಸುಮ್ನಿರು ಸುಮ್ನಿರು' ಅಂತ ಬಸ್ಸಪ್ಪ ಹೇಣ್ತಿಗೆ ಗದರಿಸಿದ. ದುರುಗ ಎದ್ದು ನಡೆದ. ಕುಂತರ ಸಮಾದಾನಿಲ್ಲ, ನಿಂತರಿಲ್ಲ. ಶಾಂತಗೌಡುಗ ಈ ಸುದ್ದಿ ಕಿವಿಗೆ ಬಿದ್ದಿತೋ ಏನೋ, ಅವತ್ತು ದುರುಗನಿಗೆ, ದುರುಗಾ, ನಿನ್ನ ಮಗ ಚೆನ್ನಾ... ಅವನು ನನ್ಗೂ ಮಗ' ಅಂದ

'ಊರಿನ ಮಗ ಅನ್ನು, ಶಾಂತಪ್ಪ' ಅಂತ ಬಗಲಾಗಿದ್ದ ಸೂಗಪ್ಪ ಮಾಸ್ತಾರ ಸೇರಿಸಿದ್ದ.

'ನಾನು ಅವನಿಗೆ ಬೇಕಾದಟು ಸಹಾಯ ಮಾಡೀನಿ' ಶಾಂತಗೌಡನ ಮಾತಿಗೆ, 'ಯಪ್ಪ, ಈಗ ಇಲ್ಲಂತ ಯಾರಂದಾರ' ಅಂದ ದುರುಗ.

'ನೀನಿದ್ದಂಗ ನಿನಮಗ ಇಲ್ಲ. ದುರುಗಾ... ಅವನು ಉಂಡು ಗಂಗಾಳದಾಗ ಉಚ್ಚಿವಯ್ಯಾಕ ನಿಂತಾನ! ನಮ್ಮ ಮನೆತನಕ ಮಸಿ ಬಳ್ಯಾಕ ನಿಂತಾನ! ದುರುಗ.... ನೀನು ಅವನಿಗೆ ಹೇಳು. ನಿನ್ನ ಮಾರೆ ನೋಡಿ ಸುಮ್ನಿನಿ! ಇಲ್ಲಂದ್ರ....' ಅಂತ ಉರಿದೆದ್ದು ಮಾತಾಡಿದ. ದುರುಗ ಅದಕಂಡು ನೀರೊಡೆದು ಬುಟ್ಟ! ತನ್ನ ಹೆಂಡೆ ಮನಿಗೆ ಬಂದ. ಮಗನ್ನ ಮಾತಾಡುಸುವ ಧೈರ್ಯ ಬರವಲ್ತು. ಬಂಡ ಧೈರ್ಯ ಮಾಡಿ 'ಜನ ಏನ ಅಂಬಾಕ ಹತ್ಯಾರಲ್ಲ ಚೆನ್ನ... ಕರವೇನು? ಅಂತ ಕೇಳಿದ. ಇಷ್ಟು ಕೇಳಬೇಕಂತ ಆ ಸುದ್ದಿ ಊರು-ಕೇರಿ ತುಂಬಿದಾಗಿನಿಂದ ಪ್ರಯತ್ನ ಮಾಡಿ ಬಾಯಿತನಕ ಬಂದ ಮಾತು ಎದ್ಯಾಗೇ ಕುಂತು ಕುದಿತ್ತಿತ್ತು.

'ಯಪ್ಪ, ನೀನೇ ಅಂತಿದ್ಯೆಲ್ಲ... ಹಣೆ ಬರದಾಗ ಬರುದ್ದದ್ದು ತಪ್ಪಸಾಕ ಬ್ರಹ್ಮ ಬಂದ್ರೂ ಸಾದ್ದಿಲ್ಲ ಅಂತ... ಅಂದ ಮಗ.

'ಅಂದ್ರೆ? ದುರುಗನಿಗೆ ಸಿಟ್ಟು ಬಂತು.

'ಏನಾಗಬೇಕು ಅದಾತಾದ... ಚೆನ್ನ ಅಂದದ್ದೇ ತಡ,

'ಇದೇನು ಬಸ್ವಣ್ಣಪ್ಪನ ಕಾಲ ಏನಲೇ? ಚಪ್ಲಿ ಹೊಲಿವ ಕೈಯಿಗೆ ಲಿಂಗ ಬರದ್ಯಾ!' ಅಂತ ಚೀರಿದ್ದ. ಚೆನ್ನ ಸುಮ್ನಾದ. ಮರುದಿನ ಚೆನ್ನ ಊರಿಗೆ ಹೋಗಲು ನಿಂತಾಗ, 'ಯಪ್ಪ, ನೀನೂ ಬಂದು ಬಿಡು' ಅಂದ. ಹಿಂಗ ಕರದುದು ನೂರಾಒಂದನೆ ಸಲ ಇರಬೇಕು. ದುರುಗ ಮಗನನ್ನ ಗಟ್ಟಿಯಾಗಿ ಅಪ್ಪಿಗೊಂಡು, 'ಚೆನ್ನ... ಚೆನ್ನಮಲ್ಲಯ್ಯಾ, ನಿಮ್ಮಮ್ಮ ಚಂದವ್ವ ಕೇಳಲಿಲ್ಲಲೋ ಈ ನಿನ್ನ ಮಾತನ್ನ! ಕೋಡಿ ಜಲುಮ ಜಲ್ದಿ ಮಣ್ಣಾಗ ಬಿತ್ತು! ಯಪ್ಪ, ಮಗನೇ ನನ್ಗ ಈ ಊರು, ಆ ತುಂಗಮ್ಮನ ನೀರು, ಊರುಕೇರಿ, ಈ ಮಂದಿನ್ನ ಬುಟ್ಟ ಬರಬೇಕಾಗವಲ್ಲೋ' ಅಂತ ಕಣ್ಣೀರು ತಂದು, 'ಚೆನ್ನಮಲ್ಲಯ್ಯ, ಗೌಡ್ರು ಸಾವಾಸಾಬುಟ್ಟು ನೀನು ತಣ್ಣೀರು ನೋಡು ಮಗ, ಮತ್ತೆ ಈ ಊರಿಗೆ ಬರಬ್ಯಾಡ. ಏನಾದಿಲ್ಲಿ? ನನ್ಗ ಇಲ್ಲಿ ಬುಡದ ನಂಟಾದ. ನಾನು ಇಲ್ಲಿ ಬೇಸಿರಬೇಕಂದ್ರ... ನೀನು ಬರಬ್ಯಾಡ' ದುಕ್ಕಿಸಿ ಅಂದ. 'ಬರ್ತೀನಿ, ಬರ್ತೀನಪ್ಪ!' ಅಂತ ಬಿರುಸುಲೆ ಅಂದು ಶರಣುಮಾಡಿ ಹೋಗಿಬುಟ್ಟಿದ್ದ. ಹೋಗದು ನೋಡಿಕಂತ ನಿಂತುಬುಟ್ಟ ದುರುಗ...! ದುರುಗನಿಗೆ ಚೆನ್ನ ಹುಟ್ಟಿದ ಮ್ಯಾಲೆ ಮುಂದ ಮಕ್ಕಳಾಗಲಿಲ್ಲ. ಚಂದಮ್ಮಗ ಚೆನ್ನನ್ನ ಬೆಳಸಿದ್ದೇ ಸಾಕೆಂದುಕೊಂಡಳು. ಚೆನ್ನನ್ನ ನೋಡಿ ಸೂಗಪ್ಪ ಮಾಸ್ತಾರ ತನ್ನ ಗುಡಿಸಲ್ಯಾಕ ಕರಕಂಡು ಓನಾಮ ಸುರು ಮಾಡಿದ್ದೇ ಒಂದು ಪವಾಡ ಅನಬೇಕು. ಆ ಊರಿನ ಇತಿಹಾಸದಾಗ ಮಾದರವ್ನ ಮಗ ಒಬ್ಬನೂ ಓನಾಮಕ್ಕೆ ಕಣ್ಣು ಬಾಯಿ ತೆರೆದು ನಿಂತಿದ್ದು ಇರಲಿಲ್ಲ. ಶಾಂತಗೌಡನ ಖಾಸಾ ಮನುಷ್ಯ ದುರುಗ ಅಂಬೋ ಕಾರಣಕ್ಕೋ, ಗುರುಗನ ಮ್ಯಾಲಿನ ಕಕ್ಕುಲಾತಿಗೋ ಸೂಗಪ್ಪ ಮಾಸ್ತಾರ ಚೆನ್ನನಿಗೆ ಅಕ್ಷರ ತಿದ್ದಿಸಿದ. ಉಳಿದ ಚಿಕ್ಕೋರಿಗಿಂತ ಜಲ್ದಿ ಅಕ್ಷರ ಬರೆದು ತೋರಿಸುತ್ತಿದ್ದುದ್ದೇ ಒಂದು ಖುಷಿ ಸಂಗತಿಯಾಗಿ, 'ಮಾದರ ಹೊಟ್ಯಾದ ತಪ್ಪಿ ಹುಟ್ಯಾನ ಮಗ!' ಅಂತ ತಲಿಗೆ ಕೋಲು ತಗಂಡು ಟಪ್ ಅಂತ ಜಡಿತಿದ್ದ. 'ದುರುಗ, ಇವನಿಗೆ ವಿದ್ಯಾ ಹತ್ತಾತಾದ. ಸರಕಾರಿ ಶಾಲಿಗೆ ಹಾಕಿ ಬುಡು' ಅಂದ ಸೂಗಪ್ಪ ಮಾಸ್ತರ. ದುರುಗನಿಗೆ ಮೈತುಂಬಿ ಬಂತು! ಶಾಂತಗೌಡನ ಕಡೆ ನೋಡಿದ. ಅದು ಸುಭಗಳಿಗೆ ಇರಬೇಕು 'ಹುಂ... ಕಳುಸು. ನಾಕಕ್ಷರ ಕಲಿಲಿ' ಅಂದ. ಈ ಊರಾಗ ಸರಕಾರಿ ಶಾಲೆ ಇರಲಿಲ್ಲ. ಹರದಾರಿ ಮ್ಯಾಗಿನ ಆಕಡೆ ಊರಾಗಿತ್ತು. ಸೂಗಪ್ಪ ಮಾಸ್ತರನೇ ಖುದ್ ಹೋಗಿ ಹೆಸರು ದಾಕಲು ಮಾಡಿ ಬಂದ. ಒಂದೋರ್ಷ ದುರುಗನೇ ಹೊತಗಂಡು ಹೋಗಿ ಬುಟ್ಟು ಬಂದ್ರ, ಸಂಜಿಮುಂದ ಕೈಕಾಲಿದ್ದರೆ ಮದುಗನೇ ಹೋಗಿ ಹೊತಗಂಡು ಬರ್ತಿದ್ದ. ಇಲ್ಲಂದ್ರ ಚಂದವ್ವ ಹೋಗುತ್ತಿದ್ದಳು. ಚಂದವ್ವ ಸಂಜಿಯಿಂದ ಚೆನ್ನನ್ನ ಹೆಗಲಮ್ಯಾಲ ಕೂಡಿಸಿಕೊಂಡು ಚಂದಾಗಿ ಪದ ಹಾಡುತ್ತ ದಾಂಗುಂಟ ಸಾಗಿದರೆ, ಚೆನ್ನ ಹೆಗಲಮ್ಯಾಲಿಂದ ಚಪ್ಪಾಳೆ ಹೊಡಕಂತ ತಾನೂ ಮೊದಲು ಗುನಗುತ್ತ ಪಕ್ಷನೇ, 'ಯಾಮ್ಮಾ ಯಮ್ಮಾಗಾ...ಗಾ... ಅಲ್ಲಿ' ಅಂತ ಕಾಯನ್ನ ಕರುದು ಮುಳುಗುವ ಕೆಂಪನೆ ದುಂಡಗಿನ ಸೂರಿಯನ್ನು ತೋರಿಸಿ ನಿಲ್ಲಿಸಿ ಬಡುತ್ತಿದ್ದ! ಚಂದವ್ವ ಅದಕಂಡು, ತಾನ ಚೆನ್ನನನ್ನು ಹಡದಾಗ ಹೊರಸಿನ ಬುಡುಕ ಕಾಯಿಸಿಕೊಳ್ಳಲು ಕಪ್ಪರದಾಗ ಇಡುತ್ತಿದ್ದ ಕುಳ್ಳಿನ ಕೆಂಡ ಕಂಡಂಗ ಸೂರಿಯ ಕಂಡ 'ಯಮ್ಮೋ.... ಅದು ಎಲ್ಲಿಗೆ ಹೋಗತಾದ?'' ಅಂತ ಚೆನ್ನ ಕೇಳಿದರೆ. 'ತಾಯಿ ಮನಿಗೆ ಹೋಗ್ತಾನ' ಅಂತ ಹೇಳುತ್ತಿದ್ದಳು. ಅದು ಬಿಟ್ಟು ಮೂರನೆ ವರ್ಷದಿಂದ ಚೆನ್ನನೇ ಹೋಗಿ ಬರತೊಡಗಿದ. ರಾತ್ರಿ ತಾಸತ್ತು ಚೆನ್ನಗ ಸೂಗಪ್ಪ ಮಾಸ್ತರ ಲೆಕ್ಕ ಹೇಳಿದ್ದ. ಪಾಠನ ಓದಿ ಹೇಳ್ತಿದ್ದ. ಬರುಬರುತ್ತ ಜೈಮಿನಿ ಭಾರತ, ಬಸವ ಪುರಾಣ, ಗಿರಿಜಾಕಲ್ಯಾಣ ಮುಂತಾದ ಕಾವ್ಯಗಳನ್ನು ಓದಿ ಹೇಳ್ತಿದ್ದ. ಚೆನ್ನ ಕೇಳಿ, ಓದಿ ಮನನ ಮಾಡಿಕೊಂಡಿದ್ದ. ದುರುಗ ಸುಮ್ಮನೆ ಕುಂತು ಕೇಳಿ, ಮುಗುದಮ್ಯಾಲೆ ಚೆನ್ನನ್ನ ಗುಡಿಸಿಲಿಗೆ ಕರಕಂಡು ಬರ್ತಿದ್ದ. ಹಿಂಗೇ ಚೆನ್ನ ಓದಿದ್ದ. ಮೆಟ್ರಿಕ್ ಮುಗಿಸಿದ. ಶಾಂತಗೌಡ ಸಹಾಯ ಮಾಡಿದ. ಆಮ್ಯಾಲೆ ಕಾಲೇಜಿಗೆ ಹೋಗಿ ನಿಂತ. ಚೆನ್ನ ಊರಿಗೆ ಬಂದ್ರ ಶಾಂತಗೌಡುನ ಕಾಣ್ತಿದ್ದ. ಆ ಕರೆಕಲ್ಲಿನ ದೊಡ್ಡಮನ್ಯಾಗ ಎತ್ತಿನಂಕಣದಾಗ ಕುಂತು ನಾಕು ಮಾತಾಡಿ ಬರ್ತಿದ್ದ. ಅದು ಬರ್ತಾ ಬರ್ತಾ ಚೆನ್ನಗ ಸರಿಬರ್ಲಿಲ್ಲ. ದುರುಗನ ಮಾತಿಗೆ ಕಟ್ಟುಬಿದ್ದು ಹೋಗ್ತಿದ್ದ ಅಷ್ಟೇ. ಚೆನ್ನನಿಗೆ ಚಂದವ್ವ- ಸಾಂತಗೌಡನ ಸಂಬಂಧ ಗೊತ್ತಿದ್ದರೂ ಅದು ಬರುಬರುತ್ತ ಮರ್ಮಕ್ಕೆ ತಟ್ಟಲು ಶುರುಮಾಡಿತ್ತು. ಆದರೆ ಆ ಹೊತ್ತಿಗೆ ತಾಯಿ ಹೊಟ್ಟೆದ್ಯಾನೆ ಅಂತ ವಾರ ಒಪ್ಪತ್ತು ಹಾಸಿಗೆ ಹಿಡಕ್ಕಂಡು ನರಳಿ ನರಳಿ ಕೊನೆಗೊಂದು ದಿನ ಸತ್ತಳು. ಸತ್ತಾಗ ಚೆನ್ನ ಗಂಭೀರವಾಗೀ ಇದ್ದು ಮಣ್ಣುಕೊಟ್ಟು ಹೋಗಿದ್ದ. ಸೂಗಪ್ಪ ಮಾಸ್ತರ ಅಭಿಮಾನದಿಂದ, 'ದುರುಗಾ, ನಿನ್ನ ಮಗ ಬೆಳೆದು ಬುಟ್ಟಾನ, ನೋಡು. ನಿನ್ನ ಮಗ ತಾಯಿ ಸತ್ತಾಗ, ಅದೆಂಗ ಗಂಭೀರವಾಗಿ ಇದ್ದು ಮಣ್ಣಿಗೆ ನಿಂತಿದ್ದ ಅದೇ ನೀನು.... ಚಿಕ್ಕೋರು ಅತ್ತಂಗ ಅಳುತ್ತಿದ್ದಿ. ಬದುಕಿನ ಮರ್ಮ ಏನಂಬುದು ಅವನಿಗೆ ಗೊತ್ತು ಯಾರು ಶಾಶ್ವತ ಹೇಳು? ಇದೆಲ್ಲ ತಿಳಕಂಡವರು ಈ ಸಾವಿಗೆ ಅಳ್ಯಾಡದಿಲ್ಲ. ನಿನಮಗ ಬುದ್ಧಿವಂತ' ಅಂತ ಹೇಳಿದ ಅದಾಗಿ ವರ್ಷ ತಿರುವುದರಾಗ ರಾಯಚೂರಾಗ ಅಕ್ಕಮ್ಮ ಓದುವ ದೊಡ್ಡಸಾಲ್ಯಾಗ ದೊಡ್ಡ ಮಾಸ್ತಾರಾಗ್ಯಾನಂತ ಸುದ್ದಿ ಬಂತು. ಊರುಕೇರಿ ಮೊದಲು ಮಾಡಿ ಬೆರಗಾಯಿತು. ಚೆನ್ನ, ಆಗಾಗ ತಂದೆ ಸಲುವಾಗಿ ಊರಿಗೆ ಬರ್ತಿದ್ದ. ಒಮ್ಮೆ ದುರುಗನ ಕರಕಂಡು ಹೋದ. ಅಲ್ಲಿ ತಿಂಬದ್ಕ, ಉಂಬದ್ಕ, ತೊಡದ್ಕ, ಇರದ್ಕ ಯಾವುದಕ್ಕೂ ಕಮ್ಮಿ ಇರಲಿಲ್ಲ. ಆದರೂ ದುರುಗನಿಗೆ ಅಲ್ಲಿ ಬಗೆಹರಿಲಿಲ್ಲ. ಇತ್ತಗ ದುರುಗ ಇಲ್ಲದಕ್ಕೆ ಶಾಂತಗೌಡುಗ ಹುಚ್ಚು ಹಿಡಿದಂಗಾಗಿತ್ತು. ಗಳಿಗೆಗೊಮ್ಮೆ 'ದುರುಗಾ' ಅಂದರೆ, 'ಯಪ್ಪೋ' ಅಂತ ಅವರಿಬ್ಬರ ನಡುವೆ ಮಾತು ನಡೆದರೇನೇ ತಿಂದ ಕೂಳು ಅರಗುವುದೂಂತ ತಿಳಕಂಡಿದ್ದರು. ಚೆನ್ನಮಲ್ಲಯಾ, ನಾ ಊರಿಗೆ ಹೋಗ್ತೀನಿ ನೀನು ತಣ್ಣಗಿರು. ನನ್ಗ ಆ ಊರು, ಆ ತುಂಗಮ್ಮನ ನೀರು, ಶಾಂತಗೌಡುನ್ನ, ಸೂಗಪ್ಪ ಮಾಸ್ತರನ್ನ ಬುಟ್ಟಿರಾಕ ನನ್ಗ ಒಲ್ಲೆ ಅನಸ್ತದ' ಅಂತ ಅಂದು ಓಡಿ ಬಂದುಬುಟ್ಟಿದ್ದ. ಊರಿಗೆ ಬಂದು ನಿಂತಗಂಡಾಗಲೇ ದುರುಗನಿಗೆ ಸಲೀಸಾಗಿ ಉಸುರಾಡಿತ್ತು...

ದುರುಗ ಬಸ್ಸಪ್ಪನ ಮನೆಯಿಂದ ಎದ್ದು ನಡೆದು ಏನೇನೋ ನೆನಿಸಿಗಂತ ಹೊಂಟಿದ್ದ. ಶಾಂತಗೌಡನ ನಾಯಿ ಕುಂಟಿಗಂತ ಬಂದು ಕುಂಯ್ ಕುಂಯ್ ಅಂತ ದುರುಗನ ಕಾಲಿಗೆ ಬಂದು ತಿಕ್ಕಿ ಕುಂತಿತು. ಅದರ ಕಾಲಿಗೆ ಹೊಡೆತ ಬಿದ್ದಿತ್ತು. ನೋಡಿ 'ಏನಾಯ್ತು? ಯಾರು ಹೊಡದ್ರು...' ಅಂತ ನೋಡಿದ. ದುಮದುರಿ ಒಳಗ ಯಾರೂ ಕಾಣ್ತಿಲ್ಲ.

'ನೋಡು ಶಾಂತಪ್ಪ, ಮ್ಯಾಲಿಂದ ಮ್ಯಾಲೆ ದುರುಗನಿಗೆ ಚುಚ್ಚುಮಾತು ಆಡದ್ರಿಂದ, ಬಯ್ಯದ್ರಿಂದ ಏನು ಮಾಡ್ದಂಗಾಯ್ತು ಹೇಳು ಪಾಪ.. ಅವನು,' ನನ್ನ ಕೈಯಾಗೇನಾದ ಯಪ್ಪೋ! ನನ್ನ ಮಗ ಚೆನ್ನಗ ಬೈದು ಹೇಳೀನಿ, ತಿಳಿಸಿ ಹೇಳೀನೀ, ಕಾಲು ಹಿಡಕಂಡು ಹೇಳೀನಿ' ಅಂದು ಹೇಳಿದ್ನಲ್ಲ ಹೋಗ್ಲಿ, ನೀನು ದುರುಗನಿಗೆ ಅಷ್ಟೆಲ್ಲಾ ಮಾಡಿ ಏನು ಪಡಕಂಡಿ? ಛೇ ನಿನ್ಗ ಬುದ್ಧಿ ಐತೇನು?

ದುರುಗ ನಿನ್ಗ ಹೇಣ್ತನ್ನ ಕೊಟ್ಟ ನುಂಗಿಕೊಂಡಿದ್ದ! ಅವನು ಬೆಳೆಸಿದ ಗಿಡಗಳನ್ನು ಕಡುದು ನೀನು ಮನೆ ತುಂಬ ಬಂಡಿ, ಗಳೇವುದ ಸಾಮಾನು ತುಂಬಿಕೊಂಡಿ. ಆಗ ಅವನು ಅನುಭವಿಸಿದ ನೋವ ಸಣ್ಣದಲ್ಲ! ಏನನ್ನ ಅದು ತಗುಲಿತೇನು? ಸಾವಿರಾರು ಸಲ ತುಂಗಮ್ಮನ್ನ

ಪುಟ 11 ನೋಡಿ

93 ಪಕ್ಷಗಳ ಜಂಟಿ ಘೋಷಣೆ - ಯುಗೋಸ್ಲಾವಿಯದ ವಿರುದ್ಧ ದಿಗ್ಬಂಧನ ತೆಗೆಯಲು ಒತ್ತಾಯ

'ಸಮಾನ ಜಗತ್ತಿನತ್ತ ಹೊಸ ಶತಮಾನದಲ್ಲಿ ಸಾಗೋಣ'

ಫೆಬ್ರವರಿ 18, 2000 ರಂದು ಯುಗೋಸ್ಲಾವಿಯಾದ ರಾಜಧಾನಿ ಬೆಲ್‌ಗ್ರೆಡ್‌ನಲ್ಲಿ 50 ದೇಶಗಳಿಂದ 93 ಸಮಾಜವಾದಿ, ಕಮ್ಯುನಿಸ್ಟ್, ಇತರ ಎಡ-ಪ್ರಜಾಸತ್ತಾತ್ಮಕ ಪಕ್ಷಗಳು ಒಂದು ಅಂತರ್ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ್ದವು. 'ಹೊಸ ಶತಮಾನದಲ್ಲಿ ಅಂತರ್ರಾಷ್ಟ್ರೀಯ ಸಂಬಂಧಗಳು - ಸಮಾನ ಜಗತ್ತಿನತ್ತ' ಎಂಬುದು ಸಮ್ಮೇಳನದ ವಿಷಯವಾಗಿತ್ತು. ಸರ್ಬಿಯಾದ ಸೋಷಲಿಸ್ಟ್ ಪಾರ್ಟಿಯ 4ನೇ ಮಹಾಧಿವೇಶನದ ಸಂದರ್ಭದಲ್ಲಿ ಇದು ನಡೆಯಿತು.

ಈ ಅಂತರ್ರಾಷ್ಟ್ರೀಯ ಸಮ್ಮೇಳನ ಅತ್ಯಂತ ಮಹತ್ವಪೂರ್ಣವಾಗಿದ್ದು, ಅಲ್ಲಿ ಹೊರಡಿಸಿದ ಹೇಳಿಕೆ ಅಂತರ್ರಾಷ್ಟ್ರೀಯ ಕಾನೂನು, ಸ್ವತಂತ್ರದೇಶಗಳ ಸಾರ್ವಭೌಮತೆ ಉಲ್ಲಂಘಿಸಿದ ಅಮೆರಿಕದ ಮಿಲಿಟರಿ ದಾಳಿ ಖಂಡಿಸಿ, ಯುಗೋಸ್ಲಾವಿಯಾದ ವಿರುದ್ಧ ವಿಧಿಸಿರುವ ಪ್ರತಿಬಂಧ ಹಿಂತೆಗೆಯಬೇಕೆಂದು ಒತ್ತಾಯಿಸಿದೆ.

ಇಂತಹ ಸಮ್ಮೇಳನವನ್ನು ಇನ್ನು ಮೇಲೆ ಪ್ರತಿವರ್ಷ ನಡೆಸಲು ಮತ್ತು ಈ ವೇದಿಕೆಯನ್ನು 'ಸಮಾನ ಜಗತ್ತಿಗೆ ಬೆಲ್‌ಗ್ರೇಡ್ ವೇದಿಕೆ' ಎಂದು ಹೆಸರಿಡಲು ತೀರ್ಮಾನಿಸಲಾಗಿದೆ. ಈ ವೇದಿಕೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಜಾಗತಿಕ ವೇದಿಕೆಯಾಗುವುದು. ಮುಂದಿನ ವರ್ಷ 1961 ರಲ್ಲಿ ಬೆಲ್‌ಗ್ರೇಡ್‌ನಲ್ಲೇ ನಡೆದ ಅಲಿಪ್ತ ದೇಶಗಳ ಪ್ರಥಮ ಸಮ್ಮೇಳನದ 40ನೇ ವಾರ್ಷಿಕದ ಸಮಯದಲ್ಲಿ ವಿಶೇಷ ಸಮ್ಮೇಳನ ನಡೆಸಿ, ವಿಶ್ವಸಂಸ್ಥೆಯನ್ನು ಪ್ರಜಾಪ್ರಭುತ್ವಗೊಳಿಸುವ ಕೆಲಸ ಕೈಗೊಳ್ಳಬೇಕೆಂದೂ ಸಮ್ಮೇಳನ ತೀರ್ಮಾನಿಸಿತು.

ಇಂಡಿಯಾದಿಂದ ಸಮ್ಮೇಳನದಲ್ಲಿ ಸಿಪಿಐ(ಎಂ), ಸಮತಾಪಾರ್ಟಿಗಳು ಭಾಗವಹಿಸಿದ್ದವು. ಹೆಚ್ಚಿನ ಪ್ರಮುಖ ಕಮ್ಯುನಿಸ್ಟ್ ಪಕ್ಷಗಳು, ಎಡ-ಸೋಶಲಿಸ್ಟ್ ಪಕ್ಷಗಳು ಭಾಗವಹಿಸಿದ್ದವು. ಯುಗೋಸ್ಲಾವಿಯದಿಂದಲೇ ನಾಲ್ಕು ಎಡಪಕ್ಷಗಳು ಭಾಗವಹಿಸಿದ್ದವು.

ಇಂತಹ ಪ್ರಮುಖ ಬೆಳವಣಿಗೆ ನಮ್ಮ ಪತ್ರಿಕೆ, ಟಿ.ವಿ.ಗಳಿಗೆ ಸುದ್ದಿಯಾಗಲಿಲ್ಲ ಎಂಬುದು ಅವುಗಳಒಡೆತನ, ವರ್ಗಗುಣ ನೋಡಿದರೆ ಆಶ್ಚರ್ಯವೇನಿಲ್ಲ. ಸಮ್ಮೇಳನದ ಜಂಟಿ ಘೋಷಣೆಯಿಂದ ವಿವಿಧ ವಿಷಯಗಳ ಬಗ್ಗೆ ಆಯ್ದು ಗಮನಾರ್ಹ ಅಂಶಗಳು ಇಲ್ಲಿವೆ.

ಸಾರ್ವಭೌಮತೆ, ಸಮಾನತೆಗೆ ಗೌರವ

"21ನೇ ಶತಮಾನದಲ್ಲಿ ಜಗತ್ತಿನ ಶಾಂತಿಯುತ ಮತ್ತು ಸುಭದ್ರ ಭವಿಷ್ಯ ರೂಪಿಸುವದು, ಶಾಂತಿಯುತ ಸಹಬಾಳ್ವೆ, ಸಮಾನತೆ, ಇತರ ದೇಶಗಳ ಆಂತರಿಕ ವಿಷಯಗಳಲ್ಲಿ ಮೂಗು ತೂರಿಸದಿರುವುದು, ಸಾರ್ವಭೌಮತೆ, ಪ್ರಾದೇಶಿಕ ಸಮಗ್ರತೆಗೆ ಗೌರವ ಕೊಟ್ಟರೆ ಮಾತ್ರ ಸಾಧ್ಯ.

ಯುಗೋಸ್ಲಾವಿಯಾ, ಸೋಷಲಿಸ್ಟ್ ಪಾರ್ಟಿಗೆ ಬೆಂಬಲ

"ಈ ಸಮ್ಮೇಳನ ಯುಗೋಸ್ಲಾವಿಯದ ಜನತೆ ಮತ್ತು ಸರ್ಬಿಯಾ ಸೋಷಲಿಸ್ಟ್ ಪಾರ್ಟಿಯ ನಾಯಕತ್ವಕ್ಕೆ ಹೃತ್ಪೂರ್ವಕ ಬೆಂಬಲ ನೀಡುತ್ತದೆ - ಸ್ವಾತಂತ್ರ್ಯ, ಸಾರ್ವಭೌಮತೆ, ಪ್ರಾದೇಶಿಕ ಸಮಗ್ರತೆ ಕಾಪಾಡಿಕೊಳ್ಳುವ ಹೋರಾಟದಲ್ಲಿ..."

ಜಾಗತೀಕರಣ ಫ್ಯಾಸಿಸಂನಂತೆ

"ಜಾಗತೀಕರಣ ಶ್ರೀಮಂತ ದೇಶಗಳು ಹೇಳುವಂತೆ ಇಡೀ ಮನುಕುಲಕ್ಕೆ ತಾಂತ್ರಿಕ ಮತ್ತು ಆರ್ಥಿಕ ಪ್ರಗತಿಗೆ ಅವಕಾಶ ಮಾಡಿಕೊಡುವುದಿಲ್ಲ. ಬದಲಾಗಿ ಬಡದೇಶಗಳ ವಸಾಹತುಕರಣದ, ಶೋಷಣೆಯ ಇನ್ನೊಂದು ಹೊಸರೂಪ... ಇದರ ನೆಲೆಗೂ ಫ್ಯಾಸಿಸಂಗೂ ತುಂಬಾ ಹೋಲಿಕೆಯಿದೆ. ಯಾಕೆಂದರೆ ಅದರ ತಿರುಳು- ನಾವು ಹೇಳಿದಂತೆ ಕೇಳು, ನಾವು ಹಾಕಿದ ನಿಯಮ ಪಾಲಿಸು, ಇಲ್ಲದಿದ್ದಲ್ಲಿ ನಿನ್ನನ್ನು ಜೀವಂತ ಇರಗೊಡುವುದಿಲ್ಲ..."

ಸಣ್ಣ ದೇಶಗಳಿಗೆ ಬೆದರಿಕೆ ಅಪಾಯಗಳ ಕರಗಂಟೆ

ಜಾಗತೀಕ ಅಧಿಪತ್ಯ ಮತ್ತು ನವ-ವಸಾಹತುವನ್ನು ಒಪ್ಪಿಕೊಳ್ಳದೆ ವಿರೋಧಿಸುವ ದೇಶವನ್ನು ಮಟ್ಟಹಾಕಲು ದಾಳಿ, ಪ್ರತ್ಯೇಕವಾದ ಮತ್ತು ಭಯೋತ್ಪಾದಕ ವಾದಗಳಮಿಶ್ರಣವನ್ನು ಈಗಿನ ನವ-ವಸಾಹತುವಾದ ತಯಾರಿಸಿದೆ...... ಅಭದ್ರತೆ, ಆಂತರಿಕ ಮತ್ತು ಪ್ರಾದೇಶಿಕ ಘರ್ಷಣೆಗಳನ್ನು ಪ್ರಚೋದಿಸುವ ಮೂಲಕ, ನಾಟೋವನ್ನು ಪೂರ್ವದತ್ತ ವಿಸ್ತರಿಸುವ ಮೂಲಕ ಈ ಶ್ರೀಮಂತ ದೇಶಗಳ ಮಿಲಿಟರಿ - ಕೈಗಾರಿಕಾ ಸಂಕೀಣ ಶಸ್ತ್ರಾಸ್ತ್ರಗಳಿಗೆ ಬೇಡಿಕೆ ಹೆಚ್ಚಿಸಲು, ಈಗಿರುವ ಶಸ್ತ್ರಾಸ್ತ್ರ ದಾಸ್ತಾನು ಖಾಲಿ ಮಾಡಲು ಪ್ರಯತ್ನಿಸುತ್ತಿವೆ.

ಜಾಗತಿಕ ಅಧಿಪತ್ಯ ವಿರೋಧಿಸಲು, ವಿಶ್ವಸಂಸ್ಥೆ ಬಲಪಡಿಸಬೇಕು

ಶಾಂತಿಯ ರಕ್ಷಕನಾಗಿ ಭದ್ರತಾ ಸಮಿತಿಯ ಪಾತ್ರವನ್ನು ಗೌಣಗೊಳಿಸುವ ಪ್ರಯತ್ನವನ್ನು ದುರ್ಬಲಗೊಳಿಸಬೇಕು, ವಿಶ್ವಸಂಸ್ಥೆಯ ಗೌರವಾನ್ವಿತ ಸ್ಥಾನವನ್ನು ಕೆಡವುತ್ತಾ ಪ್ರಬಲ ದೇಶಗಳ ತೊತ್ತಾಗಿ ಬಳಸುವುದನ್ನು ಪ್ರತಿಭಟಿಸಬೇಕು, ಪ್ರತಿರೋಧಿಸಬೇಕು. ನಾಟೋ ಭದ್ರತಾ ಸಮಿತಿಯ ಮೇಲೆ ದಬ್ಬಾಳಿಕೆ ಮಾಡಲು ಬಿಡಬಾರದು....."

ವಿಶ್ವಸಂಸ್ಥೆ ಒಪ್ಪಂದ ಉಲ್ಲಂಘಿಸಿದ ಅಮೆರಿಕಾದ ದಾಳಿ

"ಅಮೆರಿಕ ಯುಗೋಸ್ಲಾವಿಯಾದ ಮೇಲೆ ಮಾಡಿದ ಕ್ರಿಮಿನಲ್ ದಾಳಿ, ವಿಶ್ವಸಂಸ್ಥೆಯ ಒಪ್ಪಂದದ ಹೇಯ ಅತಿಕ್ರಮಣ. ಅಂತರ್ರಾಷ್ಟ್ರೀಯ ಕಾನೂನಿನ ಉಲ್ಲಂಘನೆ. ಅಂತರ್ರಾಷ್ಟ್ರೀಯ ಸಂಬಂಧಗಳನ್ನು ಮಾರ್ಪಡಿಸಲು ವಿಪರೀತ ಬಲಪ್ರಯೋಗದ ಬಳಕೆಗೆ ಅವಕಾಶ ಸೃಷ್ಟಿಸಲು ಇದನ್ನು ಮಾಡಲಾಗಿದೆ. ಇದು ಬಂಡವಾಳದ...."

ನಾಟೋ ನರಮೇಧಕ್ಕೆ ಪರಿಹಾರ ಕೊಡಬೇಕು

ಯುಗೋಸ್ಲಾವಿಯಾದ ಮೇಲೆ ದಾಳಿ ಮಾಡಿ ಶಾಂತಿ ಮತ್ತು ಮಾನವತೆ ಮೇಲೆ ಮಾಡಿದ ಅಪರಾಧಗಳ ಜವಾಬ್ದಾರಿಯನ್ನು ನಾಟೋ ದೇಶಗಳ ನಾಯಕರು ಹೊರಬೇಕು. ಯುಗೋಸ್ಲಾವಿಯಾದ ಮೇಲೆ ನಾಟೋ ದಾಳಿ ಹೊರಿಸಿದ ಭಾರಿ ಹಾನಿಯನ್ನು ತುಂಬಿಕೊಡಲು ನಾಟೋದೇಶಗಳು ಪರಿಹಾರ ಕೊಡಬೇಕು ಎನ್ನುವ ಯುಗೋಸ್ಲಾವಿಯಾದ ಒತ್ತಾಯವನ್ನು ಈ ಸಮ್ಮೇಳನ ಬೆಂಬಲಿಸುತ್ತದೆ...... ಎಲ್ಲಾ ದಿಗ್ಬಂಧನ ಇಡೀ ಜನತೆಯನ್ನು ಶಿಕ್ಷಿಸುವ ಕಾನೂನುಬಾಹಿರ ಅಸ್ತ್ರಗಳು. ಇಂತಹ ನರಮೇಧದ ಅಸ್ತ್ರಗಳನ್ನು ತತ್‌ಕ್ಷಣ ಕಿತ್ತೊಗೆಯಬೇಕು.

ಯುಗೋಸ್ಲಾವಿಯಾ ಎಲ್ಲಾ ಅಂತರ್ರಾಷ್ಟ್ರೀಯ ಸಂಘಟನೆಗೆ ವಾಪಸಾಗಬೇಕು.

ಯುಗೋಸ್ಲಾವಿಯಾ ವಿಶ್ವಸಂಸ್ಥೆಯ ಸಾಮಾನ್ಯ ಸಭೆ, ಅಲಿಪ್ತ ಸಭೆ, ಅಂತರ್ರಾಷ್ಟ್ರೀಯ ಆರ್ಥಿಕ, ಹಣಕಾಸು ಸಂಘಟನೆಗಳು - ಹೀಗೆ ಎಲ್ಲಾ ಅಂತರ್ರಾಷ್ಟ್ರೀಯ ಸಂಘಟನೆಗಳಿಗೆ ವಾಪಸಾಗುವುದಕ್ಕೆ ಪ್ರಬಲ ಬೆಂಬಲ ನೀಡಬೇಕು........ 21ನೇ ಶತಮಾನದಲ್ಲಿ ವಿಶ್ವಸಂಸ್ಥೆಯನ್ನು ಪ್ರಜಾಸತ್ತೀಕರಣಕ್ಕೆ ಒಳಪಡಿಸಿ ಹೊಸ ಅಂತರ್ರಾಷ್ಟ್ರೀಯ ಪರಿಸ್ಥಿತಿ ನಿರ್ಮಾಣ ಮಾಡುವತ್ತ ಅಲಿಪ್ತ ಚಳುವಳಿ ಪ್ರಯತ್ನಿಸಬೇಕು.

○

ತಮಂಧದ ಕೇಡು

ಪುಟ 10 ರಿಂದ

ಹೆಗಲಮ್ಯಾಲ ಹೆ ೨ೂತಗಂಡು ನಡದಾನ. ಛೇ..... ಅವುನು ನಿನ್ಗ ಮಾಡಿದ್ದು ಬಾಳಾದ! ಅಂಥವುನು ಒಬ್ಬ ದುಡಿವಾ ಮನುಷ್ಯ ನಿನ್ಗ ಸಿಕ್ಕನಂತ ಈ ಮನೆಯ ವತನ ಕಮ್ಮನ ನಡದಾದ! ನೀನು ಏನು ಮಾಡಬೇಕಂದಿದ್ದಿ ಅದು ಚೆನ್ನಗ ಮಾಡು! ದುರುಗನ ತಂಟ್ಯಾಕ ಹೋಗಬ್ಯಾಡ ಮರಾಯ ಕೈ ಮುಗಿತೀನಿ!' ಸೂಗಪ್ಪ ಮಾಸ್ತಾರ ಕೊನಿಗೆ ಉಸುರುಗಟ್ಟಂಗ ಸಿಟ್ಟಿನಿಂದ ಹೇಳಿ ಮಕ್ಕಂಡು ಬಿಟ್ಟಿದ್ದ. ಶಾಂತಗೌಡುಗ ಒಂದೇ ಸವನೇ ಅವೇ ಅವೇ ಮಾತುಗಳು ಕಿವಿಗೆ, ಎದೆಗೆ ಬಡಿತ್ತಿದ್ದವು! ಹೌದೌದು! ದುರುಗಾ ದೇವುರಂಥ ಮನುಷ್ಯ. ಅವುನಿಗೆ ಅಂಬದು ತಪ್ಪ' ಅಂತ ಹತ್ತಾರು ಸಲ ಅನಕಂಡಿದ್ದರೂ ಶಾಂತಗೌಡುಗ ಸಮಾಧಾನಿರಲಿಲ್ಲ. ಶಾಂತಗೌಡ ತನ್ನ ಕರೆಕಲ್ಲಿನ ದೊಡ್ಡಮನ್ಯಾಗ ಕುಂತ ಉರಿವ ಮನಸ್ಸಿನಿಂದ ಏನೇನೋ ಯೋಚಿಸುತ್ತ ಕುಂತಿದ್ದ. ರಾತ್ರಿ ಅದೆಷ್ಟತ್ತಾಗಿತ್ತೋ, ಶಾಂತಗೌಡ ಕುಂತ್ಗಂಡ ಮ್ಯಾಲೆ ಹನುಮಂತ, ಭೀಮಯ್ಯಗ ಮಕ್ಕಂಬಕ ಹೆಂಗ ಬಂದೀತು ಅಂತ ಅವುರು ತೂಕಡಿಸಿಗಂತ ಗ್ವಾದಿಲಿ ಒಳಗ ಕುಂತಿದ್ದವು. ಸೊಗಪ್ಪ ಮಾಸ್ತಾರಗ ನಿದ್ದಿ ತಗಂಡಿತ್ತು. ಶಾಂತಗೌಡನ ಜತಿಗೆ ಮಾತಾಡಿ ವಾದ ಮಾಡಿ, ಬುದ್ದಿವಾದ ಹೇಳಿಯೇ ದಣಿದು ಮಕ್ಕಂಡಿದ್ದನು. ಶಾಂತಗೌಡ ಕಾಲುಮಡಿಯಲು ಎದ್ದು 'ದುರುಗಾ' ಅಂದ. ಹನುಮಂತ, ಭೀಮಯ್ಯ ದಿಗ್ಗನೆದ್ದು ಕಂದೀಲು ಹಿಡಕಂಡು ಹೊರಗ ನಡೆದರು. ಇದು ಈ ರಾತ್ರಿ ಮೂರನೆ ಸಲವೋ ನಾಕನೆಯದೋ, ಕಾಲು ಮಡಿಯಲು ಎದ್ದಂಗೆಲ್ಲ, 'ದುರುಗಾ' ಅಂತ ಕರಿತಿದ್ದ. ' ದುರುಗಣ್ಣ ಇವತ್ತು ತನ್ನ ಮನಿಗೆ ಮಕ್ಕಂಬಾಕ ಹೋಗ್ಯಾನಪ್ಪೋ, ಗೌಡ' ಅಂತ ಇಬ್ಬರು ಹೇಳಿದರೂ ಪ್ರತಿಸಲ ' ದುರುಗಾ' ಅಂತನೇ ಕರಿತಿದ್ದ ಶಾಂತಗೌಡ. ಕಾಲುಮಡುದು ಒಳಗ ಬರುವಾಗ ಎತ್ತಿನಂಕಣ ದಾಟುವಾಗ ಹೆಂಡೆ ತುಳುದುಬುಟ್ಟ! ಅರಮಂಡಲಕ್ಕ ಬೆಂಕಿ ಹತ್ತಿ, ' ಥುಥ್... ಲೇ ಎತ್ತಿನ್ನ ದಾರ್ಯಾಗ ಮಲಗಸಬ್ಯಾಡ್ರಿ ಅಂತ ಹೇಳಿದ್ರ ಕೇಳ್ತಿರೇನು?' ಅಂತಂದು ಗಳೇವುದ ಸಾಮಾನಾಕುವ ಗುಣ್ಣೆಗೆ ಹೋಗಿ ಬಾರಕಲ್ಲು ಎಳಕಂಡು ಹೆಂಡೆ ಹಾಕಿದ ಎತ್ತಿಗೆ ಚಟ್ ಚಟ್ ಬಾರಿಸಿದ. ಉಳಿದ ಹನ್ನೊಂದು ಎತ್ತುಗಳು. ಆಕಳು, ಎಮ್ಮೆಗಳು. ಅವುಗಳ ಕರುಗಳು ಇದಕಂಡು ದಪದಪ ಎದ್ದು ಅತ್ತಗ ಇತ್ತಗ ಸರುದು ಬಾಲ ಬೀಸತೊಡಗಿದ್ದವು. ಹನುಮಂತ, ಭೀಮಯ್ಯ ಅದಕಂಡು, ಅದೆಲ್ಲ ಮಾಮೂಲು ಅಂತ ಗೊತ್ತಿದ್ದರೂ ಭಯಗಂಡು, 'ಬುಡಪ್ಪಗೌಡ' ಅಂತ ಭೀಮಯ್ಯ ಕಂದೀಲಿ ಹಿಡಕಂಡು ಅಂದ. ಹನುಮಂತ ನೀರು ತಂದು ಕಾಲು ತೊಳದ. ಆಮ್ಯಾಲೆ ಪಡಸಾಲ್ಯಾಗ ಬಂದು ಕುಂತು, 'ಎತ್ತುಗಳಿಗೆ ಮೇವು ಹಾಕ್ರಲೇ' ಅಂದ. ಮೇವಾಕಿ ಅರ್ಥತಾಸು ಆಗಿರಲಿಲ್. ಮತ್ತೆ ಆಟ್ಟ ಏರಿ ಹಾಕಿದರು. ಕರ್ ಕರ್ ಕರ್ ಅಂತ ಮೆಯ್ಯಲು ತೊಡಗಿದವು. ಆ ಸಪ್ಪಳ ಮನೆ ತುಂಬಿಕೊಂಡಿತು. ಶಾಂತಗೌಡಗ ಸಮಾಧಾನ ಆಗಲಿಲ್ಲ. ಪಡಸಾಲೆಯಲ್ಲಿ ಅತ್ತಗ ಇತ್ತಗ ಅಡ್ಡಾಡತೊಡಗಿದ ಕಾಲೆಳಕಂಡು ತಿರುಗಾಡುತ್ತ ಸೂಗಪ್ಪ ಮಾಸ್ತಾರಗ ಏನೋ ಹೇಳಲು ನೋಡಿದ ಆತ ಮಕ್ಕಂಡಿದ್ದ. ತಾತಗ ವಯಸ್ಸಾಯ್ತು ಅಂತ ಅನಕಂಡ. ಮನೆ ಗುರು ಶಾಂತಗೌಡ ಏನು ಮಾಡಿದ್ರೂ ಈ ಗುರುವನ್ನು ಕೇಳ್ತಿದ್ದ. ಅತ್ತು ತಂದರೆ, ಬೀಜ ಬಿತ್ತಿದರೆ, ಯಾವುದೇ ಕಾರಣ- ಕತೆ ನಡದರೆ ಶಾಂತಗೌಡ ಸೂಗಪ್ಪ ಮಾಸ್ತಾರನನ್ನ ಕೇಳಿಯೇ ಮಾಡುತ್ತಿದ್ದ. ಶಾಂತಗೌಡನ ಬಲಕ್ಕ ಸೂಗಪ್ಪ ಮಾಸ್ತಾರ ಇದ್ದರೆ, ಎಡಕ್ಕ ದುರುಗ ಇರ್ತಿದ್ದ. ಶಾಂತಗೌಡ ನಡುಕ ಹೋಗಿದ್ದ. ವಾರದಿಂದ ' ಬಗಲಾಗಿರು ತಾತ' ಅಂತ ರಾತ್ರಿಯೂ ಇಲ್ಲೇ ಮಕ್ಕಳಲು ಹೇಳಿದ್ದ. ತಾತ ತಪ್ಪು ಮಾಡಿದ. ಆ ಹೊತ್ತಿನಲ್ಲಿ ನನ್ಗೂ ತಿಳಿಲಿಲ್ಲ. ಚಿನ್ನನನ್ನ ಶಾಲಿಗೆ ಹಾಕಸಿದ್ದೇ ತಪ್ಪಾಯ್ತು. ನಾನು ಆ ಹೊತ್ತಿನಲ್ಲಿ ಬ್ಯಾಡ ಅಂದಿದ್ರ... ಇವತ್ತು ಇಂಥ ಗಂಡಾಂತರ ತರುತ್ತಿದ್ದಿಲ್ಲ. ಮತ್ತೆ ಇವತ್ತು ದುರುಗನಂಗ ನನ್ನ ಮನ್ಯಾಗ ದುಡುಕೊಂಡು ನಾನಾಕಿದ ಕೂಳು ತಿನ್ಕಂಡು ಬಿದ್ದಿರ್‍ತಿದ್ದ ನಾಯಿ ಬಿದ್ದಂಗ! ಹುಡುಗ ಬುದ್ದಿವಂತ ಆಗ್ತಾನ. ಓದ್ಲಿ ಬುಡು. ಚಿನ್ನ ಓದಿದ್ರ ನಾಳಿ ನಿನ್ಗ ಉಪಯೋಗಕ ಬರ್‍ತಾನ- ಅಂದ ಸೂಗಪ್ಪ ತಾತಾ! ಈಗ...? ಬಂದ್ನೋಡು ಕುತ್ತಿಗ್ಗಿ! ಬೂದೆಣ್ಣ ಅಂದುದ್ದೇ ಕರೆವು. ಈ ಕುಲನ್ನ ಎಲ್ಲಿಡಬೇಕು ಅಲ್ಲೇ ಇಡಬೇಕು ಶಾಂತಪ್ಪ- ಅಂದ. ಆದರೆ ದುರುಗನ. ಚಂದವ್ವನ ಮಾರೆ ನೋಡಿ ಚೆನ್ನಗ ಓದಾಗಕ ಬೇಕಾದಟು ರೊಕ್ಕ ಕೊಟ್ಟೆ! ಆರೇ ಮೊನ್ನೆ ಏನಂದನಂತೆ 'ನಮ್ಮಪ್ಪ ದುಡುದಾನ, ನಮ್ಮವ್ವ ದುಡುದಾಳ. ಮಾರಿಕೊಂಡಾರ ಅವರಿಬ್ಬರು ಶಾಂತಗೌಡುಗ. ಮಾರಿಕೊಂಡದ್ದು ನೋಡಿದರೆ ಅದರ ರೊಕ್ಕ ಶಾಂತಗೌಡನ ಆಸ್ತಿನೆಲ್ಲ ಮಾರಿದರೆ ಸಾಲದು ನಮ್ಗ ತೀರ್‍ಸಾಕ!' ವ್ಹಾರೇ ಮಗ್ನೆ... ಚಿನ್ನ ಅಂತ ಗಟ್ಟಿಯಾಗಿ ಅಂದು ಚಡಪಡಿಸುತ್ತ ಉರಿಯತೊಡಗಿದ! ಹೇಣ್ತಿ ಹಂಪಮ್ಮ ನೆಪ್ಪಾದಳು; ಚಂದವ್ವ ಕಣ್ಣುಮುಂದ ಬಂದಳು: ಅಕ್ಕ ರುದ್ರಮ್ಮ ಮಗಳು ಕಣ್ಣ ಮುಂದೆ ನಿಂತರು. ಆದರೆ ಮನ್ಯಾಗ ಯಾರೂ ಇಲ್ಲ- ಅಂಬದು ಅರುವಾದಾಗ, 'ನಾನೆಂಗ ಇಷ್ಟು ದಿನ ಒಂಟಿ ಬದುಕಿದೆ ಈ ಮನ್ಯಾಗ ಅಂದುಕೊಂಡ. ಶಾಂತಗೌಡುಗ ಈ ಪ್ರಶ್ನೆ ಎಂದೂ ಎದ್ದಿರಲಿಲ್ಲ. ' ದುರುಗ ಇದ್ದಾನ, ಸೂಗಪ್ಪ ಮಾಸ್ತಾರ ಐದಾನ. ಚಂದವ್ವ ಇದ್ದಳು. ಅನಿಸಿದರೂ ತನ್ನ್ಯಾರೂ ಇಲ್ಲಲ್ಲ ಅಂಬುವದು ಮನಸ್ಸಿನಲ್ಲಿ ನಿಂತಾಗ ಶಾಂತಗೌಡನ ಶಕ್ತಿ ಇಳದಂಗಾಯ್ತು ತೆಳ್ಳಗ, ಬೆಳ್ಳಗ, ಇದ್ದ ಹಂಪಮ್ಮ ನೆಪ್ಪಾದಳು. ಎಂದೂ ಹಣೆಮ್ಯಾಗಿನ ಇಬತ್ತಿ ಮಾಸುತ್ತಿರಲಿಲ್ಲ. ಆಕೆಗೆ ಸೂಗಪ್ಪ ಮಾಸ್ತಾರನೆ ದೇವರಾಗಿದ್ದ. ಪುರಾಣ, ಪುಣ್ಯಕಥೆ ಹೇಳುತ್ತಲೇ ಇರುತ್ತಿದ್ದ. ಈಕೆ ಕೇಳುತ್ತಲೇ ಇರುತ್ತಿದ್ದಳು ಏಸುದಿನ ಕೇಳಿದರೂ ಆಕೆಗೆ ಬೇಸರಂಬುದು ಸುಳಿಲಿಲ್ಲ. ಶಾಂತಗೌಡನ ಯಾವ ವ್ಯವಹಾರದಾಗ ಆಕೆ ಕೈ ಹಾಕುತ್ತಿರಲಿಲ್ಲ, ಮದುವೆಯಾಗಿ ಆರು ವರ್ಷದ ಮ್ಯಾಲೆ ಒಂದು ಹೆಣ್ಣು ಹುಟ್ಟಿದ್ದೇ ಕಡೆಯಾಯ್ತು. ಶಾಂತಗೌಡ ಗಂಡು ಮಗನಿಗಾಗಿ ಆಶೆಪಟ್ಟು ಮತ್ತೊಂದು ಮದಿವೆಯಾಗದೇ ಇದ್ದದ್ದು ಪವಾಡ ಅನಬೇಕು. ಅಕ್ಕ ರುದ್ರಮ್ಮ ಇದಕಂಡು ಒಂದೆರಡು ಸಲ ಅಂದು ನೋಡಿದಳು. ಶಾಂತಗೌಡ ಮನುಸ ಮಾಡಿದ ಖರೆ. ಆ ಬಗ್ಗೆ ಯಾವುದಕ್ಕೂ ಮುಂದಾಗಲಿಲ್ಲ. ರುದ್ರಮ್ಮನೂ ಒತ್ತಾಯ ಮಾಡಲಿಲ್ಲ. ಹಂಪಮ್ಮನ ಮ್ಯಾಲೆ ಗೌರವಯಿದ್ದ ಆಕೆ ತಡಕಂಡಳು ಬರುಬರುತ್ತ ರುದ್ರಮ್ಮ ತನ್ನ ಮಗನಿಗೆ ತಮ್ಮನ ಮಗಳನ್ನೇಮದುವೆ ಮಾಡಿದರಾಯಿತೆಂದು, ಶಾಂತಗೌಡನ ಆಸ್ತಿಗೆ ತಮ್ಮ ಮಗನೆ ವಾರೆಸ್ದಾರ ಆಗ್ತಾನ ಅಂಬ ಆಶೆಯ ಎಳೇ ಸುತ್ತಿಕೊಂಡು ಸುಮ್ಮನಾದಳು. ಮೇಲಾಗಿ ಶಾಂತಗೌಡುಗ ಚಂದವ್ವನ ಸಾವಾಸ ಮಾಡಿದ್ದೇ ತಡ ಹಂಪಮ್ಮ ಕದಡಿ ಹೋದಳು. ಚಂದವ್ವನ ಮ್ಯಾಲೆ ದುರುಗನ ಮ್ಯಾಲೆ ಹಂಪಮ್ಮ ಬೆಂಕಿ ಕಾರತೋಡಗಿದಳು. ತಿಂಗಳೊಪ್ಪತ್ತು ಒಳಒಳಗೆ ಕುದ್ದಳು. ಇದಕಂಡು ಒಂದಿನ ಸೂಗಪ್ಪಾ ಮಾಸ್ತಾರ, ' ಹಂಪಮ್ಮ, ಶಾಂತಪ್ಪ ಒಳ್ಳೆ ಮನುಷ್ಯವ್ವ. ಏನೋ ಕೆಟ್ಟಗಳಿಗೆ ಆತನ ಹಣೆಬರದಾಗ ಅದು ಬರದಾದ ಅನಬೇಕು. ಅದಕ ಚಂದವ್ವನ ಸಾವಾಸ ಮಾಡ್ಯಾನ. ಆಳೋ ಗಂಡಿಗೆ ನೂರು ಹೆಣ್ಣುಗುಳಂತ. ನೀನು ತಣ್ಣಗ ಈ ಮನ್ಯಾಗ ಮನೆ ಮುತ್ತೈದೆಯಾಗಿರು. ತಾಯಿ, ಹಂಗ ನೋಡಿದ್ರ ಚಂದವ್ವ ಎಷ್ಟಿದ್ದರೂ ಮನೆ ಹೊರಗ ಇರಬೇಕು. ಶಾಂತಪ್ಪ ಗಂಡಿಲ್ಲಂತ ಮತ್ತೊಂದು ಹೆಣ್ಣು ತಂದಿದ್ರ...? ಮಗಳ ತಾಯಾಗಿದ್ದಿ. ಬೇಕಾದಷ್ಟು ಸಂಪತ್ತಾದ. ನಿನಗೇನು ಅಂತ ವಯಸ್ಸಾಗಾವ.. ಬಸ್ವ ಕಣ್ಣು ತೆರದ್ರ... ಒಂದು ಗಂಡು ಹುಟ್ಟಿದ್ರ ಎಲ್ಲ ಸರಿ ಹೋದೀತು' ಅಂತ ತಿಳಿಸಿ ಹೇಳಿ ಸಮಾಧಾನ ಮಾಡಿದ. ಹಂಪಮ್ಮ ಅದೆಂಗೋ ನಿಶ್ಚಿತಳಾದಳು. ಶಾಂತಗೌಡುಗ ಅದೇ ಬೇಕಾಗಿತ್ತು. ಚಂದವ್ವನಲ್ಲಿಗೆ ಹೋಗಿ ಬರಾಕ ಇದ್ದ ಒಂದು ಅಳುಕೂ ಕಮ್ಮಿಯಾದಂಗಾಯ್ತು.

(ಮುಂದುವರಿಯುವುದು)

ಹಾಸ್ಯದ ಹರಿಗೋಲಾದ ಹೇರಾ ಫೇರಿ

ಸಿನಿಮಾ ವಿಮರ್ಶೆ

ಜಿ.ಎನ್.ನಾಗರಾಜ್

"ಕಿರಿಯಾಳದ ನಗನೀರಿನ ಮೇಲೆ ತಿರುಗುತ ಬರುವೇಳೆ ಕಣ್ಣೀರಿನ ಕಡಲಿನ ಪಾಲು ಹಾಸ್ಯದ ಹರಿಗೋಲು"

ತಮ್ಮ ವಿಶಿಷ್ಟ ಕನ್ನಡಾಂಗ್ಲ ಭಾಷೆಯನ್ನು ಬಳಸಿ ಕನ್ನಡದ ಜನರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದ ಟಿಪಿಕಲ್ ಟಿ.ಪಿ. ಕೈಲಾಸಂರವರ ಕಿರುಕವನ (ಕಪ್ಲೆಂಟ್)ಇದು. ಪ್ರಿಯದರ್ಶನ್ (ಕಾಲಾಪಾನಿ' ಮೊದಲಾದ ಚಿತ್ರಗಳ ನಿರ್ದೇಶಕ) ನಿರ್ದೇಶನದ ಹೇರಾಫೇರಿ ಚಿತ್ರವನ್ನು ನೋಡಿದಾಗ ಕೈಲಾಸಂರವರ ಈ ಮಾತು ನೆನಪಿಗೆ ಬರುತ್ತದೆ. ಹಾಸ್ಯದ ಮುಸುಕು ಹೊದಿಸಿ ಮುಂಬಯಿಯ, ಮುಂಬೈಗೆ ಬಂದು ಸೇರಿದ ನಿರುದ್ಯೋಗಿಗಳ ಬದುಕಿನ ನೈಜ ಚಿತ್ರಣ ನೀಡಿದೆ. ಸಾಮಾಜಿಕ ಕಾಳಜಿಯುಳ್ಳವರನ್ನು ಚಿಂತನೆಗೆ ಹಚ್ಚುತ್ತದೆ.

ಮಾಮೂಲಿ ವಾಣಿಜ್ಯ ಸಿನೆಮಾಗಳ ನಾಯಕ-ನಾಯಕಿ-ವಿಲನ್‌ಗಳ ಸೂತ್ರ ಬಿಟ್ಟ ಸಿನೆಮಾದಲ್ಲಿ ಇಬ್ಬರು ಯುವಕರು, ಒಬ್ಬ ಯುವತಿಯ ಜೀವದ ಕಥೆಯೇ ನಾಯಕ. ಹಾಗೆಂದು ಚಿತ್ರದಲ್ಲಿ ಪ್ರೇಮ, ಪ್ರಣಯ, ಹೊಡೆದಾಟ ಇಲ್ಲವೆಂದಲ್ಲ. ಅಷ್ಟೆ ಅಲ್ಲ ನೃತ್ಯವೂ ಇದೆ. ಆದರೆ ಯಾವುದೂ ಮಾಮೂಲಿ ಚಿತ್ರಗಳಂತಿರದೆ ಸಂಪೂರ್ಣ ಭಿನ್ನವಾಗಿದೆ.

ಹರ್‍ಯಾಣದ ಹಳ್ಳಿಯ ಯುವಕನೊಬ್ಬ (ಸುನಿಲ್ ಶೆಟ್ಟಿ) ಉದ್ಯೋಗವನ್ನರಸಿ ಮುಂಬಯಿಗೆ ಬರುತ್ತಾನೆ. ಅವನ ಹಣದ ಪಾಕೇಟನ್ನು ಮತ್ತೊಬ್ಬ ನಿರುದ್ಯೋಗಿ (ಅಕ್ಷಯ ಕುಮಾರ್) ಹಾರಿಸುತ್ತಾನೆ. ಅವರ ನಡುವಿನ ಹೊಡೆದಾಟದೊಂದಿಗೆ ಪಾಕೆಟ್ ಕಳೆದುಕೊಂಡವನೇ ಪಿಕ್ ಪಾಕೆಟ್ ಎಂಬ ಆರೋಪ ಹೊರಬೇಕಾದ ಮುಂಬಯಿ ಅಮಾನವೀಯ ಜಗತ್ತಿನ ದರ್ಶನದೊಂದಿಗೆ ಚಿತ್ರ ಆರಂಭವಾಗುತ್ತದೆ. ಆದರೆ ಕೊನೆಗೆ ಇವರಿಬ್ಬರು ಯುವಕರೂ ಕೂಡ ಯಾವುದೊ ಒಂದು ಮೋಟಾರ್ ಗ್ಯಾರೇಜಿನ ಮೂಲೆಯೊಂದರಲ್ಲಿ ನಿತ್ಯಜೀವದ ಯಾವುದೇ ಸೌಕರ್ಯಗಳಿಲ್ಲದೆ ದುಬಾರಿ ಬಾಡಿಗೆತೆತ್ತು ಜೀವನ ಮಾಡುವಂತಾಗುತ್ತದೆ. ಸುನಿಲ್ ಶೆಟ್ಟಿ ಬ್ಯಾಂಕ್ ಒಂದರಲ್ಲಿ ಸಂದರ್ಶನವಿತ್ತು ಬರುತ್ತಾನೆ. ಕೆಲವೇದಿನಗಳಲ್ಲಿ ಯುವತಿಯೊಬ್ಬಳು (ಟಬು-ಟಬಾಸ್ಸಮ್ ಹಾಷ್ಮ) ಸುನಿಲ್ ಶೆಟ್ಟಿಯನ್ನು ಹುಡುಕಿಕೊಂಡು ಬಂದು ಅವನನ್ನು ದಬಾಯಿಸಿ ನನಗೆ ಈ ಉದ್ಯೋಗ ಬೇಕಿಲ್ಲ ಅದನ್ನು ಈ ಯುವತಿಗೆ ಕೊಡಬಹುದು ಎಂಬ ಪತ್ರವೊಂದಕ್ಕೆ ಸಹಿಪಡೆಯುವುದಕ್ಕೆ ಪ್ರಯತ್ನಿಸುತ್ತಾಳೆ. ಸುನಿಲ್ ಶೆಟ್ಟಿ ಅದಕ್ಕೆ ನಿರಾಕರಿಸಿದಾಗ ನೋಡೋಣಾ ಈ ಮುಂಬಯಿಯಲ್ಲಿ ಹೇಗೆ ನೀನು ಉದ್ಯೋಗ ಮಾಡುತ್ತೀಯ ಎಂದು ಬೆದರಿಸಿದರೂ ಸಹಿ ಪಡೆಯುವಲ್ಲಿ ವಿಫಲಳಾಗುತ್ತಾಳೆ. ಅಕ್ಷಯ ಕುಮಾರ್ ಮೋಸದಿಂದ ಖಾಲಿಕಾಗದಕ್ಕೆ ಸುನಿಲ್ ಶೆಟ್ಟಿಯ ಸಹಿ ಪಡೆದು ಟಬುವಿಗೆ ಉದ್ಯೋಗ ದೊರಕುತ್ತದೆ. ಸುನಿಲ್ ಈ ಉದ್ಯೋಗದಿಂದ ಬರುವ ಆದಾಯದ ಭರವಸೆಯಿಂದ ಸಾಲ ಪಡೆದ ಸ್ವಗ್ರಾಮದ ರೈತನ ಮಗಳ ಮದುವೆ. ಅವನಿಗೆ ಈ ಸಾಲ ತೀರಿಸುವುದೆಂತು? ರೈತನ ಮಗಳ ಮದುವೆಸಾಗುವುದೆಂತು? ಉದ್ಯೋಗವಂತೂ ಹೋಯಿತು ಉದ್ಯೋಗಪಡೆದ ಟಬುವಿನಿಂದ ಈ ಸಾಲತೀರಿಸಲು ಹಣವನ್ನಾದರೂ ಪಡೆಯೋಣವೆಂದರೆ ಆಕೆ ತನ್ನ ಮನೆಗೆ ಆಹ್ವಾನಿಸುತ್ತಾಳೆ. ಮುದುಕಿ ತಾಯಿಯೊಬ್ಬಳೊಂದಿಗೆ ಜೀವನ ಸಾಗಿಸುತ್ತಾ ಇರುವ ಒಂದೇ ಕೋಣೆಯ ಮನೆಯಿಂದಲೂ ಹೊರದೂಡಲ್ಪಡುತ್ತಿರುವ ಅವಳ ಪಾಡು ನೋಡಿ ಕನಿಕರ ಪಡಬಹುದೇ ಹೊರತು ಹಣಬರುವ ಸಾಧ್ಯತೆ ಎಷ್ಟು ಮಾತ್ರಕ್ಕೂ ಇಲ್ಲ ಎಂಬುದು ಅರಿವಾಗುತ್ತದೆ. ಅವರ ನಡುವೆ ಒಡನಾಟ ಬೆಳೆಯುತ್ತದೆ.

ಆದರೆ ಸುನಿಲ್ ಶೆಟ್ಟಿ ರೈತನಿಗೆ ಕೊಡಬೇಕಾದ ಸಾಲಕ್ಕೇನು ಮಾಡುವುದು? ಟಬು ಮನೆ ಮಾಲೀಕನಿಗೆ ಕೊಡಬೇಕಾದ ಹಣಕ್ಕೆ? ಇದು ಸುನಿಲ್ ಶೆಟ್ಟಿಯ ಸಮಸ್ಯೆಯಾದರೆ ಅಕ್ಷಯ ಕುಮಾರ್ ತನ್ನ ತಾಯಿಗೆ ತಾನು ಕಲ್ಕತ್ತದಲ್ಲಿ ದೊಡ್ಡ ಉದ್ಯೋಗದಲ್ಲಿದ್ದೇನೆಂದು ಬಹಳ ದೊಡ್ಡ ಆಸ್ತಿವಂತನಾಗಿದ್ದೇನೆಂದು ನಂಬಿಸಿದ್ದಾನೆ. ಈ ಇಚ್ಛೆಯನ್ನು ಪೂರೈಸಿಕೊಳ್ಳಲು ಅವನಿಗೆ ಅಷ್ಟಿಷ್ಟು ಹಣ ಸಾಲದು ದೊಡ್ಡ ಪ್ರಮಾಣದ ಹಣ ಪಡೆಯಲು ಸಿದ್ಧ. ಇಂತಹ ಸನ್ನಿವೇಶದಲ್ಲಿ ಮುಂಬಯಿ ಟೆಲಿಫೋನ್ ಇಲಾಖೆಯ ತಪ್ಪಿನಿಂದ ಫೋನ್ ನಂಬರುಗಳು ಅದಲುಬದಲಾಗಿ ಒಬ್ಬ ಶ್ರೀಮಂತನ ಮೊಮ್ಮಗನನ್ನು ಕದ್ದೋಯ್ದು ಮಾಫಿಯಾ ಗುಂಪು ಹತ್ತಾರು ಲಕ್ಷ ಹಣಕ್ಕಾಗಿ ಬೆದರಿಕೆ ಹಾಕಿ ಇದರಿಂದ ಸ್ಟಾರ್ ಗ್ಯಾರೇಜಿಗೆ ಫೋನ್ ಮಾಡುತ್ತಾರೆ. ಅಕ್ಷಯ್‌ಕುಮಾರನ ಒತ್ತಾಯಕ್ಕೆ ಸುನಿಲ್ ಶೆಟ್ಟಿ ಹಾಗೂ ಗ್ಯಾರೇಜ್ ಮಾಲೀಕನು ಸೇರಿದಂತೆ ಈ ಪರಿಸ್ಥಿತಿಯ ಲಾಭ ಪಡೆದು ಹೇರಾ ಫೇರಿ (ದಗಲ್ಬಾಜಿ ಮೋಸಗಾರಿಕೆ) ಯಿಂದ ಹಣಮಾಡುವ ಯೋಜನೆ ಮಾಡುತ್ತಾರೆ. ಮಗುವಿನ ತಾತನಿಂದ ಮಾಫಿಯಾಗೂಂಡಾ ಕೇಳಿದ್ದರ ಎರಡರಷ್ಟು ಹಣಪಡೆದು ಮಾಫಿಯಾಗಳಿಂದ ಮಗುವನ್ನು ಪಡೆದು ತಾತನಿಗೊಪ್ಪಿಸುವುದು. ಈ ಮಧ್ಯೆ ಹತ್ತಾರು ಲಕ್ಷ ಹಣ ಗಳಿಸುವುದು ಇದು ಇವರ ಯೋಜನೆ. ಮುಂಬೈ ಭೂಗತ ಲೋಕದ ಗಂಧ ಗಾಳಿಯೂ ಇಲ್ಲದ ಈ ಮೂವರು ಇಂತಹ ಪರಿಸ್ಥಿತಿಯಿಂದ ಹೇಗೆ ಪಾರಾಗುತ್ತಾರೆ ಎಂಬುದೇ ಚಿತ್ರದ ಉತ್ತರಾರ್ಧದ ಕಥೆ. ಹಣವನ್ನೊಪ್ಪಿಸಿ ಮಗುವನ್ನು ಪಡೆದನಂತರ ಮಗುವಿನ ವಾರಸುದಾರರು ಇವರಲ್ಲವೆಂದು ತಿಳಿಯುವುದು ದೊಡ್ಡ ಮಾರಾಮಾರಿಯಾಗುತ್ತದೆ. ಈ ಸಂದರ್ಭದಲ್ಲಿ ಸುನಿಲಾ ಶೆಟ್ಟಿಯಿಂದ ಸಾಲ ವಸೂಲಿಮಾಡಲು ಬಂದ ರೈತ ಮತ್ತು ಅವನ ಜೊತೆ ಒಂದು ಲಾರಿ ರೈತರ ತಂಡ ತಾವು ಯಾರವಿರುದ್ಧ ಆಕ್ರೋಶವ್ಯಕ್ತಪಡಿಸಲು ಬಂದಿದ್ದರೋ ಅವನನ್ನೇ ರಕ್ಷಿಸಲು ಮುಂದಾಗುತ್ತಾರೆ. ಇದರಿಂದ ಉಂಟಾಗುವ ದೊಡ್ಡಗೊಂದಲ ಕೊನೆಗೆ ಈ ಮೂವರೂ ಹಣದ ಸಮೇತ ಪಾರಾದರೂ ಹಣದ ಸೂಟ್‌ಕೇಸ್ ಇಟ್ಟುಕೊಂಡಿದ್ದ ಮತ್ತು ಯಾರಿಗೆ ಬೇಕಾದರೂ ಮೋಸ ಮಾಡಿ ಹಣ ಮಾಡುವ ಅಕ್ಷಯ ಕುಮಾರನ ಮೇಲಿನ ಅಪನಂಬಿಕೆಯಿಂದ ಪೊಲೀಸರಿಗೆ ತಾವೇ ದೂರು ಮಾಡಿ ಸಿಕ್ಕಿ ಹಾಕಿಕೊಳ್ಳುತ್ತಾರೆ. ಮಗುವಿನ ಶ್ರೀಮಂತ ತಾತ ತಾನೇ ಅವರಿಗೆ ಹಣ ಇನಾಮುನೀಡಿದ್ದೇನೆಂದು ಘೋಷಿಸಿ ಪಾರುಮಾಡುತ್ತಾನೆ.

ಹೇರಾ ಫೆರಿಯಿಂದ ಹಣ ಮಾಡಬೇಕೆಂದು ಅದರ ಗಂಧಗಾಳಿ ತಿಳಿಯದ ಮೂವರು ನಮ್ಮ ನಿಮ್ಮಂತಹ ಸಾಮಾನ್ಯರು ಹೊರಡುವುದರಿಂದ ಉಂಟಾಗುವ ಸರಪಳಿಕ್ರಿಯೆ ಹಾಸ್ಯವನ್ನುಕ್ಕಿಸುತ್ತದೆ. ಆದರೆ ಅದೇ ಸಮಯದಲ್ಲಿ ಇಂತಹ ಪರಿಸ್ಥಿತಿಗೆ ನೂಕುವ ನಿರುದ್ಯೋಗ, ಬಡತನ, ದುಡ್ಡೊಂದೇ ಕಣ್ಣಿಗೆ ಕಾಣುವ ಮುಂಬಯಿಯ ಜೀವನ ಪ್ರೇಕ್ಷಕರನ್ನು ಕಾಡುತ್ತದೆ. ಹೀಗೆ ಸಿನಿಮೀಯವಾದ ಘಟನೆಗಳು ಮತ್ತು ಹಾಸ್ಯದ ಮೂಲಕ ಜೀವನದ ದಾರುಣತೆಯನ್ನು ಚಿತ್ರ ಬಿಚ್ಚಿಡುತ್ತದೆ.

ಈ ಚಿತ್ರದಲ್ಲಿ ತಾನೇ ಎಲ್ಲ ದುಷ್ಟರನ್ನು ಸದೆಬಡಿದು ನಾಯಕಿಯನ್ನು ರಕ್ಷಿಸುತ್ತೇನೆನ್ನುವ ಅತಿ ಮಾನವ ನಾಯಕ ಇಲ್ಲ. ನಾಯಕರನ್ನು ಹೆಸರಿಸಲೇಬೇಕೆಂದರೆ ಹಣಪಡೆಯುವ ಸಂಚು ಮಾಡಿದ ಮೂವರೂ ಚಿತ್ರದ ನಾಯಕರೆಂದೇ ಹೇಳಬೇಕು. ಹಾಗೆಯೇ ಚಿತ್ರಕ್ಕೆ ನಾಯಕಿಯೂ ಇಲ್ಲ. ಟಬು ಚಿತ್ರದಲ್ಲಿದ್ದರೂ ಆಕೆಯ ಕತೆ ಒಂದು ಸೈಡ್ ಸ್ಟೋರಿಯರೀತಿಯೇ ಇದೆ. ಸುನಿಲ್ ಮತ್ತು ಟಬು ಆತ್ಮೀಯರಾಗುತ್ತಾರೆ ಎಂಬುದನ್ನು ಪ್ರೇಕ್ಷಕರ ಮುಂದಿಟ್ಟರೂ ಎಲ್ಲಿಯೂ ಅವರು ಪ್ರೀತಿ, ಪ್ರೇಮದ ಬಗ್ಗೆ ಉದ್ದುದ್ದ ಭಾಷಣ, ಘೋಷಣೆ ಪ್ರತಿಜ್ಞೆ ಮಾಡುವುದಿರಲಿ ಒಂದೇ ಒಂದು ಮರಸುತ್ತುವ ಹಾಡು, ಕುಣಿತವೂ ಇಲ್ಲ. ಇವರೆಂತಹ ನಾಯಕ-ನಾಯಕಿಯರು. ಇನ್ನು ಖಳನಾಯಕನೋ ಅವನು ನಾಯಕನಿಗಾಗಲಿ, ನಾಯಕೀಗಾಗಲೀ ಯಾವುದೇ ಆಪತ್ತು ಬೆದರಿಕೆ ಒಡ್ಡಿದವನಲ್ಲ. ತನ್ನಷ್ಟಕ್ಕೆ ತಾನು ಮಾಫಿಯ ದಂಧೆ ನಡೆಸುವವನ ಕಾಲಿಗೆ ಇವರೇ ಹೋಗಿ ತೊಡರಿ ಬಿದ್ದವರು. ಹಾಗೆ ಸುನಿಲ್ ಶೆಟ್ಟಿ ಸಿಕ್ಕಿಬಿದ್ದಾಗಲೂ ಅಲ್ಲಿಗೆ ಅವನ ಸ್ನೇಹಿತೆಯ ಪ್ರವೇಶವಾಗಲಿ ಗೊಳಾಟಗಳಾಗಲೀ ಇಲ್ಲ ಹಾಗಾದರೆ.

ಹಾಡು-ಕುಣಿತಗಳೇ ಇಲ್ಲವೇ? ಮೂರು ಹಾಡುಗಳಿವೆ. ಅದರಲ್ಲಿ ಒಂದು ಮಾತ್ರ ಚಿತ್ರಕ್ಕೆ ನೇರವಾಗಿ ಸಂಬಂಧಿಸಿದ್ದು. ಈ ಹಾಡಿನ ಪಾತ್ರಧಾರಿಗಳು ಮೂವರೂ ಸಂಚುಗಾರರು ಮತ್ತವರ ಸಿರಿಯ ಕನಸು ಹೊರತು ಅದರಲ್ಲಿ ನಟಿಯ ಸುಳಿವೇ ಇಲ್ಲ. ಇನ್ನೆರಡು ಹಾಡುಗಳಲ್ಲಿ ಒಂದು ಚಿತ್ರ ಆರಂಭವಾಗುವುದಕ್ಕೆ ಮೊದಲೇ ತೋರಿಸಿ ಆ ಪಾತ್ರಧಾರಿಗಳನ್ನು ಅಲ್ಲಿಗೇ ಬಿಟ್ಟಿದ್ದಾರೆ. ಮತ್ತೊಂದು ಹಾಡು ಒಂದು ಕ್ಲಬ್‌ನೃತ್ಯಕ್ಕೆ ಸಂಬಂಧಿಸಿದ್ದು. ಇವೆರಡನ್ನೂ ಯಾವುದೇ ಕಾರಣವೂ ಇಲ್ಲದೆ ತುರುಕಲಾಗಿದೆಯಷ್ಟೆ. ಆದರೆ ಕ್ಲಬ್ ನೃತ್ಯದ ನಟೀಮಣಿಯ ಬಡತನವೇ ಆದಂಥಗೆ ಕಾರಣ ಎನ್ನುವುದನ್ನು ಸ್ಪಷ್ಟವಾಗಿ ತೋರಿಸಿದೆ.

ಇನ್ನು ನಟನೆಯ ವಿಷಯದಲ್ಲಿ ಸ್ಟಾರ್ ಗ್ಯಾರೇಜ್‌ನ ಮಾಲೀಕನ ಪಾತ್ರಧಾರಿ ಉತ್ತಮವಾಗಿ ನಟಿಸಿದ್ದಾರೆ. ಟಬು ನಟನೆಕೂಡ ಉತ್ತಮವಾಗಿದೆ. ಆದರೆ ನಟನೆಗಾಗಿ ಹಲವು ಪ್ರಶಸ್ತಿ ಪಡೆದಿರುವ ಆಕೆಯ ಸಾಮರ್ಥ್ಯಕ್ಕೆ ತಕ್ಕ ಅವಕಾಶ ದೊರೆತಿಲ್ಲ. ಒಟ್ಟಿನಲ್ಲಿ ವಾಣಿಜ್ಯ ಚಲನಚಿತ್ರವೇ ಆದರೂ ತೀರಾವಿಭಿನ್ನರೀತಿಯ, ಜೀವನದ ಕಟುವಾಸ್ತವವನ್ನು ಬಿಂಬಿಸುವ ಚಿತ್ರ ಹೇರಾಫೇರಿ! ಹೀಗಾಗಿ ಪ್ರಗತಿಪರರೆಲ್ಲರೂ ನೋಡಬೇಕಾದ ಬೆಂಬಲಿಸಬೇಕಾದ ಚಿತ್ರ.

ಡಿವೈಎಫ್ಐ ಸಮ್ಮೇಳನ

ಪುಟ 5 ರಿಂದ

ದೇಶದ ಜನತೆಯ ಬದುಕಿನ ಮೇಲೆ ಹಲವು ರೀತಿಯ ಪರಿಣಾಮಗಳು ಬೀರಲಿದೆ. ಯಾವುದೇ ದೇಶ ಮುಕ್ತ ಮಾರುಕಟ್ಟೆಗೆ ತನ್ನ ಬಾಗಿಲನ್ನು ತೆರೆಯಿತೆಂದರೆ ಅದು ಪುನ ಅಸ್ಥಿತ್ವವನ್ನು ಕಳೆದುಕೊಂಡಾಂತಾಗುತ್ತದೆ. ಯಾಕೆಂದರೆ ಅಲ್ಲಿ ಶ್ರೀಮಂತ ದೂಡ್ಡ ರಾಷ್ಟ್ರಗಳದ್ದೆ ಪಾಡಿತ್ಯ ಇರುತ್ತದೆ. ಎಂದು ಎಚ್ಚರಿಸಿದರು.

ಮುಂದುವರೆದು ಮಾತನಾಡುತ್ತಾ ಜಗತ್ತಿನಲ್ಲಿ ಶೇ. 20% ಜನರಿರುವ ಶ್ರೀಮಂತ ರಾಷ್ಟ್ರಗಳ ಜಗತ್ತಿನ ಸೇ 62% ಸಂಪನ್ಮೂಲಗಳನ್ನು ಒಳಗೆ ಲೂಟಿಮಾಡುತ್ತಿವೆ. ಪ್ರಪಂಚದಲ್ಲಿ ಮಾನವ ಅಭಿವೃದ್ಧಿ ಮೀಸಲಾಗಿರಬೇಕಾದ ವಿಚಾರವಂತ ಮೇಲೆ ಶೇ. 62% ಸಂಪತ್ತನ್ನು ಅನುಭವಿಸುವ ದರೆಗಳ ಅದಿಪತ್ಯ ಹೊಂದಿರುವುದು ದುರ ದೃಷ್ಟದ ಸಂಗತಿಯಾಗಿದೆ. ಹೀಗಾಗಿ ಇಡೀ ವಿಶ್ವವನ್ನು ನಿಯಂತ್ರಣ ಮಾಡುವಂತಹ ಶಕ್ತಿಗಳೇ ಬಡ ರಾಷ್ಟ್ರಗಳನ್ನು ಶೋಷಣೆ ಮಾಡುತ್ತಿವೆ. ಎಂದವರು ತಿಳಿಸಿದರು. ಹೀಗಾಗಿ ಎಲ್ಲ ಶ್ರೀಮಂತ ದೇಶಗಳ ಬಡ ದೇಶಗಳನ್ನು ಮತ್ತು ಮಾರುಕಟ್ಟೆಯ ಹೆಸರಲ್ಲಿ ಸುಲಿಗೆ ಮಾಡಲು WTO ನಂತಹ ಕ್ಲಬ್‌ಗಳಿಗೆ ಸದಸ್ಯರಾಗಬೇಕೆಂದು ಸಿ.ಟಿ.ಬಿ.ಟಿ ಅಂತಹ ಕಾನೂನಿಗಳಿಗೆಂ ಸಹಿ ಹಾಕಬೇಕೆಂದು ಒತ್ತಾಯಿಸುತ್ತಿವೆ. ಎಂದರು.


ಜಗತ್ತಿನಲ್ಲಿ ಚೀನಾ ದೇಶವು ಎಲ್ಲಾ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ದೇಶಗಳಿಂದ ತನ್ನ ಸ್ಥಿರ ಆರ್ಥಿಕತೆಯನ್ನು ಕಾಯ್ದುಕೊಂಡಿದೆ ಮಾತ್ರವಲ್ಲ ಎಲ್ಲಾ ರಂಗಗಳಲ್ಲೂ ಸವಾಲಾಗಿ ನಿಂತಿದೆ. ಆದೇಶವು ತನ್ನ ಅರ್ಥಿಕತೆಯನ್ನು ಸಮರ್ಥವಾಗಿ ನಿಭಾಯಿಸಿದ ಪರಿಣಾಮವಾಗಿ 10 ಪಟ್ಟು ತನ್ನ ರಾಷ್ಟ್ರ ಪ್ರಮಾಣ ಹೆಚ್ಚಿಸಿಕೊಂಡು ಮಾಸಿಕ 120 ಬಿಲಿಯನ್ ಡಾಲರ್ ಹಣವನ್ನು ವಿದೇಶಿ ವಿನಿಮಯದಿಂದ ಗಳಿಸುತ್ತಿದೆ. ಎಂದರು.

1990 ಪೂರ್ವದಲ್ಲಿ ಬಾರತದಲ್ಲೂ ಜಾರಿಗೆ ಮಾಡಲಾದ ಜವಳಿ ನೀತಿಯ ಪರಿಣಾಮವಾಗಿ ಲಕ್ಷಾಂತರ ಕಾರ್ಖಾನೆಗಳು ರೋಗಗ್ರಸ್ತವಾಗಿ ಮುಚ್ಚಹೋದವು. 1990 ನಂತರ ಬಂದ ಅರ್ಥಿಕ ನೀತಿಗಳು ಜನತೆಯ ಬದುಕನ್ನು ನಾಶ ಮಾಡ ಹೊರಟಿವೆ ಇದು ವಿಶೇಷವಾಗಿ ಯುವಜನತೆಯ ಭವಿಷ್ಯವನ್ನು ಹಾಳುಗೆಡವುತ್ತಿದೆ. ಇದರ ವಿರುದ್ಧ ಜಗತ್ತಿನಲ್ಲಿ ಎಲ್ಲಾ ದೇಶಗಳ ಜನರು ಬಿರುಸಾಗಿ ಹೊರಾಟ ನಡೆಸುವ ಅವಶ್ಯಕತೆ ಈಗ ಅನಿವಾರ್ಯವಾಗಿದೆ ಎಂದರು.

ನೂತನ ಕೇಂದ್ರ ಸಮಿತಿ ಅಯ್ಕೆ:

ಸಮ್ಮೇಳನವು ಒಟ್ಟು 71 ಸದಸ್ಯರುಳ್ಳ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿತು. ಕೇಂದ್ರ ಸಮಿತಿ ಸಭೆ ಸೇರಿ ಒಟ್ಟು 17 ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ಕಾ॥ ಎನ್.ಎನ್. ಕೃಷ್ಣದಾಸ್ ಕಾ॥ ಮಹ್ಮದ್ ಸಲೀಂ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯಾಗಿ ಪುನರಾಯ್ಕೆ ಗೊಂಡರು

ಕರ್ನಾಟಕ ದಿಂದ. ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷರಾದ ಶಾಂತಾರಾಂ. ಎಸ್. ನಾಯಕ ಕಾರ್ಯದರ್ಶಿ ಕೆ. ಮಹಾಂತೇಶ್ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆಗೊಂಡರು.



PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG(2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor: G.N. NAGARAJ